ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಏಪ್ರಿಲ್ 30, 2008 ರೂ. 12/-



ಶಿಕಾರಿಪುರದಲ್ಲಿ ಮೈತ್ರಾದೇವಿಯ ಪ್ರೇತಾತ್ಮ

ಡ್ಡಿ ಬಿಚ್ಚಿಟ್ಟ ಸತ್ಯಗಳು!



ಣಿ ರೆಡ್ಡಿಗಳ ೇಡುಗಾಲ ಪ್ರಾರಂಭ



ದಲಿತ ದ್ರೋಹಿ ಭರಣಿ

ಚುನಾವಣಾ ಚಮಕ್

ಚಿಕ್ಕಮಗಳೂರು, ಚಾಮರಾಜನಗರ, ಜೇವರ್ಗಿ



ಸೀರೆ ಬಿಚ್ಚಿದ ರೇಣುಕಾಚಾರಿ



ಗುಜರಾತನ್ನು ಮರೆತಿರಾ ರೇವಣಸಿದ್ದಯ್ಯ?




ಆರ್.ವಿ. ಹರೀಶ್ ಎಂಬ ನತದೃಷ್ಟನ ಕೊನೆ ಕಾಲಗ



ಗಂಟುಮೂಟೆ ಕಟ್ಟಲಿರುವ ಸಿ.ಟಿ. ರವಿ



ಶಿರಸಿಗೆ ಕಾಗೇರಿ ಬರುತ್ತಿದ್ದಾನೆ ಎಚ್ಚರಿಕೆ!



ಪ್ರಜಾತಂತ್ರ: ನೇಪಾಳದ ಮಾದರಿ ಮತ್ತು ಭಾರತದ ಮಾ'ದರಿ'

ಚಾರ್ವಾಕ
ಶಿವಸುಂದರ್

ಪಕ್ಕದ ನೇಪಾಳದಲ್ಲಿ ಕ್ರಾಂತಿಯೊಂದು ನಡೆದಿದೆ, ನಡೆಯುತ್ತಿದೆ, ಮುಂದುವರೆಯಲಿದೆ. ಈ ಕ್ರಾಂತಿಯ ಸ್ವರೂಪವೇನು ಮತ್ತು ಅದು ಭಾರತಕ್ಕೆ ಕಲಿಸುವ ಪಾಠಗಳೇನು ಎಂಬ ಬಗ್ಗೆ ನಮ್ಮ ಮಾಧ್ಯಮಗಳಂತೂ ದಿವ್ಯ ನಿರ್ಲಕ್ಷ್ಯ ತಾಳಿವೆ. ಭಾರತ ದೇಶದ ಸಂಸದೀಯ ಪ್ರಜಾತಂತ್ರದ ಬಗ್ಗೆ ಇನ್ನಿಲ್ಲದ ಹೆಮ್ಮೆ ಪಡುವ ನಮ್ಮ ಮೂಲಭೂತವಾದಿ ಪ್ರಜಾತಂತ್ರಕೋರ ಪಂಡಿತರಂತೂ ಇದರ ಬಗ್ಗೆ ತಮ್ಮ ಯಾವುದೇ ಚಿಂತನಾಲಹರಿಯನ್ನೂ ಹರಿಸದೇ ಮೌನಕ್ಕೆ ಶರಣಾಗಿಬಿಟ್ಟಿದ್ದಾರೆ! ಅಲ್ಲಿ ಅರಮನೆಯಲ್ಲಿ, ಇಲ್ಲಿ ಹುಂಗಿನ ಮನೆಯಲ್ಲಿ ಅವಿತುಕೊಂಡಿರುವ ಪ್ರಜಾತಂತ್ರವಾದಿಗಳು, ಪ್ರಜಾತಂತ್ರವನ್ನು ಅರಮನೆಯ ಸಂಕೋಲೆಯಿಂದ ಬಿಡಿಸಿ ಗುಡಿಸಲಿಗೆ ತರುವ ಪ್ರಜಾತಂತ್ರದ ಕಾಯಕದಲ್ಲಿ ಮಾವೋವಾದಿಗಳು ತೊಡಗುತ್ತಿದ್ದಂತೆ ಭಯಭೀತರಾದರು. ಅಷ್ಟೇ ಅಲ್ಲ, ಪ್ರಜಾತಂತ್ರದ ತತ್ವಗಳನ್ನೆಲ್ಲಾ ಗಾಳಿಗೆ ತೂರುತ್ತಾ ರಾಜಸತ್ತೆಯ ಪರವಾಗಿ ನಿಂತುಬಿಟ್ಟರು.

ಭಾರತವಂತೂ ಮೊದಲಿಂದಲೂ ನೇಪಾಳದ ಅರಮನೆಯ ಕಾವಲು ನಾಯಿಯಂತಿರುವ ಗಿರಿಜಾ ಪ್ರಸಾದ್ ಕೊಯಿರಾಲನ ನೇಪಾಳಿ ಕಾಂಗ್ರೆಸ್ ಪಕ್ಷವನ್ನೇ ಬೆಂಬಲಿಸುತ್ತಾ ಬಂದಿತ್ತು. ನೇಪಾಳದಲ್ಲಿ ಚುನಾವಣೆ ನಡೆಯುವ ಕೆಲವು ದಿನಗಳ ಮುನ್ನ ನೇಪಾಳಕ್ಕೆ ಭೇಟಿ ನೀಡಿದ್ದ ಭಾರತದ ವಿದೇಶಾಂಗ ಮಂತ್ರಿ, ಎಲ್ಲಾ ರಾಜತಾಂತ್ರಿಕ ನಿಯಮಗಳನ್ನೂ ಗಾಳಿಗೆ ತೂರಿ ತಮ್ಮ ಸಂಪೂರ್ಣ ಬೆಂಬಲ ಕೊಯಿರಾಲಗೆಂದು ಘೋಷಿಸಿದ್ದರು. (ಈ ರಾಯಲ್(ರಾಜ) ಮತ್ತು ಕೊ-ರಾಯಲ್‌ಗಳೆ(ಕೊಯಿರಾಲಗಳು) ನೇಪಾಳದಲ್ಲಿ ಪ್ರಜಾಸತ್ತೆ ಬೇರು ಬಿಡದಂತೆ ತಡೆ ಹಿಡಿದಿದ್ದ ಊಳಿಗಮಾನ್ಯ ಶಕ್ತಿಗಳಾಗಿದ್ದವು.) ಪ್ರಪಂಚದಲ್ಲಿ ಪ್ರಜಾತಂತ್ರದ ರಕ್ಷಣೆಯೇ ತಮ್ಮ ಧ್ಯೇಯವೆಂದು ಕಂಡ ಕಂಡ ದೇಶಗಳ ಮೇಲೆ ದಾಳಿ ಮಾಡುವ ಅಮೆರಿಕ ಕೂಡ ನೇಪಾಳದಲ್ಲಿ ಬೆಂಬಲಿಸಿದ್ದು ರಾಜಸತ್ತೆಯನ್ನೇ ಹೊರತು ಪ್ರಜಾತಾಂತ್ರಿಕ ಶಕ್ತಿಗಳನ್ನಲ್ಲ, ಬದಲಿಗೆ ನೇಪಾಳದ ಚುನಾವಣೆಯನ್ನು ಹಾಳುಗೆಡವಲು ಭಾರತದ ಜೊತೆ ಸೇರಿ ಎಲ್ಲಾ ಕುತಂತ್ರವನ್ನೂ ನಡೆಸಿತ್ತು.

ಪ್ರಪಂಚದ ಈ ಎಲ್ಲಾ ಪೊಳ್ಳು ಪ್ರಜಾತಂತ್ರವಾದಿಗಳ ಮಸಲತ್ತನ್ನು ಭಗ್ನಗೊಳಿಸಿ ನೇಪಾಳದ ಜನತೆ ಈವರೆಗೆ ಪ್ರಜಾತಂತ್ರದ ಹೆಸರಲ್ಲಿ ತಮ್ಮನ್ನು ರಾಜನ ಊಳಿಗಕ್ಕೆ ಇಟ್ಟಿದ್ದ ಎಲ್ಲಾ ಪಕ್ಷಗಳನ್ನು ತಿರಸ್ಕರಿಸಿ ಮಾವೋವಾದಿಗಳನ್ನು ಅತ್ಯಧಿಕ ಬಹುಮತದಿಂದ ಗೆಲ್ಲಿಸುತ್ತಿದ್ದಾರೆ. ರಾಜಸತ್ತೆಯ ವಿರುದ್ಧ ಸಾರ್ವಭೌಮ ಗಣರಾಜ್ಯ ಸ್ಥಾಪನೆಯೇ ಪ್ರಜಾತಂತ್ರದ ಸಾರ ಎನ್ನುವುದಾದರೆ ಮಾವೋವಾದಿಗಳನ್ನು ಗೆಲ್ಲಿಸುವುದರ ಮೂಲಕ ನೇಪಾಳದ ಜನತೆ ಮಾಡಿರುವುದೂ ಅದನ್ನೇ! ಹಾಗಿದ್ದಲ್ಲಿ ಸಂಸದೀಯ ಪ್ರಜಾಸತ್ತೆಯೇ ಪ್ರಜಾತಂತ್ರದ ಅತ್ಯುನ್ನತ ರೂಪವೆಂದು ಪ್ರತಿಪಾದಿಸುವ ಭಾರತದ ಪತ್ರಿಕೆಗಳು, ಪಕ್ಷಗಳು ಮತ್ತು 'ಪ್ರಜಾತಂತ್ರವಾದಿಗಳು' ಮಾವೋವಾದಿಗಳ ವಿಜಯದಿಂದ ಭಯಪಡುತ್ತಿರುವುದೇಕೆ? ಈ ಎಲ್ಲಾ 'ಪ್ರಜಾತಂತ್ರ' ರಾಷ್ಟ್ರಗಳ ಪ್ರಕಾರ ಒಂದು ಪ್ರಜಾತಂತ್ರದಲ್ಲಿ ಪ್ರಜೆಗಳು ಚುನಾವಣೆಯಲ್ಲಿ ನೀಡುವ ತೀರ್ಪೇ ಅಂತಿಮ. ಹಾಗಿದ್ದಲ್ಲಿ ಈ ಪ್ರಜಾತಂತ್ರವಾದಿಗಳು ಅದೇ ನಿಯಮವನ್ನು ನೇಪಾಳಕ್ಕೆ ಅನ್ವಯಿಸಲು ಹಿಂಜರಿಯುತ್ತಿರುವುದೇಕೆ? ಇವರು ಬಣ್ಣಿಸುವಂತೆ ಮಾವೋವಾದಿಗಳು ಉಗ್ರ ಭಯೋತ್ಪಾದಕರೇ ಆಗಿದ್ದಲ್ಲಿ ನೇಪಾಳದ ಜನತೆ ಇತರ ಎಲ್ಲಾ 'ಸಜ್ಜನ ಪ್ರಜಾತಂತ್ರವಾದಿಗಳನ್ನು' ನಂಬದೆ ಭಯೋತ್ಪಾದಕರಿಗೆ ಓಟು ಹಾಕಿದ್ದೇಕೆ?

ಇದಕ್ಕೆ ಕಾರಣ ಈ ಚುನಾವಣೆ ಮತ್ತದರ ಫಲಿತಾಂಶಗಳು ರಾಜಸತ್ತೆಯನ್ನು ಮಾತ್ರವಲ್ಲದೆ ಹುಸಿ ಪ್ರಜಾತಂತ್ರವನ್ನು ಸಹ ಬಯಲುಗೊಳಿಸಲಿದೆ. ಜೊತೆಗೆ ಜನರೇ ನಿಜವಾದ ಪ್ರಭುಗಳಾಗುವ ನಿಜವಾದ ಪ್ರಜಾತಾಂತ್ರಿಕ ನೇಪಾಳವನ್ನು ಸೃಷ್ಟಿಸಲಿದೆ. ಈ ಹೊಸ ನೇಪಾಳವನ್ನು ಇಡೀ ನೇಪಾಳದ ಜನತೆ-ಭಾರತದಂತೆ ಕೇವಲ ಸಾಂಕೇತಿಕವಾಗಿ ಮಾತ್ರವಲ್ಲದೆ- ತಮ್ಮ ನಿಜವಾದ ಪಾಲುದಾರಿಕೆಯೊಂದಿಗೆ ಕಟ್ಟಲಿದ್ದಾರೆ.

ಹೌದು. ನೇಪಾಳದಲ್ಲಿ ನಡೆದ ಚುನಾವಣೆಯ ಮಹತ್ವವಿರುವುದು ಈ ಪರಿಣಾಮದಲ್ಲೇ! ಕಳೆದ ಅರವತ್ತು ವರ್ಷಗಳಿಂದ ನೇಪಾಳದ ಜನತೆ ಕನಸು ಕಾಣುತ್ತಿದ್ದ ಪ್ರಜಾತಂತ್ರ ಅಂದರೆ ನಿಜವಾದ ಅರ್ಥದಲ್ಲಿ "ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ" ಇರುವ ಪ್ರಜಾತಂತ್ರ ಇಂದು ಕೈಗೂಡುತ್ತಿದೆ. ನೂರಾರು ವರ್ಷಗಳ ಅರಸೊತ್ತಿಗೆ ಮತ್ತು ಕಳೆದೆರಡು ದಶಕದಲ್ಲಿ ಅರಮನೆಯ ನೆರಳಲ್ಲೇ ತಗ್ಗಿ ಬಗ್ಗಿ ನಡೆದ ಅಣಕು ಪ್ರಜಾಸತ್ತೆ ನೇಪಾಳದ ಜನತೆಯ ಬದುಕನ್ನು ಛಿದ್ರಗೊಳಿಸಿತ್ತು ಮತ್ತು ದೇಶವನ್ನು ಭಾರತದ ಮತ್ತು ಅಮೆರಿಕದ ಶ್ರೀಮಂತರ ಲೂಟಿಗೆ ಒಳಗಾಗಿಸಿತ್ತು. ಅದರಲ್ಲೂ ಪ್ರಾತಿನಿಧಿಕ ಪ್ರಜಾತಂತ್ರದ ಹೆಸರಲ್ಲಿ ಅಧಿಕಾರ ನಡೆಸಿದ ನೇಪಾಳಿ ಕಾಂಗ್ರೆಸ್ ಮತ್ತು ನಂತರ ಸಮಾಜವಾದದ ಹೆಸರಲ್ಲಿ ಜನತೆಯನ್ನು ಮತ್ತೆ ಭ್ರಾಂತಿಗೆ ದೂಡಿ ನೇಪಾಳಿ ಕಾಂಗ್ರೆಸ್ಸಿನೊಡನೆ ಕೈಗೂಡಿಸಿದ -ನಮ್ಮ ಸಿಪಿಎಂ ತರದ ಪಕ್ಷವಾದ-ಸಿಪಿಎನ್(ಯು.ಎಂ.ಎಲ್) ಪಕ್ಷವು ಜನರಿಗೆ ದ್ರೋಹವನ್ನೇ ಬಗೆಯುತ್ತಾ ಬಂದವು.

ಜನತೆ ನಿಜವಾದ ಪ್ರಜಾತಂತ್ರಕ್ಕೆ ಹಾತೊರೆಯುತ್ತಿರುವಾಗ ಮತ್ತು ಅದನ್ನು ರಾಜಸತ್ತೆ-ಭಾರತ-ಅಮೆರಿಕ ಬೆಂಬಲಿತ ಪಕ್ಷಗಳು ತಡೆಗಟ್ಟುತ್ತಾ ರಾಜನ, ಭಾರತದ ಶ್ರೀಮಂತರ ಮತ್ತು ಅಮೆರಿಕದಂತ ವಿದೇಶಿಯರ ಸೇವೆ ಮಾಡುತ್ತಿದ್ದ ಸಂದರ್ಭದಲ್ಲಿ ನೇಪಾಳದ ಮಾವೋವಾದಿ ಪಕ್ಷ (ನೇಪಾಳ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ)) ಜನತೆಯ ನಿಜವಾದ ಆಶಾಕಿರಣವಾಗಿ ಸಶಸ್ತ್ರ ಹೋರಾಟ ಕಟ್ಟಲು ಪ್ರಾರಂಭಿಸಿತು. ಗ್ರಾಮೀಣ ನೇಪಾಳದಲ್ಲಿ ಊಳಿಗಮಾನ್ಯ ವರ್ಗಗಳ ರಕ್ಷಣೆಗಿದ್ದ ಸೇನಾ ಪಡೆಗಳ ವಿರುದ್ಧ ಜನತಾ ಸೈನ್ಯವನ್ನು ಕಟ್ಟಿಕೊಂಡು ಸೆಣೆಸುತ್ತಾ ಹತ್ತು ವರ್ಷಗಳಲ್ಲಿ ಗ್ರಾಮೀಣ ನೇಪಾಳದಲ್ಲಿ ಊಳಿಗಮಾನ್ಯ ವರ್ಗಗಳನ್ನು ನಾಶಗೊಳಿಸಿ ಬಡ ರೈತಾಪಿಗೆ ಭೂಮಿಯನ್ನು ಮತ್ತು ಅಧಿಕಾರವನ್ನು ಹಸ್ತಾಂತರಗೊಳಿಸಿ ನಿಜವಾದ ಅರ್ಥದಲ್ಲಿ ಪ್ರಜಾತಂತ್ರವನ್ನು ಸ್ಥಾಪಿಸುವೆಡೆ ಹೆಜ್ಜೆ ಹಾಕಿತು. ಆದರೆ ತಮ್ಮ ಕೈಯಿಂದ ಅಧಿಕಾರ ಜಾರಿ ಹೋಗುತ್ತಿರುವುದನ್ನು ಗ್ರಹಿಸಿದ ರಾಜ ಮತ್ತು ಭಾರತದ ಮತ್ತು ಅಮೆರಿಕದ ಉದ್ಯಮಪತಿ ವರ್ಗಗಳು ಮಾವೋವಾದಿಗಳನ್ನು ಕಗ್ಗೊಲೆ ಮಾಡುತ್ತಾ ರಾಜಸತ್ತೆಯ ರಕ್ಷಣೆಗೆ ನಿಂತವು.

ಪ್ರಜಾತಂತ್ರಕ್ಕಾಗಿ ಶಸ್ತ್ರ ಹಿಡಿದ ಮಾವೋವಾದಿಗಳ ಪ್ರಜಾಸೈನ್ಯ ಒಂದೆಡೆ ಮತ್ತು ಅಮೆರಿಕದ ಬೆಂಬಲದೊಂದಿಗೆ ರಾಜಸತ್ತೆಯ ರಕ್ಷಣೆಗೆ ನಿಂತ ಅರಮನೆಯ ಸೈನ್ಯ ಮತ್ತೊಂದೆಡೆ, ಒಂದು ದಶಕಗಳ ಕಾಲ ಯುದ್ಧದಲ್ಲಿ ತೊಡಗಿದ್ದವು. ಒಂದು ಅಂದಾಜಿನ ಪ್ರಕಾರ ಕಳೆದ ಹತ್ತು ವರ್ಷದಲ್ಲಿ 15,000ಕ್ಕೂ ಹೆಚ್ಚು ಪ್ರಜೆಗಳನ್ನು ಮತ್ತು ಪ್ರಜಾಯೋಧರನ್ನು ರಾಜಸತ್ತೆ ಬಲಿ ತೆಗೆದುಕೊಂಡಿತು. ಮಾತ್ರವಲ್ಲ ರಾಜ ಬೀರೇಂದ್ರ ನೇಪಾಳದ ಮೇಲೆ ಅಮೆರಿಕದ ಅಧಿಪತ್ಯವನ್ನು ವಿರೋಧಿಸುತ್ತಾ ನೇಪಾಳದ ಸಾರ್ವಭೌಮತೆ ಕಾಪಾಡಿಕೊಳ್ಳಲು

(14ನೇ ಪುಟಕ್ಕೆ)

ಎಟುಕದ ದ್ರಾಕ್ಷಿ ಹುಳಿ ಎನ್ನುವವರು

"ನೇಪಾಳದ ಜನತೆ ಹೆದರಿಕೆಯಿಂದಲೇ ಓಟು ಹಾಕಿರಬಹುದು..ಅಥವಾ ಮಾವೋವಾದಿಗಳು ಮತ್ತೆ ಕಾಡಿಗೆ ಸೇರಿ ತಮ್ಮ ನೆಮ್ಮದಿ ಹಾಳು ಮಾಡದಿರಲೆಂದು ಅವರಿಗೆ ಓಟು ಹಾಕಿರಬಹುದು..ಅಥವಾ..."


-ಕನಕ್ ಮಣಿ ದೀಕ್ಷಿತ್, ನೇಪಾಳ ಮಾವೋವಾದಿಗಳಿಗಿರುವ ಜನಬೆಂಬಲವನ್ನು ಅರಗಿಸಿಕೊಳ್ಳಲಾಗದಿರುವ ನೇಪಾಳಿ ಹಿರಿಯ ಪತ್ರಕರ್ತ


ಕೊಟ್ಟಿದ್ದೋ? ಕಿತ್ತುಕೊಂಡಿದ್ದೋ?


"ವಾರ್ಷಿಕ ಆದಾಯ 2.5 ಲಕ್ಷ ರೂ.ಗಳಿಗಿಂತ ಕಡಿಮೆ ಇರುವ ಯಾವ ಕುಟುಂಬ ತಾನೆ ಐಐಎಂಗಳ ವಾರ್ಷಿಕ 3.5 ಲಕ್ಷ ರೂ.ಗಳ ಶುಲ್ಕವನ್ನು ಭರಿಸಲು ಸಾಧ್ಯ?"

-ವೇಳಪಲ್ಲಿ ನಟೇಸನ್, ಕೇರಳದ ಹಿಂದುಳಿದ ವರ್ಗದ ನಾಯಕ

No Comments







"ಕನ್ನಡಿಗರೇ ತಮಿಳುನಾಡನ್ನು ನೋಡಿ ಕಲಿಯಿರಿ. ಪ್ರಾದೇಶಿಕ ಪಕ್ಷಕ್ಕೆ ಓಟು ಹಾಕಿ."

-ಹೆಚ್.ಡಿ.ಕುಮಾರಸ್ವಾಮಿ

"ನಾನು ನಳಿನಿಯನ್ನು ಭೇಟಿಯಾಗಿದ್ದು ಹಿಂಸೆಯ ದಾರಿಗಿಂತ ಶಾಂತಿಯ ಹಾದಿಯ ಬಗ್ಗೆ ನನಗಿರುವ ನಂಬಿಕೆಯಿಂದ."

-ಪ್ರಿಯಾಂಕ ಗಾಂಧಿ

"ರಾಮಾಯಣ ಮುಗಿಸಿ ಮಹಾಭಾರತ ನಡೆಸಲು ಬಂದಿದ್ದೇನೆ. ಇಲ್ಲಿ ಧರ್ಮರಾಯನಿಗೇ ಅನ್ಯಾಯವಾಗಿದೆ."

-ಬೆಂಕಿ ಮಹಾದೇವು

"ಮೂಲನಿವಾಸಿಗಳಿಗೆ ಟಿಕೆಟ್ ಕೊಡಿ."

-ಎಲ್ಲಾ ಪಕ್ಷಗಳ ಕಾರ್ಯಕರ್ತರ ಒಕ್ಕೊರಲ ಆಗ್ರಹ

"ಶಿಸ್ತು ಮತ್ತು ಸಿದ್ಧಾಂತವನ್ನು ಬಿಜೆಪಿ ಗಾಳಿಗೆ ತೂರಿದೆ. ಅಲ್ಲಿನ ಕಲುಷಿತ ವಾತಾವರಣದಿಂದ ಬೇಸತ್ತು ಕಾಂಗ್ರೆ ಸೇರುತ್ತಿದ್ದೇನೆ."

-ಅನಿಲ್ ಲಾಡ್

"ಬೆಲೆ ಏರಿಕೆಯು ಇದೇ ರೀತಿ ಏರುತ್ತಿದ್ದರೆ ಸಾಲಮನ್ನಾದ ಲಾಭ ಪಡೆದ ರೈತರೆಲ್ಲಾ ಮತ್ತೆ ಸಾಲಗಾರರಾಗುವ ದಿನಗಳು ದೂರವಿಲ್ಲ."

-ಎಂ.ಎಸ್.ಸ್ವಾಮಿನಾಥನ್

ನಂಬಿದ್ರೆನಂಬಿ ಬಿಟ್ರೆಬಿಡಿ

"ರಾಹುಲ್ ಗಾಂಧಿ ಪ್ರಧಾನಿ ಅಭ್ಯರ್ಥಿ ಅಲ್ಲ."

-ಎಐಸಿಸಿ ಸಮಜಾಯಿಷಿ

"ಕಾಂಗ್ರೆಸ್‌ನಲ್ಲಿ ಟಿಕೆಟ್ ನೀಡಲು ಈ ಮಾನದಂಡಗಳನ್ನು ರೂಪಿಸಲಾಗಿದೆಯಂತೆ:

-ಕ್ರಿಮಿನಲ್ ಹಿನ್ನೆಲೆಯುಳ್ಳವರಿಗೆ ಟಿಕೆಟ್ ಇಲ್ಲ

-ಜಿಲ್ಲೆಗೊಬ್ಬರು ಮಹಿಳಾ ಅಭ್ಯರ್ಥಿ

-45 ವಯಸ್ಸಿಗಿಂತ ಕಡಿಮೆ ಇರುವವರಿಗೆ ಆದ್ಯತೆ"

-ಪತ್ರಿಕಾ ಹೇಳಿಕೆ



"ನಮ್ಮ ನಮ್ಮ ಪಕ್ಷದ ಅಭ್ಯರ್ಥಿಗಳಿಗೆ ಟಿಕೆಟ್ ನೀಡುವ ಮುನ್ನ ರಾಜ್ಯ ಜಿಲ್ಲೆ ತಾಲ್ಲೂಕು ಮತ್ತು ಸ್ಥಳೀಯ ಘಟಕಗಳ ಅಭಿಪ್ರಾಯಗಳನ್ನು ಪಡೆದೇ ಟಿಕೆಟನ್ನು ನೀಡುತ್ತೇವೆ."

-ಯಡಿಯೂರಪ್ಪ


ಎಲುಬಿಲ್ಲದ ನಾಲಿಗೆ...



"ಬೆಂಗಳೂರು ವಿವಿಯಿಂದ ವಜಾ ಆಗಿರುವ ಮೈಲಾರಪ್ಪ ಅವರ ಮೇಲಿರುವುದು ಕೇವಲ ಆರೋಪಗಳಷ್ಟೆ. ಆದ್ದರಿಂದ ಅವರಿಗೆ ಟಿಕೆಟ್ ಕೊಟ್ಟಿರುವುದರಲ್ಲಿ ತಪ್ಪೇನೂ ಇಲ್ಲ."

-ಅನಂತ್ ಕುಮಾರ್


ಪಾಪಿಗಳ ಬಗ್ಗೆ ಪರಮ ಪಾಪಿಗಳು!



"ಕಾಂಗ್ರೆಸ್ ಸರ್ಕಾರದ ಪಾಪದ ಕೆಲಸಗಳೇ ಇಂದಿನ ಆಹಾರ ಪದಾರ್ಥಗಳ ಬೆಲೆ ಏರಿಕೆಗೆ ಕಾರಣ"

-ಸುಷ್ಮಾ ಸ್ವರಾಜ್

ಬೆಂಕಿ ಮುಟ್ಟಿಯೂ ಪಾಠ ಕಲಿಯದವರು!



"ನಾನು ಬಿಜೆಪಿ ಪಕ್ಷದ ಸೆಕ್ಯುಲರ್ ಮುಖ. ಅಲ್ಪಸಂಖ್ಯಾತರು ಬಿಜೆಪಿಯನ್ನು ಸೇರುವಂತೆ ಮನ ಒಲಿಸಲೆಂದೇ ನನ್ನನ್ನು ಬಳಸಿಕೊಳ್ಳಲಾಯಿತು. ನಾನು ಆ ಪಕ್ಷಕ್ಕಾಗಿ ಬೇರೆ ರಾಜ್ಯಗಳಲ್ಲೂ ಪ್ರಚಾರ ಮಾಡಿದೆ. ಈಗ ನೋಡಿದರೆ ಸೀಟು ನೀಡುವಾಗ ಕನಿಷ್ಠ ನನ್ನ ಅಭಿಪ್ರಾಯವನ್ನೂ ಕೇಳಲಿಲ್ಲ."

-ಸಾಂಗ್ಲಿಯಾನ

ಆಧುನಿಕ ಮೌಢ್ಯ!

"ಕಾರ್ಪೊರೇಟ್ ಜಾಗತೀಕರಣವನ್ನು ಅಂಧವಾಗಿ ಬೆಂಬಲಿಸುವವರು ಮುಂದಿಡುವ ಮೂರು ತತ್ವಗಳಿವು:

-ಗೆಲುವೆಲ್ಲಾ ಜಾಗತಿಕವಾದದ್ದು

-ಸೋಲೆಲ್ಲಾ ಆಯಾ ರಾಷ್ಟ್ರಗಳದ್ದು..ಮತ್ತು

-ಮಾರುಕಟ್ಟೆ ಎಂದೂ ತಪ್ಪು ಮಾಡಲು ಸಾಧ್ಯವಿಲ್ಲ!"

-ಪ್ರೊ.ಜೇಮ್ಸ್ ಗೇಲ್ಬ್ರೈತ್

ಜೆಹಾದ್ ಎಂದರೆ...

"ಜೆಹಾದ್ ಎಂದರೆ ಸರಿಯೆನ್ನಿಸಿದ ಮತ್ತು ಸರ್ವಸಮ್ಮತವಾದ ಯಾವುದೇ ಒಂದು ಸಂಗತಿಗೆ ತೀವ್ರವಾಗಿ ಪ್ರಯತ್ನಿಸುವುದು ಅಥವಾ ಶ್ರಮ ಪಡುವುದು ಎಂದರ್ಥವೇ ಹೊರತು ಅದು ಯುದ್ಧವನ್ನು ಸೂಚಿಸುವ ಶಬ್ಧವಲ್ಲ. ಕುರ್‌ಆನ್‌ನಲ್ಲಿ 41 ಬಾರಿ ಈ ಶಬ್ಧ ಬರುತ್ತದೆ ಮತ್ತು ಒಂದೇ ಒಂದು ಬಾರಿಯೂ ಅದು ಯುದ್ಧವನ್ನು ಪ್ರಚೋದಿಸುವ ಶಬ್ಧವಾಗಿ ಬಳಕೆಯಾದುದಿಲ್ಲ."

-ಎಸ್. ಎಮ್. ಮುರ್ಷಿದ್, ಜಮ್ಮು ಕಾಶ್ಮೀರದ ರಾಜ್ಯಪಾಲರ ಸಲಹೆಗಾರರಾಗಿದ್ದವರು

ಹಿಂಸೆಗೆ ಒಂದು ಮಾನವೀಯ ಉತ್ತರ




ಕಂಡಹಾಗೆ

■ ಗೌರಿ ಲಂಕೇಶ್

ಕ್ಷಮೆ ಮತ್ತು ಸಾಮರಸ್ಯ ಬಹುತೇಕ ಎಲ್ಲಾ ಸ್ಥಾಪಿತ ಧರ್ಮಗಳ ಸಾರ. ಕ್ರಿಶ್ಚಿಯನ್ ಧರ್ಮದಲ್ಲಿ ಪುನೀತನಾದ ಪಾತಕಿ ಮಗನ ವೃತ್ತಾಂತದ ಮೂಲಕ ಈ ಸಾರ ವ್ಯಕ್ತವಾಗಿದ್ದರೆ, ಇಸ್ಲಾಂ ಧರ್ಮದಲ್ಲಿ ಅಲ್ಲಾಹು ಕರುಣಾಮಯಿ ಎಂದೇ ಉಲ್ಲೇಖಿಸಲಾಗಿದೆ. ಬೌದ್ಧ ಧರ್ಮವು ನಿಂತಿರುವುದೇ ದಯೆ ಮತ್ತು ದಾಕ್ಷಿಣ್ಯದ ಮೇಲೆ. ಆದರೆ ಯಾವುದನ್ನು ಹಿಂದೂ ಧರ್ಮ ಎಂದು ಕರೆಯುತ್ತಾರೊ ಅದರಲ್ಲಿ ಕ್ಷಮೆ, ಸಾಮರಸ್ಯ, ದಯೆ ಎಂಬುದ್ಯಾವುದೂ ಇರುವಂತಿಲ್ಲ, ಬದಲಾಗಿ ಅದರಲ್ಲಿರುವುದು ನಿರ್ಬಂಧಗಳು, ಮತ್ತು ನಿರ್ಬಂಧಗಳನ್ನು ಉಲ್ಲಂಘಿಸಿದವರಿಗೆ ಘೋರವಾದ ಶಿಕ್ಷೆ. ಮನುಧರ್ಮಕ್ಕೆ ಇನ್ನೊಂದು ಹೆಸರಾಗಿರುವ ಹಿಂದೂ ಧರ್ಮದಲ್ಲಿನ ಇಂಥ ಕ್ರೌರ್ಯವನ್ನು ಕಂಡೇ ಬಸವಣ್ಣನಂಥವರು 'ದಯೆಯೇ ಧರ್ಮದ ಮೂಲವಯ್ಯ' ಎಂದು ಬಂಡಾಯವೆದ್ದಿದ್ದರು.

ಮೊನ್ನೆ ಪ್ರಿಯಾಂಕಾ ಗಾಂಧಿ ತನ್ನ ತಂದೆ ರಾಜೀವ್ ಗಾಂಧಿಯನ್ನು ಕೊಂದವರ ತಂಡದಲ್ಲಿದ್ದ, ಈಗ ಆ ಅಪರಾಧಕ್ಕಾಗಿ ಜೀವಾವಧಿ ಶಿಕ್ಷೆಯನ್ನು ಅನುಭವಿಸುತ್ತಿರುವ ನಳಿನಿ ಎಂಬಾಕೆಯನ್ನು ವೆಲ್ಲೂರ್ ಜೈಲಿನಲ್ಲಿ ಭೇಟಿಯಾಗಿದ್ದರ ಸುದ್ದಿ ಹೊರಬೀಳುತ್ತಿದ್ದಂತೆ ಹಲವಾರು ರೀತಿಯ ಪ್ರತಿಕ್ರಿಯೆಗಳು ವ್ಯಕ್ತವಾದವು. ಅವುಗಳಲ್ಲಿ ಬಿಜೆಪಿ ಪಕ್ಷದವರ ಪ್ರತಿಕ್ರಿಯೆಯಂತೂ ತಮಾಷೆಯಾಗಿತ್ತು. ಮೊದಮೊದಲು "ಆಕೆ ಹೀಗೇಕೆ ಮಾಡಿದಳು ಎಂದು ನಮಗೆ ಅರ್ಥವೇ ಆಗುತ್ತಿಲ್ಲ" ಎಂದ ಬಿಜೆಪಿಯ ವಕ್ತಾರ. ಆದರೂ ಆ ಪ್ರಕರಣದ ನಿಮಗೊಂದು ಅಭಿಪ್ರಾಯ ಇರಬೇಕಲ್ಲಾ ಎಂದು ಒತ್ತಾಯಿಸಿದಾಗ "ವೈಯಕ್ತಿಕ ವಿಷಯಗಳ ಬಗ್ಗೆ ನಾವು ಮಾತನಾಡುವುದಿಲ್ಲ" ಎಂದ. ಮಾತ್ರವಲ್ಲ ಪ್ರಿಯಾಂಕಾಳ ಭೇಟಿಯ ಹಿಂದೆ ರಾಜಕೀಯ ದುರುದ್ದೇಶಗಳು ಇದ್ದಿರಬಹುದೇ ಎಂದು ಬಿಜೆಪಿಗಳು ನೋಡಿದರು. ಕೇಳಿಕೇಳಿ, ಅವಕಾಶ ಸಿಕ್ಕಾಗಲೆಲ್ಲ ಸೋನಿಯಾ ಗಾಂಧಿ ಮತ್ತವರ ಮಕ್ಕಳ ಮೇಲೆ ಕಾರಿಕೊಂಡು ಬೀಳುವುದು ಇವರ ಜಾಯಮಾನ. ಆದರೆ ಪ್ರಿಯಾಂಕಾ-ನಳಿನಿ ಭೇಟಿಯ ಹಿಂದೆ ಯಾವ ರಾಜಕೀಯವೂ ಇರಲಿಲ್ಲ ಎಂದು ಗೊತ್ತಾದಾಗ ಬಿಜೆಪಿಗಳು ಪೆಚ್ಚುಬ್ಬಾಗಿ ಸುಮ್ಮನಾದರು.



ಅವರು ಹೀಗೆ ಮಾತೇ ಹೊರಡದಂತೆ ತಟಸ್ಥರಾಗುವುದಕ್ಕೆ ಕಾರಣವೂ ಇದೆ.

... ದಯೆ, ಕ್ಷಮೆ, ಸಾಮರಸ್ಯ ಎಂಬುದರ ಬದಲಾಗಿ ಅವರ ಹಿಂದೂತ್ವ ಸಿದ್ಧಾಂತ ಅವಲಂಭಿಸಿರುವುದೇ ಸೇಡಿನ ಭಾವನೆಯನ್ನು. ಕಣ್ಣಿಗೆ ಕಣ್ಣು, ರಕ್ತಕ್ಕೆ ರಕ್ತ, ಹೆಣಕ್ಕೆ ಹೆಣ ಎಂಬ ಲೆಕ್ಕಾಚಾರದ ಮೇಲೆಯೇ ತಮ್ಮ ರಾಜಕೀಯವನ್ನು ನಡೆಸಿಕೊಂಡು ಬಂದಿರುವ ಬಿಜೆಪಿಗಳಿಗೆ ಪ್ರಿಯಾಂಕ ತನ್ನ ತಂದೆಯ ಕೊಲೆಗಡುಕಿಯನ್ನೇ ಭೇಟಿ ಆದದ್ದು, ಆಕೆಯೊಂದಿಗೆ ಮಾನವೀಯತೆಯಿಂದ ವರ್ತಿಸಿದ್ದು, ದ್ವೇಷಕ್ಕಿಂತ ತನ್ನ ಬದುಕಿನಲ್ಲಿ ಸಾಮರಸ್ಯವೇ ಮುಖ್ಯ ಎಂದು ಜಗಜಾಹೀರುಪಡಿಸಿದ್ದು ಬಿಜೆಪಿಗಳಿಗೆ ಹೇಗೆ ಅರ್ಥವಾಗಬೇಕು? ಬಿಜೆಪಿಗಳಲ್ಲಿ ಮಾನವೀಯತೆ ಬೇಡ, ಕನಿಷ್ಠ ಮನುಷ್ಯತ್ವವಾದರೂ ಇದ್ದಿದ್ದರೆ ಅವರು ಈ ಪ್ರಕರಣವನ್ನು ರಾಜಕಾರಣದ ಸೀಮಿತ ದೃಷ್ಟಿಯಿಂದ ನೋಡದೆ, ಪ್ರಿಯಾಂಕಳನ್ನು ಅಭಿನಂದಿಸುವಷ್ಟು ಹೃದಯವಂತಿಕೆಯನ್ನಾದರೂ ಪ್ರದರ್ಶಿಸುತ್ತಿದ್ದರು. ಆದರೆ ಅವರಿಂದ ಅಷ್ಟೂ ಸಾಧ್ಯವಾಗಿಲ್ಲ ಅಂದರೆ ಏನರ್ಥ?

ಇದೊಂದೇ ಪ್ರಕರಣವಲ್ಲ, ಮುಸಲ್ಮಾರನ್ನು ಬೆತ್ತಲೆಗೊಳಿಸಿ ಅವಮಾನ ಮಾಡಿದ ಆದಿ ಉಡುಪಿ ಘಟನೆಗೆ ಕಾರಣನಾದವನನ್ನು ಖಂಡಿಸುವ ಬದಲು ಆತನಿಗೆ ಅಧಿಕಾರ ನೀಡಿದ್ದು, ಶಾಂತಿಪುರದಲ್ಲಿ ದಲಿತನನ್ನು ಭಜರಂಗಿಗಳು ಬೆತ್ತಲೆಗೊಳಿಸಿ ಬಡಿದಿದ್ದರ ಬಗ್ಗೆ ಇವತ್ತಿಗೂ ಮೌನ ವಹಿಸಿರುವುದು, ಜಜ್ಜರ್‌ನಲ್ಲಿ ಕೊಲೆಯಾದ ದಲಿತರಿಗಿಂತ ಗೋವುಗಳೇ ಮುಖ್ಯ ಅಂದದ್ದು, ಖೈರ್ಲಾಂಜಿಯಲ್ಲಿ ದಲಿತ ಮಹಿಳೆಯನ್ನು ಕೊಂದವರನ್ನು ರಕ್ಷಿಸಿದ್ದು, ಗುಜರಾತಿನಲ್ಲಿ ಅಲ್ಪಸಂಖ್ಯಾತ ಮಾರಣಹೋಮ ನಡೆಸಿದವರನ್ನೇ ಹೀರೋ ಗಳಂತೆ ಮೆರೆಸುತ್ತಿರುವುದು, ಒರಿಸ್ಸಾದಲ್ಲಿ ಗ್ರಾಹಂ ಸ್ಟೇನ್ಸ್ ಮತ್ತು ಆತನ ಪುತ್ರರನ್ನು ಜೀವಂತವಾಗಿ ಭಸ್ಮ ಮಾಡಿದ್ದು ತಮ್ಮ ಧರ್ಮರಕ್ಷಣೆಗೆ ಮುಖ್ಯ ಎಂದೇ ವಾದಿಸುತ್ತಿರುವುದು- ಇವೆಲ್ಲಾ ಬಿಜೆಪಿ ಎಂತಹ ರಕ್ತಪಿಪಾಸು ಪಕ್ಷ ಎಂಬುದನ್ನು ಸಾಬೀತುಪಡಿಸುತ್ತವೆ.



ಅಂದಹಾಗೆ ಗ್ರಾಹಂ ಸ್ಟೇನ್ಸ್‌ರನ್ನು ಕೊಂದ ಭಜರಂಗಿದಳದ ನಾಯಕ ದಾರಾ ಸಿಂಗ್ ಇವತ್ತಿಗೂ ತನ್ನ ಕೃತ್ಯದ ಬಗ್ಗೆ ಪಶ್ಚಾತಾಪವನ್ನು ವ್ಯಕ್ತಪಡಿಸಿಲ್ಲ, ಬದಲಾಗಿ ಆತನ ಕೃತ್ಯಕ್ಕೆ ತನ್ನ ಗಂಡ ಮತ್ತು ಇಬ್ಬರು ಮಕ್ಕಳನ್ನು ಕಳೆದುಕೊಂಡ ಗ್ರಾಹಂ ಸ್ಟೇನ್ಸ್‌ರವರ ಪತ್ನಿ ಗ್ಲಾಡಿಸ್ "ಆತನ ಬಗ್ಗೆ ನನ್ನಲ್ಲಿ ಯಾವುದೇ ದ್ವೇಷ ಅಥವಾ ಕೋಪ ಇಲ್ಲ, ದೇವರು ಆತನನ್ನು ಕ್ಷಮಿಸಲಿ ಎಂದು ಪ್ರಾರ್ಥಿಸುತ್ತೇನೆ" ಎಂದಿದ್ದಾರೆ.

ಆಕೆಯ ಈ ಮಾತುಗಳನ್ನು ಕೇಳಿಯಾದರೂ ದಾರಾ ಸಿಂಗ್ ಬದಲಾಗಬೇಕಿತ್ತು. ಆದರೆ ಹಿಂದೂತ್ವದ ದ್ವೇಷ ಸಿದ್ಧಾಂತವನ್ನೇ ತನ್ನ ದೇಹದಲ್ಲಿ ತುಂಬಿಕೊಂಡಿರುವ ಈತ ಕೆಲಕಾಲ ಬಿಡುಗಡೆ ಹೊಂದಿದ್ದಾಗ ಓರ್ವ ಮುಸ್ಲಿಮ್ ವ್ಯಾಪಾರಿಯನ್ನು ಮತ್ತು ಇನ್ನೋರ್ವ ಕ್ರಿಶ್ಚಿಯನ್ ಪಾದ್ರಿಯನ್ನು ಕೊಂದು ಹಾಕಿದ. ಆಗಲೂ ಬಿಜೆಪಿಯ ಸಹ ಸಂಘಟನೆಗಳು ದಾರಾ ಸಿಂಗ್‌ನನ್ನು ಖಂಡಿಸಲಿಲ್ಲ ಮಾತ್ರವಲ್ಲ ಆತನಿಗೆ ವಕೀಲರನ್ನು ನೇಮಿಸಿ ಕಾನೂನಿನ ನೆರವನ್ನು ನೀಡಿದವು.

ಪ್ರಿಯಾಂಕಾಳಂತಹ ಸಾಮಾನ್ಯ ಹುಡುಗಿಯೇ ಬಿಜೆಪಿಗಳಿಗೆ ಅರ್ಥವಾಗದಿರುವಾಗ ಇನ್ನು ಧಾರ್ಮಿಕ ಶ್ರದ್ಧೆಯನ್ನೇ ತನ್ನ ಬದುಕಿನ ಮಾರ್ಗವಾಗಿಸಿಕೊಂಡಿರುವ ಗ್ಲಾಡಿಸ್ ಸ್ಟೇನ್ಸ್ ಆಗಲಿ, ಆಕೆಯ ನೋವು, ಸಂಕಷ್ಟಗಳಾಗಲಿ ಅವರಿಗೆ ಅರ್ಥವಾದೀತಾದರು ಹೇಗೆ?

ಪ್ರಿಯಾಂಕಾ ವಿಷಯಕ್ಕೆ ಬರುವುದಾದರೆ ಆಕೆ ತನ್ನ ಚಿಕ್ಕವಯಸ್ಸಿನಲ್ಲೇ ಹಿಂಸಾಕೃತ್ಯಗಳನ್ನು ಹತ್ತಿರದಿಂದ ನೋಡಿದವಳು. ಮೊದಲು ಆಕೆಯ ಅಜ್ಜಿ ಇಂದಿರಾಗಾಂಧಿಯನ್ನು ಆಕೆಯ ರಕ್ಷಣಾ ದಳದವರೇ ಕೊಂದು ಹಾಕಿದರು. ಆನಂತರ ಆಕೆಯ ತಂದೆಯನ್ನು ಆತ್ಮಹತ್ಯಾ ದಾಳಿಯಲ್ಲಿ ಕೊಂದು ಹಾಕಲಾಯಿತು. ಈಗ ಪ್ರತಿ ಕ್ಷಣ ರಕ್ಷಣಾದಳದವರಿಂದ ಸುತ್ತುವರೆದಿರುವ, ಗಾಜಿನ ಅರಮನೆಯಲ್ಲಿ ಬದುಕನ್ನು ಸಾಗಿಸುತ್ತಿರುವ, ಹೆಚ್ಚಾಗಿ ಹೊರಗಿನ ಜಗತ್ತಿನೊಂದಿಗೆ ಸಂಪರ್ಕ ಸಾಧ್ಯವಿರದ ಸ್ಥಿತಿಯಲ್ಲಿರುವ ಯುವತಿ ಪ್ರಿಯಾಂಕ. ಅಂತಹ ಪರಿಸ್ಥಿತಿಯಲ್ಲೂ ಆಕೆ ತನ್ನ ಮಾನವೀಯತೆಯನ್ನು ಉಳಿಸಿಕೊಂಡು ಸಹಜವಾಗಿ ಬದುಕಲು ಯತ್ನಿಸುತ್ತಿದ್ದಾಳೆ ಎಂಬುದಕ್ಕೆ ನಳಿನಿ ಭೇಟಿ ಪ್ರಕರಣವೇ ಸಾಕ್ಷಿ.

ಯಾವುದೇ ಪ್ರಚಾರವಿಲ್ಲದೆ, ಯಾರ ಗಮನಕ್ಕೂ ಬಾರದ ಪ್ರಿಯಾಂಕ ತನ್ನ ತಂದೆಯ ಸಾವಿಗೆ ಕಾರಣವಾಗಿದ್ದ ನಳಿನಿಯನ್ನು ಭೇಟಿಯಾಗಿದ್ದ ವಿಚಾರ ಬಹಿರಂಗಗೊಳ್ಳುತ್ತಿದ್ದಂತೆ ಪ್ರಿಯಾಂಕ ಯಾಕೆ ಆಕೆಯನ್ನು ಭೇಟಿಯಾದಳು? ಅವರಿಬ್ಬರ ನಡುವೆ ಯಾವ ಮಾತುಕತೆ ನಡೆಯಿತು? ಎಲ್ಲಕ್ಕಿಂತ ಮುಖ್ಯವಾಗಿ ಆಕೆಯನ್ನು ಭೇಟಿ ಆಗುವ ಬಯಕೆ ಪ್ರಿಯಾಂಕಾಳಲ್ಲಿ ಮೂಡಿದ್ದು ಯಾಕೆ ಎಂಬೆಲ್ಲಾ ಪ್ರಶ್ನೆಗಳು ಉದ್ಭವಿಸಿದವು.

ಅವುಗಳಿಗೆಲ್ಲಾ ಪ್ರಿಯಾಂಕ ಉತ್ತರಿಸಿದ್ದು ಹೀಗೆ: "ಅದು ವೈಯಕ್ತಿಕ ವಿಷಯ. ನಾನು ಸ್ವಇಚ್ಛೆಯಿಂದಲೇ ಆಕೆಯನ್ನು ಭೇಟಿಯಾದೆ. ನನ್ನ ಬದುಕಿನಲ್ಲಿ ಸಂಭವಿಸಿ ರುವ ಹಿಂಸೆ ಮತ್ತು ನಷ್ಟಕ್ಕೆ ಒಂದು ಅಂತ್ಯ ಕಾಣಲು ಮತ್ತು ಸಾಮರಸ್ಯವನ್ನು ಪಡೆಯಲು ನಾನು ಆಯ್ಕೆ ಮಾಡಿಕೊಂಡ ಮಾರ್ಗ ಅದು. ನನಗೆ ಕೋಪ, ದ್ವೇಷ ಮತ್ತು ಹಿಂಸೆಯಲ್ಲಿ ನಂಬಿಕೆ ಇಲ್ಲ, ಮತ್ತು ಅಂತಹ ಭಾವನೆಗಳು ನನ್ನ ಬದುಕನ್ನೇ ಸ್ವಾಧೀನ ಪಡಿಸಿಕೊಳ್ಳಲು ನಾನು ಎಂದೂ ಬಿಡುವುದಿಲ್ಲ."

ಇಂಗ್ಲಿಷ್‌ನಲ್ಲಿ ಒಂದು ಹೇಳಿಕೆ ಇದೆ: ``**To err is human, to forgive is divine**'' ಅಂತ. ಹಾಗೆ ಪ್ರಿಯಾಂಕ ಕೂಡ ಸಾಮಾನ್ಯ ಮನುಷ್ಯಳಂತಿದ್ದು ನಳಿನಿ ಬಗ್ಗೆ ಮರೆಯಬಹು ದಿತ್ತು, ಅಥವಾ ನಳಿನಿ ಮಾಡಿದ ತಪ್ಪಿಗೆ ಸರಿಯಾದ ಶಿಕ್ಷೆ ಆಗಿದೆ ಎಂದು ಸುಮ್ಮನಿರಬಹುದಿತ್ತು. ಆದರೆ ಪ್ರಿಯಾಂಕ ಮರೆಯಲಿಲ್ಲ, ಸುಮ್ಮನಿರಲಿಲ್ಲ. ಬದಲಾಗಿ ನಳಿನಿಯನ್ನು ಭೇಟಿಯಾಗಿ, ಅವಳೊಂದಿಗೆ ಸಾಮಾನ್ಯ ಯುವತಿಯರಂತೆ ಬಾಣಂತಿನ, ಮಕ್ಕಳ ಬಗ್ಗೆ ಚರ್ಚಿಸಿ, ಒಂದು ಉಡುಗೊರೆಯನ್ನು ನೀಡುವ ಮೂಲಕ ಪ್ರಿಯಾಂಕ ತನ್ನ ಎಲ್ಲಾ ದುಃಖ ಮತ್ತು ನೋವುಗಳೊಂದಿಗೆ ಮುಖಾಮುಖಿಯಾಗಿ ತನ್ನ ಮನಸ್ಸಿನಲ್ಲೇ ಅವುಗಳಿಗೆ ಒಂದು ಅಂತ್ಯ ಕಂಡುಕೊಂಡಿದ್ದಾಳಲ್ಲದೆ ತನ್ನ ಮಾನವೀಯತೆಯನ್ನು ಮೆರೆದಿದ್ದಾಳೆ. ಅಂದಹಾಗೆ ರಾಜೀವ್ ಗಾಂಧಿಯ ಹತ್ಯೆಗೆ ಸಂಬಂಧಪಟ್ಟಂತೆ ನ್ಯಾಯಾಲಯ ನಳಿನಿಗೆ ಮತ್ತಾಕೆಯ ಗಂಡ ಮುರುಗನ್, ಇಬ್ಬರಿಗೂ ಮರಣದಂಡನೆ ವಿಧಿಸಿತ್ತು. ಆದರೆ ತೀರ್ಪು ಬರುವ ಮುನ್ನವೇ ನಳಿನಿಗೆ ಜೈಲಿನಲ್ಲೇ ಒಂದು ಹೆಣ್ಣುಮಗು ಹುಟ್ಟಿತ್ತು. ಆಗ ನಳಿನಿ ಮತ್ತು ಮುರುಗನ್ ಇಬ್ಬರೂ ಗಲ್ಲಿಗೇರಿಸಲ್ಪಟ್ಟರೆ ಅವರ ಮಗಳು ಅನಾಥೆಯಾಗುತ್ತಾಳೆಂಬ ಕಾರಣಕ್ಕೆ ನಳಿನಿಗೆ ಮರಣದಂಡನೆ ವಿಧಿಸಬಾರದೆಂದು ರಾಷ್ಟ್ರಪತಿಯವರಿಗೆ ಅಹವಾಲು ಸಲ್ಲಿಸಿದ್ದು ಬೇರಾರೂ ಅಲ್ಲ, ಮುರುಗನ್ ಮತ್ತು ನಳಿನಿಯ ಕೃತ್ಯದಿಂದ ತನ್ನ ಪ್ರೀತಿಯ ಗಂಡನನ್ನೇ ಕಳೆದುಕೊಂಡಿದ್ದ ಸೋನಿಯಾ ಗಾಂಧಿ.

ಸೋನಿಯಾ ಗಾಂಧಿಯವರ ಈ ಕಾಳಜಿಯಿಂದಲೇ ತನ್ನ ಪ್ರಾಣ ಉಳಿಸಿಕೊಂಡ ನಳಿನಿ ಅಂದಿನಿಂದ ಸೋನಿಯಾರೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದಾಳೆ. ಆಕೆ ಬರೆದ ಪತ್ರಗಳಲ್ಲಿ ಸೋನಿಯಾರನ್ನು 'ಪ್ರೀತಿಯ ತಾಯಿ' ಎಂದೇ ಸಂಬೋಧಿಸಿದ್ದಾಳೆ.

ಆದರೆ ವಿಪರ್ಯಾಸ ನೋಡಿ.

ಮಾತೆಯರ ಹೆಸರಲ್ಲಿ 'ಸೌಂದರ್ಯ ಲಹರಿ' ಎಂಬ ಅಶ್ಲೀಲ ಶ್ಲೋಕಗಳನ್ನು ಸಾಮೂಹಿಕವಾಗಿ ಮಹಿಳೆಯರಿಂದ ಪಠಿಸುವ ಚೆಡ್ಡಿಗಳಿಗೆ ಇಟಲಿಯಲ್ಲಿ ಜನಿಸಿದ್ದರೂ ಈಗ ಭಾರತೀಯರಾಗಿರುವ ಸೋನಿಯಾರ ಮಾತೃತ್ವ ಅರ್ಥವಾಗುವುದಿಲ್ಲ. ಅಷ್ಟೇ ಅಲ್ಲ, ಸೋನಿಯಾ ಗಾಂಧಿ ಭಾರತದ ಪ್ರಧಾನಿಯಾದರೆ ತನ್ನ ಗಂಡ ಬದುಕಿರುವಾಗಲೇ ತಾನು ವಿಧವೆಯಂತೆ ಜೀವಿಸುತ್ತೇನೆ ಎಂದು ಸುಷ್ಮಾ ಸ್ವರಾಜ್ ನಂತಹ ತಲೆ ಕೆಟ್ಟ ಹೆಂಗಸರು ಪ್ರತಿಭಟಿಸುತ್ತಾರೆ.

ಒಂದೆಡೆ, ತನ್ನ ಗಂಡನನ್ನು ಕಳೆದುಕೊಂಡಿದ್ದರೂ, ಆತನನ್ನು ಕೊಂದವರ ಮಗಳ ಬಗ್ಗೆ ತಾಯಿ ವಾತ್ಸಲ್ಯ ತೋರುವ ಸೋನಿಯಾ. ಇನ್ನೊಂದೆಡೆ, ಗರ್ಭವತಿಯರ ಹೊಟ್ಟೆಯನ್ನೇ ತ್ರಿಶೂಲಗಳಿಂದ ಬಗೆದು ಅದರಲ್ಲಿನ ಭ್ರೂಣವನ್ನು ಹಿಡಿದು ಸಂಭ್ರಮಿಸುವ ಬಿಜೆಪಿಗಳು.

ಇವರ ನಡುವೆ ಯಾರು ಈ ದೇಶಕ್ಕೆ ಹಿತವರು?

ಅಂದಹಾಗೆ, ನಳಿನಿಯನ್ನು ಭೇಟಿಯಾದಾಗ "ನನ್ನ ಅಪ್ಪ ತುಂಬಾ ಒಳ್ಳೆಯವರಾಗಿದ್ದರು. ಅವರನ್ನು ಯಾಕೆ ಕೊಂದಿರಿ" ಎಂದು ಪ್ರಿಯಾಂಕ ಕೇಳಿದ್ದನ್ನು ಕುರಿತು ವಾರ್ತಾ ಭಾರತಿ ಪತ್ರಿಕೆಯಲ್ಲಿ ಅಣ್ಣು ಕೆ. ಬೆಳ್ತಂಗಡಿ ಎಂಬುವವರು "ಆಕೆಯ ಪ್ರಶ್ನೆಗೆ ನಳಿನಿ ಕೂಡ ನನ್ನ ತಂದೆಯನ್ನು ನೀವೆಲ್ಲ ಸೇರಿ ಯಾಕೆ ಕೊಂದಿರಿ? ಎಂದು ಕೇಳಿದ್ದರೆ ಪ್ರಿಯಾಂಕ ಏನು ಉತ್ತರ ಕೊಡುತ್ತಿದ್ದರು?" ಎಂದು ತರ್ಕಿಸಿದ್ದಾರೆ. ಅದನ್ನೇ ಮುಂದುವರೆಸಿಕೊಂಡು ಹೋಗಿ ಶ್ರೀಲಂಕಾದಿಂದ ಅಫಘಾನಿಸ್ತಾನ್, ಪ್ಯಾಲೆಸ್ಟೇನ್, ಇರಾಕ್ ದೇಶಗಳಲ್ಲಿನ ಮಕ್ಕಳೂ ಇದೇ ಪ್ರಶ್ನೆಯನ್ನು ಕೇಳುತ್ತಿವೆ ಎಂದೂ ತರ್ಕಿಸುತ್ತಾರೆ. ಹಾಗೆಯೇ ಆ ಮಕ್ಕಳ ಪ್ರಶ್ನೆಗಳಿಗೆ ಉತ್ತರ ನೀಡುವವರು ಯಾರೂ ಇಲ್ಲವೆಂದು ಹೇಳುತ್ತಾರೆ.

ಆದರೆ ಇಲ್ಲಿನ ವಿಪರ್ಯಾಸ ನೋಡಿ:

ಪ್ರಿಯಾಂಕ ಮತ್ತು ನಳಿನಿ ಇಬ್ಬರೂ ಹಿಂಸಾಕೃತ್ಯಗಳ ಬಲಿಪಶುಗಳೇ! ಅವರಿಬ್ಬರ ನೋವು, ದುಃಖ, ಸಂಕಟಗಳೂ ಒಂದೇ! ಹೀಗಿರುವಾಗ ಪ್ರಿಯಾಂಕಾಳ ಪ್ರಶ್ನೆಗಾಗಲಿ, ನಳಿನಿಯ ಪ್ರಶ್ನೆಗಾಗಲಿ ಉತ್ತರಿಸಬೇಕಾದವರು ಯಾರು?

ಪ್ರಿಯಾಂಕ ರಾಜಕೀಯವಾಗಿ ಅಪಕ್ವಳಾಗಿರಬಹುದು, ಲೆಕ್ಕಾಚಾರ ಗೊತ್ತಿಲ್ಲದ ಮುಗ್ಧೆಯಾಗಿರಬಹುದು. ಆದರೆ ರಾಜಕೀಯ, ಲೆಕ್ಕಾಚಾರ ಎಂಬುದನ್ನೆಲ್ಲ ಮರೆತು ಆಕೆ ಸಾಮರಸ್ಯವನ್ನು ಬಯಸಿ ತನ್ನ ತಂದೆಯ ಕೊಲೆಗಡುಕಿಯನ್ನೇ ಭೇಟಿಯಾಗಿದ್ದು ಓರ್ವ ಪ್ರಾಮಾಣಿಕ ಯುವತಿಯ ಅದ್ಭುತ ಕ್ರಿಯೆಯಾಗಿತ್ತು. ಬರೀ ಟೊಳ್ಳುತನ, ಢೋಂಗಿತನ ತುಂಬಿರುವ ಇಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಯಲ್ಲಿ ಆಕೆಯ ಗಟ್ಟಿತನ ಆಶಾದಾಯಕವಾಗಿದೆ ಎಂಬುದನ್ನು ಬಿಜೆಪಿಗಳ ಹೊರತಾಗಿ ಎಲ್ಲರೂ ನಂಬುತ್ತಾರೆ.

ಪ್ರಿಯಾಂಕಾಳಿಗೆ **hats off!** ■

ರೈ ಬಂಟರಿಗೆ ಮಿಲಿಟರಿಯವರ ಲಾತಾ

ಹೊಗೇನಕಲ್ ಮೇಲೆ ಇನ್ನೂರು ಭರ್ಜರಿ ಕಾರುಗಳ ಸಮೇತ ದಂಡೆತ್ತಿ ಹೋಗಿದ್ದ ಮುತ್ತಪ್ಪ ರೈ ಎಂಬ ಹಿಂದೂ ಡಾನ್ ಮತ್ತು ಆತನ 'ಜಯ ಕರ್ನಾಟಕ' ಸೇನೆಯ ಕನ್ನಡ ಹೋರಾಟದ ಅಸಲಿ ಮುಖವಾಡ ಬಯಲಾಗಿದೆ!

ತಮಿಳುನಾಡೇನೋ ಕನ್ನಡಿಗರ ಭೂಮಿ ಕಬಳಿಸಿತ್ತು ನಿಜ. ಆದರೆ ದೇವನಹಳ್ಳಿ ತಾಲ್ಲೂಕಿನ ಪ್ರಾಜೇನಹಳ್ಳಿಯ ತೋಟಗಾರಿಕೆ ಇಲಾಖೆಗೆ ಸೇರಿದ ಜಮೀನನ್ನು ಕಬಳಿಸಲು ರೈ ಗ್ಯಾಂಗ್ ಮುನ್ನೂರೈವತ್ತು ಮಂದಿಯ ಪಡೆ ಕಟ್ಟಿ ನಡೆಸಿದ ದಾಳಿಯನ್ನು, ಅರೆಮಿಲಿಟರಿಯವರು ಬಂದು ಹಿಮ್ಮೆಟ್ಟಿಸುತ್ತಾರೆಂದರೆ; ಸ್ವತಃ ಕರ್ನಾಟಕ ಸರ್ಕಾರದ ಆಸ್ತಿಯನ್ನೂ ಹೊಗೇನಕಲ್‌ನಂತೆ ತಮಿಳಾಕ್ರಮಿಸುತ್ತೊಡು ಜಯ ಕರ್ನಾಟಕ ವೀರರು ಯೋಚಿಸಿರಬಹುದೆ?

ಅಥವಾ ಕರ್ನಾಟಕ ಸರ್ಕಾರಕ್ಕೂ, ತಮಿಳುನಾಡು ಸರ್ಕಾರಕ್ಕೂ, ವ್ಯತ್ಯಾಸವೇ ರೈ ಸಹಚರರಿಗೆ ಗೊತ್ತಿಲ್ಲವೆ?

ರೈ ಖನ್ನಡ ಜೈ ಕನ್ನಡಾ.....!

ಸದ್ಯ ಅರೆಮಿಲಿಟರಿ ಪೊಲೀಸರಿಂದ ಒದೆ ತಿಂದು ಓಡಿಹೋದ ಸೋಕಾಲ್ಡ್ 'ರೈ' ಬಂಟರಿಗೂ ತನಗೂ ಸಂಬಂಧವಿಲ್ಲ ಎಂದು ಮುತ್ತಪ್ಪ ರೈ ಎಷ್ಟೇ ತಿಪ್ಪೆ ಸಾರಿಸಿದರೂ ಜಯ ಕರ್ನಾಟಕ ಸಂಘಟನೆಯ ರಾಜ್ಯಾಧ್ಯಕ್ಷ ರೋಲ್‌ಕಾಲ್ ರಮೇಶ್ ಪತ್ರಿಕಾಗೋಷ್ಠಿ ಕರೆದು ಇದೆಲ್ಲ ತಮಿಳು ಐಎಎಸ್ ಗಣೇಶನ್ ಪಿತೂರಿ ಎಂದೂ, ರೈ ಹೊಗೇನಕಲ್ ವಿರುದ್ಧ ಹೋರಾಡಿದ್ದಕ್ಕೇ ಆತ ಕತ್ತಿ ಮಸೆಯುತ್ತಿದ್ದಾನೆಂದೂ ರೈಲು ಬಿಡುತ್ತಿದ್ದಾನೆ. ಆದರೆ ವಿಷಯವೇ ಬೇರೆ.

ದೇವನಹಳ್ಳಿ ಸುತ್ತಮುತ್ತ ರೈ ಹೆಸರಲ್ಲಿ ಲ್ಯಾಂಡ್ ಡೀಲಿಗೆ ಕೈಯಿಟ್ಟವನು 'ಎಂಫಾರ್' ಕನ್ಸಟ್ರಕ್ಷನ್ಸ್ ಪಾಲುದಾರ ಷಾಜಿ. ಮೂಲತಃ ಈತ ಕೇರಳದವನು. ಈತನಿಗೆ ಮುಂಬಯಿಯಲ್ಲೂ ರಿಯಲ್ ಎಸ್ಟೇಟ್ ದಂಧೆಯಿದೆ. ಈತನೇ ಹೇಳಿಕೊಂಡಂತೆ ರೈ ಪಾಲುದಾರಿಕೆಯಲ್ಲಿ ಈತ ದೇವನಹಳ್ಳಿಯಲ್ಲಿ ಇನ್ನೂರು ಎಕರೆ ಭೂಮಿ ಖರೀದಿಸಿದ್ದಾನೆ. ಅಲ್ಲಿ ದುಬೈ ಮಾದರಿಯ ಟೌನ್‌ಶಿಪ್ ಮಾಡುವುದು ಈತನ ಗುರಿ. ಈ ಷಾಜಿಯೇ ತೋಟಗಾರಿಗೆ ಇಲಾಖೆ ಆಸ್ತಿಗೆ ಕೈಯಿಟ್ಟವನು.



ಅದು 1974 ರಲ್ಲಿ ಸರ್ಕಾರ ತೋಟಗಾರಿಕೆಗೆಂದು ಮಂಜೂರು ಮಾಡಿದ ಸರಿಸುಮಾರು 54 ಎಕರೆಯ ವಿಶಾಲ ತೋಪು. ತೋಟಗಾರಿಕೆ ಇಲಾಖೆ ಅದಕ್ಕೆ ತಂತಿ ಬೇಲಿ ಹಾಕಿದೆ. ಒಟ್ಟೂ 74 ಎಕರೆಗಳ ಸದರಿ ಸರ್ವೇ ನಂಬರಿನ ಉಳಿಕೆ ಭಾಗವನ್ನು ಸರ್ಕಾರ ದಲಿತರಿಗೆಂದು ಮೀಸಲಿಟ್ಟಿದೆ. ಈ ರೀತಿ ಸರ್ಕಾರಿ ಕೃಪೆಯಲ್ಲಿ ಭೂಮಿ ಗಿಟ್ಟಿಸಿದ ಮುನಿಯಪ್ಪ ಮತ್ತಿತರ ದಲಿತರನ್ನು ಬುಟ್ಟಿಗೆ ಹಾಕಿಕೊಂಡು ಪಕ್ಕದ ತೋಟಗಾರಿಕೆ ಇಲಾಖೆಯ ಆಸ್ತಿ ಕಬಳಿಸುವುದು ಷಾಜಿಯ ಹುನ್ನಾರ. ಎಲ್ಲಾ ತಯಾರಿ ಮಾಡಿಕೊಂಡೇ ಮುನ್ನೂರೈವತ್ತು ಮಂದಿ ರೌಡಿಗಳ ಗ್ಯಾಂಗ್ ಸಮೇತ ಏಪ್ರಿಲ್ 14 ರಂದು ದಾಳಿ ನಡೆಸಿದ್ದಾನೆ. ಬುಲ್ಡೋಜರ್ ನುಗ್ಗಿಸಿದ್ದಾನೆ. ರಕ್ಷಣೆಗೆ ಬಂದ ಅಧಿಕಾರಿಗಳಿಗೂ ಒದೆ ಬಿದ್ದಿದೆ. ಅದೃಷ್ಟವಶಾತ್ ಬೆಂಗಳೂರಿಗೆ ಬರುತ್ತಿದ್ದ ಅರೆಮಿಲಿಟರಿ ಪೊಲೀಸರಿಗೆ ಷಾಜಿ ಗ್ಯಾಂಗಿನ ಹಾವಳಿಗಳು ಕಾಣಿಸಿಬಿಟ್ಟಿದೆ. ನುಗ್ಗಿದ್ದೇ ಸೋಕಾಲ್ಡ್ ಮುತ್ತಪ್ಪ ರೈ ಬಂಟರನ್ನು ಹೊಡೆದೋಡಿಸಿದ್ದಾರೆ.

ನಡೆದದ್ದಿಷ್ಟು. ಹಾಗೊಮ್ಮೆ ಈ ಪ್ರಕರಣದಲ್ಲಿ ರೈ ಕೈವಾಡ ಇಲ್ಲದೇ ಹೋಗಿದ್ದರೆ ಕನ್ನಡಿಗರ ಸೊತ್ತನ್ನು ಉಳಿಸಲು ತನ್ನ ಜಯ ಕರ್ನಾಟಕದ ಸೈನಿಕರನ್ನೇ ಕಳಿಸುತ್ತೇನೆ ಎನ್ನಬೇಕಿತ್ತು ತಾನೆ? ಬದಲಾಗಿ ತೋಟಗಾರಿಕೆ ಇಲಾಖೆ ಮುಖ್ಯಸ್ಥ ಗಣೇಶನ್ ತಮಿಳುರಾದ್ದರಿಂದ ಹೊಗೇನಕಲ್‌ಗಾಗಿ ಹೋರಾಡಿದ್ದಕ್ಕೆ ತನ್ನ ವಿರುದ್ಧ ಸುಳ್ಳು ದೂರು ಕೊಟ್ಟು ಜಿದ್ದು ಸಾರಿಸುತ್ತಿದ್ದಾರೆ ಎಂದು ರೈ ಶಿಷ್ಯರು ಬೊಬ್ಬೆ ಹಾಕುತ್ತಿದ್ದಾರೆ.

ಹೊಗೇನಕಲ್‌ಗೆ ಇನ್ನೂರು ಕಾರುಗಳ ರ‍್ಯಾಲಿ ನಡೆಸಿದ ರೈ ಗ್ಯಾಂಗ್ ಪ್ರಾಜೇನಹಳ್ಳಿಯ ಕನ್ನಡಿಗರ ಭೂಮಿಗಾಗಿ ಕನಿಷ್ಠ ಇಪ್ಪತ್ತು ಕಾರುಗಳನ್ನಾದರೂ ಕಳಿಸುತ್ತಾ?

ಸರ್ಕಾರಿ ಸೊತ್ತಿನ ರಕ್ಷಣೆ ಮುಖ್ಯವೋ ಅಥವಾ ರಕ್ಷಣೆಗೆ ನಿಂತವನ ದಂಡನೆ ಮುಖ್ಯವೋ?

ರೈ ಕನ್ನಡ ಹೋರಾಟಕ್ಕೆ ಅರ್ಥವುಂಟೆ?

■ ವರದಿಗಾರ

ಗೇಲಿ ಮಾಡಲಾಗದ ಕಾಳಜಿಗಳ ರವಿಕೃಷ್ಣರೆಡ್ಡಿ

ಈಗ್ಗೆ ಹದಿನೈದಿಪ್ಪತ್ತು ದಿನಗಳ ಹಿಂದೆ ಶ್ರೀನಿವಾಸ್ ಎಂಬ ವ್ಯಕ್ತಿಯೊಬ್ಬ ಪ್ರಜಾವಾಣಿಯಲ್ಲಿ ತನ್ನ ಫೋಟೋ ಸಹಿತ ಜಾಹೀರಾತೊಂದನ್ನು ಹಾಕಿಕೊಂಡಿದ್ದ.

"ನನಗೆ ಸಮಾಜಸೇವೆ ಮಾಡುವ ಇಚ್ಛೆಯಿದ್ದು ಚುನಾವಣೆಗೆ ಸ್ಪರ್ಧಿಸುವ ಬಯಕೆ ಇದೆ. ನನ್ನ ಈ ಪ್ರತಿಭೆಯನ್ನು ಗುರುತಿಸಿ ಯಾವುದಾದರೂ ರಾಜಕೀಯ ಪಕ್ಷ ಟಿಕೆಟ್ ನೀಡಬೇಕೆಂದು ಕೋರುತ್ತೇನೆ" ಎಂದು ಆ ಜಾಹೀರಾತಿನಲ್ಲಿ ಆತ ವಿನಂತಿಸಿಕೊಂಡಿದ್ದ.

ಆ ಆಸಾಮಿಯ ಮುಗ್ಧತೆ-ಪೆದ್ದುತನ ಎರಡೂ ಧಾಳಾಗಿ ಕಾಣುತ್ತಿತ್ತು ಅದರಲ್ಲಿ.

ಬಹಳ ಜನರಿಗೆ ರಾಜಕೀಯ, ಚುನಾವಣೆ ಅಂದರೆ 'ಹೀಗೇನೆ.....' ಎಂಬ ಗ್ರಹಿಕೆ ಇರುತ್ತದೇನೊ!


ಇಂಥ ವಿಚಿತ್ರಗಳ ಬಗ್ಗೆ ಮಾತಾಡುತ್ತಿದ್ದಾಗಲೇ ಎಲೆಕ್ಷನ್‌ಗೆ ನಿಲ್ಲಲೆಂದೇ ಅಮೆರಿಕಾದಿಂದ ಬೆಂಗಳೂರಿಗೆ ಬಂದಿರುವ ಸಾಫ್ಟ್‌ವೇರ್ ಉದ್ಯೋಗಿ ರವಿಕೃಷ್ಣ ರೆಡ್ಡಿ ನಮ್ಮ ಕಚೇರಿಗೂ ಬಂದರು.

ರವಿ ಜಯನಗರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಚುನಾವಣೆಗೆ ನಿಲ್ಲುತ್ತಿದ್ದಾರೆ.

ಕರ್ನಾಟಕದ ರಾಜಕೀಯ ಕೆಟ್ಟು ಹೋಗಿದೆ, ನಾಯಕರು ದುಷ್ಟರಾಗಿದ್ದಾರೆ, ಜನತೆ ಅಸಹಾಯಕರಾಗಿದ್ದಾರೆ.... ಇದು ನಾವೆಲ್ಲಾ ಕಾಣುತ್ತಿರುವ ಸತ್ಯ. ಇದನ್ನು ಬದಲಿಸಬೇಕೆಂಬ ಕಾಳಜಿ ರವಿಯದು. ಅದಕ್ಕಾಗಿ ಅವರು ಇಂಟರ್‌ನೆಟ್‌ನಲ್ಲಿ ತಮ್ಮದೇ ಒಂದು ಬ್ಲಾಗ್ ಮಾಡಿಕೊಂಡಿದ್ದಾರೆ. ಐಟಿ ಉದ್ಯೋಗಿಗಳ ಬೆಂಬಲ ಕೇಳುತ್ತಿದ್ದಾರೆ. ಬೀದಿ ಬದಿ ಭಾಷಣ ಮಾಡಿ, ಜನರಿಂದಲೇ ಹಣ ಸಂಗ್ರಹಿಸಿ ಓಟು (ಬೆಂಬಲ) ಪಡೆಯಬೇಕೆಂಬ ತವಕ ಅವರಿಗೆ. ಈ ನಡುವೆ ರವಿಗೆ ಕೆಲವು ಬುದ್ಧಿಜೀವಿಗಳು ಸಿಕ್ಕಿ ಸೀದಾ ಸರ್ವೋದಯ ಕರ್ನಾಟಕವೆಂಬ ಪಕ್ಷದವರ ಹತ್ತಿರ ಕರೆದುಕೊಂಡು ಹೋಗಿ ಆ ಪಕ್ಷದ ಅಭ್ಯರ್ಥಿಯಾಗಿ ನಿಲ್ಲುವಂತೆ ಕೇಳಿದರಂತೆ.

ಪಾರ್ವತೀಶ
ಬಿಡಿ ಚಿತ್ರಗಳು

ಕರ್ನಾಟಕದ ಭೂಗತ ಸಿಪಿಐ ಮಾವೋವಾದಿ ಪಕ್ಷಕ್ಕಿಂತಲೂ ರಹಸ್ಯವಾಗಿದೆ ಈ ಸರ್ವೋದಯ ಪಕ್ಷದ ಚಟುವಟಿಕೆ. ಅರ್ಥಾತ್ ಸರ್ವೋದಯ ಎಲ್ಲಿದೆ ಎಂಬುದೇ ಯಾರಿಗೂ ಗೊತ್ತಾಗುತ್ತಿಲ್ಲ, ಒಂದು ಪ್ರಚಾರವಿಲ್ಲ, ಸಂಘಟನೆಯಿಲ್ಲ, ಹೋರಾಟವಿಲ್ಲ, ಇಷ್ಟು ಸಾಲದೆಂಬಂತೆ ಮೊನ್ನೆ ಇಡೀ ಸರ್ವೋದಯವನ್ನು ಬಿಎಸ್‌ಪಿಯೊಳಗೆ ವಿಲೀನ ಮಾಡುವ ವಿಫಲ ಯತ್ನವೂ ನಡೆಯಿತು. ಇದೇ ಸರ್ವೋದಯ ಬಹಳ ಕಾಲ ಭೂಗತ ಲ್ಯಾಂಡ್ ಮಾಫಿಯಾಗಳ ಹಂಗಿನಲ್ಲೂ ಇತ್ತು.



ಇವೆಲ್ಲಾ ಗೊತ್ತಾದ ಮೇಲೆ ರವಿ ಈಗ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿಯುತ್ತಿದ್ದಾರೆ.

ಈ ರವಿ ಬಗ್ಗೆ ನಿಮಗೆ ಒಂದೆರಡು ಮಾತು ಹೇಳಬೇಕು.

ಬೊಮ್ಮಸಂದ್ರದ ರವಿ ರೈತ ಕುಟುಂಬದವರು. ಹಳ್ಳಿಯಲ್ಲೇ ಬೆಳೆದು ಸರಕಾರಿ ಶಾಲೆಯಲ್ಲಿ ಓದಿಕೊಂಡು ತಮ್ಮ ಬಾಲ್ಯ ಹಾದು ಸ್ವಸಾಮರ್ಥ್ಯದಿಂದ ಓದಿ ಅಮೆರಿಕಾದಲ್ಲಿ ಕೆಲಸ ಮಾಡಿಕೊಂಡಿದ್ದಾರೆ.

ತಾನು ಹುಟ್ಟಿ ಬೆಳೆದ ಊರು. ಜನ ಸಮಾಜದ ಬಗ್ಗೆ ಕಾಳಜಿಯಿಂದ ಚಡಿಪಡಿಸುವ ಜೀವ ಅದು. ರವಿ ಅತ್ಯುತ್ತಮ ಬರಹಗಾರ ಕೂಡಾ. ಬೇರೆಲ್ಲಾ ಟೆಕ್ಕಿಗಳು ತಾವು ದುಡಿದ ಹಣವನ್ನು ಸೈಟು, ಮನೆ, ಕಾರ್, ಶೇರು ಅಂತ ಹರಿಸಿದರೆ ರವಿ 2006 ರಲ್ಲಿ 'ವಿಕ್ರಾಂತ ಕರ್ನಾಟಕ' ಪತ್ರಿಕೆ ಮಾಡಿದರು. ಒಂದೇ ವರ್ಷದಲ್ಲಿ 30 ಲಕ್ಷ ಲಾಸ್ ಮಾಡಿಕೊಂಡು ನಂತರ ಕೈಬಿಟ್ಟರು. ಈಗ ಎಲೆಕ್ಷನ್‌ಗೆ ನಿಲ್ಲಲು ಹೊರಟಿದ್ದಾರೆ. 10 ಲಕ್ಷದವರೆಗೂ ಸ್ವಂತದ ದುಡ್ಡು ಖರ್ಚು ಮಾಡಲು ತಯಾರಾಗಿ ನಿಂತಿದ್ದಾರೆ.

ಸುಮ್ಮನೆ ಒಂದು ಸಾರಿ ಕಲ್ಪಿಸಿಕೊಳ್ಳಿ.

ಅಮೆರಿಕಾದಲ್ಲಿ ಕೈತುಂಬಾ ಸಂಬಳ ಗಳಿಸುತ್ತಾ ಎಲ್ಲಾ ಮರೆತು ಅರಾಮಾಗಿರುವ ಸಾವಿರಾರು ಕನ್ನಡಿಗರಿದ್ದಾರೆ. ಅವರಂತಿರದ ಯುವಕನೊಬ್ಬ ಇಲ್ಲಿ ಬಂದು ಪತ್ರಿಕೆ ಮಾಡುತ್ತಾನೆ. ಈಗ ರಜೆ ಹಾಕಿ ಸಂಬಳ ನಷ್ಟ ಮಾಡಿಕೊಂಡು, ಚುನಾವಣೆ ಅಂದರೆ ಜನ ಒಳ್ಳೆಯದನ್ನು ಆರಿಸಿಕೊಳ್ಳುವ ಒಂದು ಅವಕಾಶ ಅಂತ ತಿಳಿಸಲು ಒಡಾಡುತ್ತಿದ್ದಾನೆ.

ನಮ್ಮ ಈಗಿನ ರಾಜಕೀಯ ವಾಸ್ತವ ಹೀಗಿಲ್ಲಾ ಎಂಬುದು ನಮಗೆಲ್ಲಾ ಗೊತ್ತಿದೆ. ದುಡ್ಡು, ಜಾತಿ, ತೋಳ್ಬಲದ ರಾಜಕೀಯ ನಮ್ಮ ಪ್ರಜಾಪ್ರಭುತ್ವದ ಆಶಯಗಳ ಮಗ್ಗಲುಮುರಿದು ಮೂಲೆಗೆ ಕೂರಿಸಿಬಿಟ್ಟಿವೆ. ಇಂತಲ್ಲಿ ರವಿಕೃಷ್ಣ ರೆಡ್ಡಿ ಗುದ್ದಾಡುವುದೆಂತು?

ರವಿಗೆ ಇದನ್ನೆಲ್ಲಾ ವಿವರಿಸಿ, ನಿರಾಶರಾಗದಿರುವಂತೆ ಎಚ್ಚರವಹಿಸಿ ಅವರಲ್ಲಿ ಹುರಿದುಂಬಿಸಿ ಕಳುಹಿಸಿದೆವು. ಅವರ ಉಮೇದುವಾರಿಕೆ ನಮ್ಮೆಲ್ಲರ ಕಾಳಜಿಗಳ ಪ್ರತಿಧ್ವನಿಯೇ ಆಗಿದೆ. ಆದರೆ ಒಂದು ಕಿವಿ ಮಾತು.

ಎಲೆಕ್ಷನ್ ಬಂದಾಗ ಮಾತ್ರ ಗಡಿಬಿಡಿಯಿಂದ ಇಂತದಕ್ಕೆ ಕೈ ಹಾಕಿದರೆ ಜನ ಕಿವಿಗೊಡುವುದಿಲ್ಲ. ಇವತ್ತಿನ ಎಲೆಕ್ಷನ್ ಒಂದು ರೀತಿ ಬುಲ್ ಫೈಟಿಂಗ್ ಇದ್ದಂತೆ. ಅದಕ್ಕೆ ಸರಿಯಾದ ತಯಾರಿ, ಜನಬೆಂಬಲ, ಪರಿಕರಗಳೆಲ್ಲಾ ಬೇಕಾಗುತ್ತದೆ. ಇಲ್ಲದಿದ್ದರೆ ಹುಚ್ಚೆದ್ದು ಅಡ್ಡಾದಿಡ್ಡಿ ನುಗ್ಗಿಬರುವ ಗೂಳಿ ಅಡ್ಡಬಂದವರನ್ನು ತಿವಿದು ಬೀಳಿಸಿ, ಕುಂಡೆ ಮೇಲೊದ್ದು ಮುಂದಕ್ಕೋಡಿರುತ್ತದೆ. ಆದರ ಬದಲು ದೀರ್ಘಕಾಲ ಸತತವಾಗಿ ಜನಸಾಮಾನ್ಯರ ಜೊತೆಗೇ ಒಡನಾಡುತ್ತಾ ಅವರಲ್ಲಿ ಒಳಿತು ಕೆಡಕುಗಳ ಬಗ್ಗೆ ವಿವೇಚನಾ ಶಕ್ತಿ ಬೆಳೆಸುವುದೇ ನಮ್ಮ ಎದುರಿಗಿರುವ ತಕ್ಷಣದ ಹಾಗೂ ದೀರ್ಘಕಾಲೀನ ಏಕೈಕ ಪರಿಹಾರ.

ರವಿಕೃಷ್ಣರೆಡ್ಡಿಯವರ ಕಾಳಜಿಗಳನ್ನು ಗೌರವಿಸುತ್ತಾ ಅಭಿಮಾನಿಸುತ್ತಲೇ ಅವರಿಗೆ good luck ಹೇಳೋಣ.

ಟಿಕೆಟ್ಟು ಕೈಯೊಳಗಿದೆ. ರೈಲು ಹೋಗಾಗಿದೆ. ಆರ್.ವಿ. ಹರೀಶ್ ಎಂಬ ಓಬಿರಾಯನ ಕಾಲದ ನತದೃಷ್ಟ ವಿದ್ಯಾರ್ಥಿ ನಾಯಕನ ಪಾಲಿಗಿದು ಕೊನೆಯ ಯುದ್ಧ ಗೆದ್ದರೆ ಬಚಾವ್. ಸೋತರೆ ಪಾತಾಳ!

ನಾಯಕನೊಬ್ಬನ ದುರಂತ ಕತೆಗೆ ಉದಾಹರಣೆಯೋ ಎಂಬಂತೆ ಸದ್ಯ ಆರ್.ವಿ. ಹರೀಶ್ ಮಹಾಲಕ್ಷ್ಮಿ ಲೇಔಟಿಗೆ ಬಜೆಪಿ ಅಭ್ಯರ್ಥಿ. ಶತಗತಾಯ ಗೆಲ್ಲಲೇಬೇಕು. ಏಕೆಂದರೆ ಇದು ಆತನ ಅಳಿವುಉಳಿವಿನ ಪ್ರಶ್ನೆ. ಒಂದಾನೊಂದು ಕಾಲಕ್ಕೆ ಹರೀಶ್ ಕುಂತಲ್ಲೇ ಹುಕುಂ ಜಾರಿ ಮಾಡಿದನೆಂದರೆ ಬೆಂಗಳೂರಿನ ಅಷ್ಟೂ ಕಾಲೇಜುಗಳು ಬಂದಾಗುತ್ತಿದ್ದವು. ವಿದ್ಯಾರ್ಥಿಗಳು ಬೀದಿಗಿಳಿಯುತ್ತಿದ್ದರು. ತಾನೇ ಕರೆತಂದು ರೆಡಿ ಮಾಡಿದ ಮಾರ್ಕೆಟ್ ದೇವಿ ಒಂದಲ್ಲ ಎರಡು ಬಾರಿ ಗೆದ್ದು ಎಮ್ಮೆಲ್ಲೆಯಾದ. ಹರೀಶ್‌ಗೆ ಜಿಂದಾಬಾದ್ ಹೇಳಿಕೊಂಡಿದ್ದ ದೀಕೆ ಮಂತ್ರಿಯಾದ. ಪಕ್ಕಾ ಶಿಷ್ಯನಂತಿದ್ದ ಸಂಪಂಗಿ ಬಾಗೇಪಲ್ಲಿಯಿಂದ ಗೆದ್ದು ಶಾಸಕನಾದ. ಮತ್ತೊಬ್ಬ ಶಿಷ್ಯ ಹುಚ್ಚಪ್ಪ ಬೆಂಗಳೂರಿನ ಮೇಯರ್ ಆದ. ಜಿ. ಪದ್ಮಾವತಿಯಂಥ 'ಡಿ' ಗ್ರೂಪ್ ನೌಕರಳನ್ನು ಕರೆತಂದು ಕೌನ್ಸಿಲರ್ ಮಾಡಿ ಬೆಳೆಸಿದ ಹರೀಶ್‌ಗೆ ಇವತ್ತು ಆಕೆಯೇ ರಾಜಾಜಿನಗರದ ಕಾಂಗ್ರೆಸ್ ಟಿಕೆಟ್ಟಿಗೆ ಪ್ರತಿಸ್ಪರ್ಧಿಯಾಗುತ್ತಾಳೆಂದರೆ ಹರೀಶ್ ದುರಾದೃಷ್ಟ ಇನ್ನೆಷ್ಟಿರಬೇಡ?

1981 ರ ಸುಮಾರಿಗೆ ಕೆ.ಎಲ್.ಇ. ಕಾಲೇಜಿನ ವಿದ್ಯಾರ್ಥಿ ಹರೀಶ್ ಆ ಕಾಲಕ್ಕೆ ಜನಪ್ರಿಯ ವಿದ್ಯಾರ್ಥಿ ಮುಖಂಡ. ಜೀವರಾಜ್ ಆಳ್ವ ಆ ಕಾಲಕ್ಕೆ ಆತನ ಗಾಡ್‌ಫಾದರ್. ಬೆಂಗಳೂರಿನ ಆರ್.ಸಿ. ಕಾಲೇಜು, ಸೆಂಟ್ರಲ್ ಕಾಲೇಜು, ಗ್ಯಾಸ್ ಕಾಲೇಜು, ಆರ್.ವಿ. ಕಾಲೇಜು, ಮಹಾರಾಣಿ ಕಾಲೇಜು, ಶೇಷಾದ್ರಿಪುರಂ ಕಾಲೇಜುಗಳೇ ಆ ಕಾಲದ ವಿದ್ಯಾರ್ಥಿ ರಾಜಕಾರಣದ ಅಖಾಡಗಳು. ಒಂದೆಡೆ ಹರೀಶ್ ಸಿಂಡಿಕೇಟ್. ಮತ್ತೊಂದೆಡೆ ದಿವಾಕರ್ ಹೆಗಡೆಯ ನಡುವಿನ ಜಿದ್ದಾಜಿದ್ದಿಯೂ ತಾರಕಕ್ಕೇರಿತ್ತು. ಬಹುಶಃ ಹೆಗಡೆಯಂತೆ ಹರೀಶ್ ಗೂಂಡಾಗಿರಿಯ ಹಾದಿ ಹಿಡಿದಿದ್ದರೆ ಅಥವಾ ಮಾರ್ಕೆಟ್ ದೇವಿ ಶೈಲಿಯ ರಾಜಕಾರಣಕ್ಕಿಳಿದಿದ್ದರೆ ಆತ ಎಮ್ಮೆಲ್ಲೆ, ಮಂತ್ರಿಯಾಗಿ ಯಾವುದೋ ಕಾಲವಾಗಿರುತ್ತಿತ್ತು.

ಹರೀಶ್ ತೀರ ವೈ.ಎಸ್.ವಿ. ದತ್ತರಂತೆ ಬುದ್ಧಿಜೀವಿ ಕ್ಯಾಟಗರಿಯ ರಾಜಕಾರಣಿಯಲ್ಲ, ದೀಕೆ, ಸಂಪಂಗಿ ಮಾದರಿಯ ಪವರ್ ಪಾಲಿಟಿಕ್ಸೂ ಗೊತ್ತಿಲ್ಲ. ವಿನಾಕಾರಣ ದಾಂಡಿಗರನ್ನು ಗುಡ್ಡೆಹಾಕಿಕೊಂಡಿದ್ದು ಅನಗತ್ಯದ ಪೋಸು ಕೊಡುವುದು, ಪಕ್ಕಾ ಒರಟರ ಹಿಂಡಿನಲ್ಲಿ ಸಭ್ಯ ರಾಜಕಾರಣಿಯಂತೆ ಮಾತಾಡುವುದು ಹರೀಶ್ ಜಾಯಮಾನ. ನಾಟಕ ಗೊತ್ತಿಲ್ಲ, ಬೆಂಗಳೂರಿನ ರಾಜಕಾರಣಕ್ಕೆ ಬೇಕಾದ ಗಿಮ್ಮಿಕ್, ಚಮಕ್ ಮಾಡುವುದಿಲ್ಲ. ಯಾರೇ ಮಾಮೂಲಿ ಆಸಾಮಿ ಬಂದು ಏನೇ ಸಹಾಯ ಬೇಡಿದರೂ ಅದನ್ನು ಶ್ರದ್ಧೆಯಿಂದ ಮಾಡಿಕೊಡಲು



ನಟಿ ಮಹಿಮಾಳ ತತ್ವಜ್ಞಾನ!

"ಸೌಂದರ್ಯ ಕಾಪಾಡಿಕೊಳ್ಳುವುದು ವ್ಯವಸಾಯ ಮಾಡುವುದಕ್ಕಿಂತ ಕಷ್ಟ"

ನಟಿ ಹಾಗೂ ಮಾಡೆಲ್ ಮಹಿಮಾ ಚೌಧರಿ ಎಂಬಾಕೆ ನಿಮಗೆ ಗೊತ್ತಿರಬಹುದು. ಅವಳ ಸಂಶೋಧನೆ ಇದು.

ಮೊನ್ನೆ ಬಟ್ಟೆ ಅಂಗಡಿಯೊಂದರ ಉದ್ಘಾಟನೆಗೆ ಬಂದಿದ್ದ ಈ ಪೆದ್ದು ಸುಂದರಿ ಹಿಂದೂ ಪತ್ರಿಕೆಗೆ ವಿಶೇಷ ಸಂದರ್ಶನ ಕೊಟ್ಟು ಮಾತಾಡುತ್ತಾ ಈ ಕ್ರೂರ ಮಾತುಗಳನ್ನು ಹೇಳಿದ್ದಾಳೆ.

ತನ್ನ ಬಣ್ಣ ಬಿನ್ನಾಣಗಳು ಅತ್ಯದ್ಭುತ ಎಂದು ನಂಬಿಕೊಂಡಿರುವ ಈ ಬಳೀಹಾತೆ "ಸುಂದರವಾಗಿ ಕಾಣಿಸಿಕೊಳ್ಳುವುದು ತುಂಬಾ ಕಷ್ಟದ ಕೆಲಸ; ಮತ್ತದು ದುಬಾರಿ ಕೂಡ. ನನಗನ್ನಿಸುತ್ತೆ ಅದು ಕೃಷಿ ಮಾಡುವುದಕ್ಕಿಂತ ಕಠಿಣ ಅಂತ. ಬ್ಲೀಚಿಂಗ್, ಬೇಡದ ಕೂದಲು ಕೀಳುವುದು, ವ್ಯಾಕ್ಸಿಂಗ್ ಇಂತಾದೆಲ್ಲಾ ಎಷ್ಟು ಕಷ್ಟ ಗೊತ್ತಾ?"ಎಂದು ಕಣ್ಣರಳಿಸುತ್ತಾ ಹೇಳಿದ್ದಾಳೆ.

ಅಂದರೆ ಅವಳ ಪ್ರಕಾರ ಬಿಸಿಲಲ್ಲಿ ಒಣಗಿ, ಬಳಲುತ್ತಾ ಹೊಲ ಊಳುವುದು, ಕಳೇ ಕೀಳುವುದು, ಬಿತ್ತನೆ ಮಾಡಿ ಕುಂಟೆ ಹೊಡೆದು, ಕಟಾವು ಮಾಡಿ ಕಣ ತುಂಬಿಸಿ ಉಸ್ಸಪ್ಪಾ ಎನ್ನುವ ರೈತರ ಕಷ್ಟಕ್ಕಿಂತ ಸೌದರ್ಯ ಮೈಂಟೇನ್ ಮಾಡುವುದೇ ಕಷ್ಟದ ಕೆಲಸ ಅಂತಾಯಿತು...!

ತಾನು ತಿನ್ನೋ ಅನ್ನ ಎಲ್ಲಿಂದ ಬರುತ್ತೆ, ಕುಡಿಯೋ ಹಾಲು ಎಲ್ಲಿ ಹುಟ್ಟುತ್ತೆ ಎಂಬ ಕನಿಷ್ಠ ಮಾಹಿತಿಯೂ ಇರದ ಇಂಥ ದರಿದ್ರ ಸುಂದರಿಯರೇ ಯುವ ಜನತೆಯ ಆದರ್ಶಗಳಂತೆ ಮೆರೆಯುತ್ತಿದ್ದಾರೆ.

ರೈತರ ಬದುಕಿನ ಕಷ್ಟಗಳಾಗಲಿ, ಆತ್ಮಹತ್ಯೆಗಳಾಗಲಿ ಮಹಿಮಾಳಂಥವರ ಅನ್ಯ ಜಗತ್ತನ್ನು ಎಂದು ಪ್ರವೇಶಿಸುವುದೇ ಇಲ್ಲ.

ಆದರೆ ಇವತ್ತಿನ ಭಾರತಕ್ಕೆ ಇವೆರಡೂ ಮುಖಗಳಿರುವುದಂತೂ ನಿಜ.

ಕನ್ನಡಿಗರ ಬುಟ್ಟಿಗೆ ಕಟ್ಟಾ ಕನ್ನ



ಒಂದಲ್ಲ ಎರಡು ಬಾರಿ ಗೆಲ್ಲಿಸಿ ಮಂತ್ರಿ ಮಾಡಿದ ಶಿವಾಜಿನಗರವನ್ನು ತೊರೆದು ಏಕಾಏಕಿ ಹೆಬ್ಬಾಳಕ್ಕೆ ವಲಸೆ ಹೋದ ಕಟ್ಟಾನ ಹುನ್ನಾರದ ಹಿಂದಿನ ನಿಗೂಢವೇ ಬೇರೆಯಿದೆ. ಯಾವತ್ತು ಚುನಾವಣಾ ಆಯೋಗ ನಕಲಿ ಮತದಾರರನ್ನು ಪಟ್ಟಿಯಿಂದ ಕಿತ್ತುಹಾಕಲಾರಂಭಿಸಿತ್ತೋ ಆದರ ಬಿಸಿ ಮೊದಲು ತಟ್ಟಿದ್ದು ಕಟ್ಟಾಗೆ!

ಪದ್ಮನಾಭನಗರ, ಕತ್ರಿಗುಪ್ಪೆ ಬ್ಯಾಂಕ್ ಕಾಲೋನಿಯ ಸರಿಸುಮಾರು ಎಂಟು ಸಾವಿರಕ್ಕೂ ಹೆಚ್ಚು ಮಂದಿ ನಾಯ್ಡುಗಳನ್ನು ಕಟ್ಟಾ ಶಿವಾಜಿನಗರದ ಮತದಾರರ ಪಟ್ಟಿಗೆ ಸೇರಿಸಿದ್ದ. ಆಂಧ್ರ ಮೂಲದ ಈ ವಲಸೆಕೋರ ಕಮ್ಮಾನಾಯ್ಡುಗಳು ಕಳ್ಳ ಅಡ್ರೆಸ್ ಕೊಟ್ಟು ಹೇಗೋ ಶಿವಾಜಿನಗರದ ಮತದಾರರ ಪಟ್ಟಿಗೆ ಸೇರಿಹೋಗಿದ್ದರು. ಪ್ರತಿ ಚುನಾವಣೆಯಲ್ಲಿ ತಪ್ಪದೇ ಬಂದು ಬಜೆಪಿಗೆ ಮತ ಹಾಕುತ್ತಿದ್ದ ಇಂಥ ಕಳ್ಳ ಓಟರುಗಳಿಂದಲೇ ಕಟ್ಟಾ ಎರಡು ಬಾರಿ ಗೆದ್ದಿದ್ದ!

ಇತ್ತ ಎಲೆಕ್ಷನ್ ಕಮೀಷನ್ ಬೋಗಸ್ ಓಟರ್‌ಗಳ ಹೆಸರನ್ನು ಕಿತ್ತು ಹಾಕುತ್ತಿದ್ದಂತೆ ಕಟ್ಟಾನ ಅಷ್ಟೂ ಬೋಗಸ್ ಓಟುಗಳು ಮಣ್ಣು ಪಾಲಾದವು. ಹೇಗೂ ಗೆಲ್ಲುವುದಿಲ್ಲ, ಪಕ್ಕದ ಹೆಬ್ಬಾಳಕ್ಕೆ ಬಂದರೆ ಅಲ್ಲಾಗಲೇ ಬೇರು ಬಿಟ್ಟ ಬಜೆಪಿಯನ್ನು ಬಳಸಿಕೊಂಡಂತಾಯ್ತು, ಜೊತೆಗೆ ಯಥೇಚ್ಛವಾಗಿರುವ ಸರ್ಕಾರಿ ಭೂಮಿಯನ್ನು ದೋಚಿದಂತಾಯ್ತು!

ಇಂಥ ಲೆಕ್ಕ ಹಾಕಿಯೇ ಹೆಬ್ಬಾಳಕ್ಕೆ ವಲಸೆ ಬಂದ ಕಟ್ಟಾ ನಾಯ್ಡುವಿನಿಂದಾಗಿ ಹೆಬ್ಬಾಳಕ್ಕೆ ಬಜೆಪಿ ಅಭ್ಯರ್ಥಿಯಾಗಕ್ಕೆ ಇದ್ದ ಮುನಿಕೃಷ್ಣರ ಕನಸಿಗೆ ಬೆಂಕಿ ಬಿದ್ದಷ್ಟೇ ಅಲ್ಲ, ಬೆಂಗಳೂರು ಎಮ್ಮೆಲ್ಲೆಗಳ ಪೈಕಿ ಒಬ್ಬ ಕನ್ನಡಿಗನ ಸಂಖ್ಯೆ ಕಮ್ಮಿಯಾಗಿತ್ತು, ತನ್ಮೂಲಕ ಆಂಧ್ರಾ ಮೂಲದ ಒಬ್ಬ ನೆಲಗಳ್ಳ ಶಾಸಕನ ಸಂಖ್ಯೆಯೂ ಹೆಚ್ಚಾದಂತಾಯ್ತು.

ನಮ್ಮ ಆಫೀಸ್‌ನಲ್ಲಿ ಮೊನ್ನೆ ನಡೆದ ಒಂದು ನ್ಯಾಯ ಪಂಚಾಯಿತಿ ಇದು.

ನಮ್ಮ ಕ್ಯಾಪ್ಟನ್ ಗೌರಿಯವರು ಮತ್ತು ಕವಿತಾ ಪಾಲುದಾರಿಕೆ ಮೇಲೆ ತಮ್ಮ ನೆಲಮಂಗಲದ ತೋಟಕ್ಕೆ ಇತ್ತೀಚೆಗೆ ಗಬ್ಬಾಗಿದ್ದ ಒಂದು ನಾಟಿ ಹಸು ಕೊಂಡು ತಂದರು. ಅಲ್ಲಿ ಈಗಾಗಲೇ ಮೂರುವರೆ ವರ್ಷದ ಪುಟಾಣಿ ಇಶಾ ಲಂಕೇಶ್ ಹಾಗೂ ಗೌರಿ ನಡುವೆ ಪಾಲುದಾರಿಕೆಯಲ್ಲಿ ಕುರಿ-ಕೋಳಿ ಸಾಕಾಣಿಕೆ ನಡೆಯುತ್ತಿದೆ. ಮತ್ತೆ ಹಸು ವಿಚಾರಕ್ಕೇ ಬರುವುದಾದರೆ ತೋಟಕ್ಕೆ ಬಂದ ಒಂದೇ ವಾರದಲ್ಲಿ ಹಸು ಈಯಿತು. ಇಶಾ ತಕ್ಷಣ 'ಪುಟ್ಟ ಕರು ನಂದು' ಅಂತ claim ಮಾಡಿಕೊಂಡಿದ್ದಾಳೆ. ಆದರೆ ಹಸು ವಿಚಾರ ಬಂದಾಗ ಕವಿತಾ 'ಮುಂದಿನ ಅರ್ಧ ಭಾಗ ನಿನಗೆ, ಉಳಿದದ್ದು ನಂಗೆ' ಅಂದರಂತೆ. ನಮ್ಮ ಕ್ಯಾಪ್ಟನ್ ಹಸುವಿನಂತೆ 'ಹೂಂ' ಎಂದು ತಲೆ ಅಲ್ಲಾಡಿಸಿ ಒಪ್ಪಿಕೊಂಡು ಆಫೀಸಿಗೆ ಬಂದರು. ಮಾರನೆ ದಿನ ತೋಟದ ಕೆಲಸಗಾರ ಲಿಂಗರಾಜು ಫೋನ್ ಮಾಡಿ

ಮೇವು ನಿಂದು ಹಾಲು ನಂದು


"ಅವ್ವಾರೆ, ಹಸುಗೆ ಒಂದು ಗಾಡಿ ಒಣಹುಲ್ಲು ತರಿಸಿಕೊಡಿ" ಅಂತ ಕೇಳಿದ. ಕವಿತಾ "ಅದು ನನ್ನ ಡಿಪಾರ್ಟ್‌ಮೆಂಟ್ ಅಲ್ಲ, ಹಸುವಿನ ಮುಂದಿನ ಭಾಗ ಗೌರಿದಾದ್ದರಿಂದ ಹುಲ್ಲು ತರಿಸೋ ಜವಾಬ್ದಾರಿ ನಿಮ್ಮದೆ" ಅಂತ ಲಾಯರ್ ಪಾಯಿಂಟ್ ಹಾಕಿ ಜಾರಿಕೊಂಡು ಬಿಡಬೇಕೆ!

ಸರಿ ಅಂತ ನಮ್ಮ ಸಂಪಾದಕರೀಗ ನಾಗಮಂಗಲದಿಂದ ಐದು ಸಾವಿರ ರೂಪಾಯಿಗೆ ಮೂರು ಮಾರು ಹುಲ್ಲು ತರಿಸಿದ್ದರೆ ಕವಿತಾ-ಇಶಾ ಜೋಡಿ ತಮ್ಮ ಪಾಲಿನ ಹಸುವಿನ ಎರಡನೇ ಭಾಗದಿಂದ ಗಿಣ್ಣು ಹಾಲು ಪಡೆದುಕೊಂಡು ಸಿಹಿ ಮಾಡಿಕೊಂಡು ತಿನ್ನುತ್ತಿದ್ದಾರೆ. ನೀವೇ ಹೇಳಿ ನ್ಯಾಯ ಎಲ್ಲಿದೆ?



"ಓಟು ಬೇಕಾದರೆ ಕೇಳು ಕೊಡ್ತೀವಿ. ಸೀರಿ ಉಡಸಾಕೆ ನೀನ್ಯಾರು?" ಹೊನ್ನಾಳಿ ಅಕ್ಕಪಕ್ಕದ ಹಳ್ಳಿಯ ಹೆಣ್ಣುಮಕ್ಕಳನ್ನು ಬಜೆಪಿ ಸಮಾವೇಶಕ್ಕೆ ರೇಣುಕಾಚಾರ್ಯ ಕರೆಯಲು ಹೋಗಿ ಸೀರೆ ಕೊಡುವ ಆಮಿಷ ಒಡ್ಡಿದಾಗ ಹಳ್ಳಿಯ ಹೆಣ್ಣುಮಕ್ಕಳು ರೇಣುಕಾಚಾರ್ಯನಿಗೆ ಹೀಗೆ ಹೇಳಿದರೆಂಬ ವದಂತಿ ಮಾರ್ಚ್ ಕೊನೆಯ ವಾರದಲ್ಲಿ ಅಂದರೆ ಕುರುಬ ಸಮಾಜದವರಿಂದ ಮೂತಿಗಿಕ್ಕಿಸಿಕೊಳ್ಳುವುದಕ್ಕೆ ಸ್ವಲ್ಪ ಮುಂಚೆ ಹಬ್ಬಿತ್ತು.

ರೇಣುಕಾಚಾರ್ಯನ ಗ್ರಹಚಾರ ನೆಟ್ಟಗಿಲ್ಲವೆನಿಸುತ್ತಿದೆ. ಈ ಹಿಂದೆ ದಾವಣಗೆರೆಯ ಜಿಲ್ಲಾ ರಕ್ಷಣಾಧಿಕಾರಿ ಸೋನಿಯಾ ನಾರಂಗ್ ಅವರನ್ನು ಎಲ್ಲ ಉಗ್ರ ದೇವತೆಯರಿಗೂ ಹೋಲಿಸಿ ಮಾತನಾಡಿ ಆಕೆಯಿಂದ ನಾಲ್ಕು ಬಿಗಿಸಿಕೊಂಡಿದ್ದ. ಈಗ ಮತ್ತೆ ಅದೇ ಸೋನಿಯಾ ನಾರಂಗ್ ವರ್ಗವಾಗಿ ಬಂದು ಚುನಾವಣೆಯ ಸಂದರ್ಭದಲ್ಲಿ ಹೊನ್ನಾಳಿಗೆ ಅರೆ ಸೇನಾಪಡೆ ಕರೆಸುತ್ತೇನೆಂದು ಹೇಳುತ್ತಿರುವುದು ರೇಣುಕಾಚಾರ್ಯನಿಗೆ ಬಿಸಿ ತುಪ್ಪ ಗಂಟಲಲ್ಲಿ ಸಿಕ್ಕಿಹಾಕಿಕೊಂಡಂತಾಗಿದೆ. ಇದೇ ಹೊತ್ತಿಗೆ ಇದುವರೆಗೂ ರೇಣುಕಾಚಾರ್ಯನ ಪಾಳಯದಲ್ಲಿದ್ದು ಈಗ ರೇಣುಕಾಚಾರ್ಯನ ಸಕಲ ದುರ್ಗುಣಗಳನ್ನು ಬಹಿರಂಗಪಡಿಸುತ್ತಿರುವ ಬಜೆಪಿಯ ಮುಖಂಡ ಎಚ್. ನಾರಾಯಣ ಎಂಬಾತ ಬಜೆಪಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತೇನೆಂದು ಹೇಳುತ್ತಿದ್ದಾನೆ. ಈ ಎರಡೂ ಇಕ್ಕಟ್ಟುಗಳ ನಡುವೆಯೇ ರೇಣುಕಾಚಾರ್ಯ ಚುನಾವಣೆಯ ಸಂದರ್ಭದಲ್ಲಿ ಹಂಚಲು ಕಳ್ಳದಾರಿಯಲ್ಲಿ ಭರ್ಜರಿಯಾಗಿ ಸೀರೆಗಳನ್ನು ಸಂಗ್ರಹಿಸಿ ತೆಗೆದುಕೊಂಡು ಹೋಗುತ್ತಿರುವಾಗಲೇ




ಮಾರ್ಕೆಟ್ ದೇವಿ, ಸೋಮಣ್ಣ, ನರೇಂದ್ರಬಾಬು, ಬಸವನಗುಡಿಯ ಚಂದ್ರಶೇಖರ್ ಥರದವರ ಪಕ್ಕಾ ವೃತ್ತಿ ರಾಜಕಾರಣದ ಟ್ರಿಕ್ಸುಗಳ ಮುಂದೆ ಹರೀಶ್ ಯಾವತ್ತಿಗೂ ಸಪ್ಪೆ ಹೊಡೆಯುತ್ತಾರೆ. ಬಹುಶಃ ಹರೀಶ್ ತಾಕತ್ತಿಗೆ ಮತ್ತು ಸಿಕ್ಕ ಅವಕಾಶಗಳಿಗೆ ಆತ ಯಾವುತ್ತೋ ಎಮ್ಮೆಲ್ಲೆಯಾಗಬೇಕಿತ್ತು. ಆದರೂ ಯಾವುದೂ ಆಗಲಿಲ್ಲ. ಆರ್.ವಿ. ಹರೀಶ್ ನತದೃಷ್ಟ ನಾಯಕನ ಪಾಲಿಗಿದು ಕೊನೆಯ ಯುದ್ಧ. ಗೆದ್ದರೆ ಬಚಾವ್. ಸೋತರೆ ಪಾತಾಳ!


ಹರೀಶ್ ಎಂಬ ನತದೃಷ್ಟನ ಕೊನೆಯ ಕಾಳಗ


...ೋಗುತ್ತಾರೆ. ಹಾಗೇ ತನ್ನ ನಾಯಕರಂತಿದ್ದ ಆಳ್ವ, ...ಗಡೆ ಥರದವರಿಗೆ ಜಿಂದಾಬಾದ್ ಕೂಡ ಹಾಕಿಸುತ್ತಾರೆ.

ಮಾರ್ಕೆಟ್ ದೇವಿ, ಸೋಮಣ್ಣ, ನರೇಂದ್ರಬಾಬು, ...ಸವನಗುಡಿಯ ಚಂದ್ರಶೇಖರ್ ಥರದವರ ಪಕ್ಕಾ ...ೃತ್ತಿ ರಾಜಕಾರಣದ ಟ್ರಿಕ್ಸುಗಳ ಮುಂದೆ ಈ ಕಾರಣಕ್ಕೇ ...ರೀಶ್ ಸಪ್ಪೆ ಹೊಡೆಯುತ್ತಾರೆ. ಬಹುಶಃ ಹರೀಶ್ ...ಕತ್ತಿಗೆ ಮತ್ತು ಸಿಕ್ಕ ಅವಕಾಶಗಳಿಗೆ ಆತ ಯಾವುತ್ತೋ ...ಮ್ಮೆಲ್ಲೆಯಾಗಬೇಕಿತ್ತು.

ಅದೇನೋ ಅದೃಷ್ಟದ ವಿಷಯದಲ್ಲಿ ಹರೀಶ್ ...ರುವಿನಿಂದಲೂ ನತದೃಷ್ಟ. 1994 ರ ವಿಧಾನಸಭಾ ...ನಾವಣೆಯಲ್ಲಿ ಹರೀಶ್ ಇನ್ನೇನು ರಾಜಾಜಿನಗರದಿಂದ ...ದ್ದೇಬಿಟ್ಟ ಅನ್ನುವಂಥ ಜನತಾದಳದ ಅಲೆಯಿತ್ತು. ...ನ್ನೊಂದಿಷ್ಟು ಶ್ರದ್ಧೆ ವಹಿಸಿದ್ದರೂ ಹರೀಶ್ ಗೆದ್ದು ...ಡುತ್ತಿದ್ದ. ಆದರೆ ಓವರ್ ಕಾನ್ಫಿಡೆನ್ಸ್ ಹರೀಶ್‌ರನ್ನು ...ೂಸಕಿ ಹಾಕಿತ್ತು. ಸರಿಸುಮಾರು ಹತ್ತು ಸಾವಿರ ...ುತಗಳಿಂದ ಬಿಜೆಪಿಯ ಸುರೇಶ್‌ಕುಮಾರ್ ...ದ್ದುಬಿಟ್ಟರು. ಜನತಾದಳದ್ದೇ ಸರ್ಕಾರ ಬಂದು ...ೇವೇಗೌಡರು ಮುಖ್ಯಮಂತ್ರಿಯಾಗಿ ಆನಂತರ ಪಟೇಲ್ ...ಯೆಮ್ಮಾದರೂ ಹರೀಶ್ ಲಕ್ಕು ಕುದುರಲಿಲ್ಲ. ಗುರು ...ಳ್ವ ಬಿಜೆಪಿಗೆ ಹೋದಾಗಲೂ ಹರೀಶ್ ಜಾತ್ಯತೀತ ...ಗೇ ಉಳಿದದು, ಜನತಾದಳವನ್ನೇ ಅಪ್ಪಿಕೊಂಡಿದ್ದು, ...ುಂದೆ ಆಳ್ವರನ್ನು ಉಪಾಯವಾಗಿ ಬಿಜೆಪಿ ಬಿಡಿಸಿದ ...ಡರು ಇನ್ನೇನು ಜನತಾದಳದ ಹೊಕ್ಕಬೇಕೆನ್ನುವಷ್ಟರಲ್ಲಿ ದಳದ ಬಾಗಿಲುಗಳನ್ನೇ ಬಂದ್ ಮಾಡಿದ್ದು, ಇದೇ ಕೊರಗಿಗೆ ಬಿದ್ದ ಆಳ್ವ ಕೊನೆಯುಸಿರೆಳೆದದ್ದು, ಅಲ್ಲಿಯತನಕ ಗಾಡ್‌ಫಾದರ್ ಆಗಿದ್ದ ರಾಮಕೃಷ್ಣ ಹೆಗಡೆಯವರೇ ಮುಂದೊಮ್ಮೆ ಸಾವಪ್ಪಿದ್ದು ಇತ್ಯಾದಿಗಳೆಲ್ಲವೂ









ರಾಜಕೀಯವಾಗಿ ಹರೀಶ್‌ರನ್ನು ತಬ್ಬಲಿಯನ್ನಾಗಿಸಿದವು.

ಪಟೇಲರ ಕೊನೇ ಕಾಲದಲ್ಲಿ ಸಿಕ್ಕ ಚಲನಚಿತ್ರ ನಿಗಮದ ಅಧ್ಯಕ್ಷಗಾದಿಯೊಂದೇ ಹರೀಶ್ ಪಾಲಿಗೆ ಸಿಕ್ಕ ಹುಲ್ಲುಕಡ್ಡಿಯ ಆಸರೆಯಾಗಿತ್ತು. ಮುಂದೆ 1997 ರ ಚುನಾವಣೆಯಲ್ಲಿ ಬಿಜೆಪಿ ಮತ್ತು ಸಂಯುಕ್ತ ದಳಗಳ ಮಧ್ಯೆ ಚುನಾವಣಾ ಹೊಂದಾಣಿಕೆಯಾಗಿ ವಿಧಿಯಿಲ್ಲದೇ ರಾಜಾಜಿನಗರವನ್ನು ಹರೀಶ್ ಸುರೇಶ್‌ಕುಮಾರ್‌ಗೆ ಬಿಟ್ಟುಕೊಡಬೇಕಾಯಿತು. ಕಾಂಗ್ರೆಸ್ ಗೆದ್ದು ಕೃಷ್ಣ ಮುಖ್ಯಮಂತ್ರಿಯಾಗುತ್ತಿದ್ದಂತೆ ಹರೀಶ್ ಶಿಷ್ಯರ ಪೈಕಿ ದೀಕೆ ಮಂತ್ರಿಯಾದರೆ ಮಾರ್ಕೆಟ್ ದೇವಿ ಬೆಂಗಳೂರಿನ ಪ್ರಭಾವಿ ಎಮ್ಮೆಲ್ಲೆಯಾಗಿದ್ದ. ಮತ್ತೊಬ್ಬ ಶಿಷ್ಯ ಸಂಪಂಗಿ ಬಾಗೇಪಲ್ಲಿಯಿಂದ ಗೆದ್ದಿದ್ದ. ಸ್ವತಃ ಹರೀಶ್ ತಮ್ಮ ಆರ್.ವಿ. ವೆಂಕಟೇಶ್ ಉರ್ಫ್ ಕುಟ್ಟಿಯನ್ನು ಕಾಂಗ್ರೆಸ್ ನಾಯಕರೇ ನಿಂತು ಎಮ್ಮೆಲ್ಸಿ ಮಾಡಿದರೆ, ಹರೀಶ್ ವನವಾಸದಲ್ಲಿ ಬೇಯುತ್ತಿದ್ದ. ಇನ್ನೊಬ್ಬ ಶಿಷ್ಯ ಹುಚ್ಚಪ್ಪ ಬೆಂಗಳೂರಿಗೆ ಮೇಯರಾಗಿದ್ದು ಹರೀಶ್ ಹತಾಶೆಯ ಪರಮಾವದಿಯಂತಿತ್ತು. ಹಳಿತಪ್ಪಿದ ಬಂಡಿಯಂತಾಗಿದ್ದ ಹರೀಶ್ 2004 ರ ಚುನಾವಣೆಯಲ್ಲಿ ಪಕ್ಷೇತರನಾಗಿ ಸ್ಪರ್ಧಿಸಬೇಕಿತ್ತು. ಆದರೆ ಹಳೇ ಶಿಷ್ಯ ದೇವಿ ಹರೀಶ್‌ರನ್ನು ಕರೆದೊಯ್ದು ಕೃಷ್ಣರಿಗೆ ಪರಿಚಯಿಸಿ ಮುಂದೊಮ್ಮೆ ಎಮ್ಮೆಲ್ಸಿ ಮಾಡ್ತೀವಿ ಎಂಬ ಭರವಸೆ ಕೊಡಿಸಿ ಹೇಗೋ ಕಾಂಗ್ರೆಸ್ಸಿಗೆ ಸೇರುವಂತೆ ಮಾಡಿಬಿಟ್ಟ!

ಹರೀಶ್ ದುರಾದೃಷ್ಟಕ್ಕೆ ಕಾಂಗ್ರೆಸ್‌ಗೆ ಬಹುಮತ ಬಾರದೇ ಜೆಡಿಎಸ್ ಜೊತೆ ಕೈಜೋಡಿಸಬೇಕಾಯ್ತು. ಆನಂತರ ಬಿಜೆಪಿ-ಜೆಡಿಎಸ್ ಸಮ್ಮಿಶ್ರ ಸರ್ಕಾರವೂ ಬಿದ್ದು ಇನ್ನೇನು ಹರೀಶ್ ರಾಜಾಜಿನಗರಕ್ಕೆ ಕಾಂಗ್ರೆಸ್ ಕ್ಯಾಂಡಿಡೇಟ್ ಆಗುತ್ತಾರೆಂದೂ ಅವರ 'ಶನಿದೆಸೆ' ಕಳೆಯಿತೆಂದೂ ಪ್ರತಿಯೊಬ್ಬರೂ ಲೆಕ್ಕ ಹಾಕಿದ್ದೇ ಹಾಕಿದ್ದು. ಬಹುಶಃ ಬಿ.ಕೆ. ಹರಿಪ್ರಸಾದ್ ಒಬ್ಬರನ್ನು ಸರಿ ಮಾಡಿಕೊಂಡಿದ್ದರೆ ರಾಜಾಜಿನಗರ ಹರೀಶ್ ಪಾಲಾಗುತ್ತಿತ್ತೋ ಏನೋ!





ಆದರೆ ಹರೀಶ್‌ಗೆ ಕೃಷ್ಣರ ನಂಟು. ತನ್ನ ಐವತ್ತನೇ ಹುಟ್ಟುಹಬ್ಬಕ್ಕೆ ಬಂದಿದ್ದ ದೀಕೆ 'ನಾನೇನೋ ಗಂಡಾಗುಂಡಿ ಮಾಡಿ ಮಂತ್ರಿಯಾದೆ. ಆದರೆ ಹರೀಶ್ ನನ್ನ ಗುರು ಅಷ್ಟೇ ಅಲ್ಲ, ಯಾವತ್ತೂ ಅಧಿಕಾರ ಹಿಡಿಯಲಿಲ್ಲ. ಇವತ್ತಲ್ಲಾ ನಾಳೆ ಹರೀಶ್‌ಗೆ ಇದೇ ರಾಜಾಜಿನಗರದಿಂದ ಕಾಂಗ್ರೆಸ್ ಟಿಕೆಟ್ ಕೊಡಿಸಿ ಗುರು ಋಣ ತೀರುಸ್ತೀನಿ!' ಎಂದಿದ್ದರ ಮೇಲೆಯೇ ವಿಪರೀತ ನಂಬಿಕೆ. ಇತ್ತ ಹರಿಪ್ರಸಾದ್‌ಗೆ ನಿಷ್ಠರಾಗಿದ್ದ ರಾಜಾಜಿನಗರದ ಐದೂ ಮಂದಿ ಕಾಂಗ್ರೆಸ್ ಕಾರ್ಪೊರೇಟರುಗಳು ಆತನಕ ಶಾಸಕ ನರೇಂದ್ರಬಾಬು ವಿರುದ್ಧ ಹರೀಶ್‌ನನ್ನು ಎತ್ತಿ ಕಟ್ಟುತ್ತಿದ್ದವರು ಚುನಾವಣೆ ಘೋಷಣೆಯಾಗಿದ್ದೇ ಉಲ್ಟಾ ಹೊಡೆದರು. ತಮ್ಮಲ್ಲೇ ಒಂದು ಸಿಂಡಿಕೇಟ್ ಅಂತ ಮಾಡಿಕೊಂಡು ಪ್ರಕಾಶ್‌ನಗರದ ಕೌನ್ಸಿಲರ್ ಪದ್ಮಾವತಿಯನ್ನು ಎಮ್ಮೆಲ್ಲೇ ಟಿಕೆಟ್ಟಿಗೆ ಹರೀಶ್ ವಿರುದ್ಧ ಛೂಬಿಟ್ಟರು.

ಇಂಥ ಹತಾಶೆಗೆ ಬಿದ್ದೇ ರಾತ್ರೋರಾತ್ರಿ ಬಿಜೆಪಿಯ ಬಾಗಿಲು ಬಡಿದ ಹರೀಶ್‌ಗೆ ಯಡಿಯೂರಪ್ಪ ಪಕ್ಕದ ಮಹಾಲಕ್ಷ್ಮಿ ಲೇಔಟನಿಂದ ಬಿಜೆಪಿ ಟಿಕೆಟ್ ಕೊಟ್ಟಿದ್ದಾರೆ. ಗೆಲ್ಲದ ಜಾಗಕ್ಕೆ ಬಿಟ್ಟೀ ಟಿಕೆಟ್ ಕೊಟ್ಟರೆಷ್ಟು ಬಿಟ್ಟರೆಷ್ಟು? ಪ್ರಚಾರ ಭರಾಟೆಯಿಂದಲೇ ಸಾಗಿದೆ. ದಾರುಣವೆಂದರೆ ಹರೀಶ್‌ಗಿಲ್ಲಿ ಅವರೆದುರೇ ಬೆಳೆದ ಕಾಂಗ್ರೆಸ್ಸಿನ ನರೇಂದ್ರ ಬಾಬು ಎದುರಾಳಿ. ಸಾಲದ್ದಕ್ಕೆ ಜೆಡಿಎಸ್ ಅಭ್ಯರ್ಥಿ ಗೋಪಾಲಯ್ಯನ ಪರವಾಗಿ ಕಮಲಾನಗರ ವೃಷಭಾವತಿಯಂಥ ಕನ್ನಡಿಗರ ಏರಿಯಾಗಳಲ್ಲಿ ಅಲೆಯೆದ್ದಿದೆ. ಇದನ್ನೆಲ್ಲ ಎದುರಿಸಿ ಗೆಲ್ಲುವುದು ಹರೀಶ್‌ಗೆಲ್ಲಿ ಸಾಧ್ಯ?

ಹಿಂದಿನಂತೆ ದಾಂಡಿಗ ಶಿಷ್ಯರ ಹಿಂದಿಲ್ಲ. ದುಡ್ಡು ಮೊದಲೇ ಇಲ್ಲ. ರಾಜಾಜಿನಗರದಂತೆ ಬೆಂಬಲಿಗರ ಏರಿಯಾಗಳೂ ಇಲ್ಲ. ಬಲಾಢ್ಯ ನರೇಂದ್ರ ಬಾಬು, ಮಹಾನ್ 'ತಲೆಗಾರ' ಗೋಪಾಲಯ್ಯನ ಮುಂದೆ ಹರೀಶ್ ಅದೇನಂಥ ಹೆಣಗಾಡುತ್ತಾರೋ? ಮಹಾಲಕ್ಷ್ಮಿ ಲೇಔಟ್ ಮಟ್ಟಿಗೆ ಹರೀಶ್ **Right man in wrong time!** ಗೆದ್ದರೆ ಬಚಾವು ಸೋತರೆ ಪಾತಾಳ. ಹರೀಶ್‌ರಂಥವರನ್ನು ಕಾಂಗ್ರೆಸ್ ಉಳಿಸಿಕೊಳ್ಳಲಿಲ್ಲ. ಕಾಲಕ್ಕೆ ತಕ್ಕಂತೆ ನಾಟಕ ಮಾಡದವರನ್ನು ಪವರ್ ಪಾಲಿಟಿಕ್ಸ್ ಒಪ್ಪುವುದಿಲ್ಲ.

ಹರೀಶ್ ಓರ್ವ ದುರಂತನಾಯಕನಲ್ಲದೇ ಮತ್ತೇನು?

■ ರಾ. ಸೋಮನಾಥ್

ಬಿಚ್ಚಿಬಿದ್ದ ರೇಣುಕಾಚಾರಿಯ ಸೀರೆ

...ಕ್ಕಿಬಿದ್ದು ಪೊಲೀಸರಿಂದ ಕೇಸು ...ಡಿಸಿಕೊಂಡಿದ್ದಾನೆ.


... ಏಪ್ರಿಲ್ ಹದಿನಾಲ್ಕರ ಬೆಳಗ್ಗೆಯಿಂದಲೇ ...ವಣಗೆರೆ ಶೇಖರಪ್ಪ ನಗರದ ಸಿ-ಬ್ಲಾಕ್‌ನಲ್ಲಿರುವ ...ಕ್ಸ್ ರೋಡ್‌ಲೈನ್ಸ್‌ನಿಂದ ಸುಮಾರು 20 ...ು, ಟ್ಯಾಕ್ಸ್‌ಗಳಲ್ಲಿ ಬಂಡಲ್‌ಗಳನ್ನು ...ದುಕೊಂಡು ಹೋಗುತ್ತಿರುವುದನ್ನು ಅಲ್ಲಿನ ...ರು ಗಮನಿಸಿದ್ದಾರೆ. ಈ ಕೆಲಸ ಸಂಜೆಗೆ ...ಗಿದುಹೋಗದೇ ಮಧ್ಯರಾತ್ರಿಯವರೆಗೂ ...ಂದುವರೆದಿದೆ. ಸುಮಾರು 30-40 ಮಂದಿ ...ರೆಗಳ ಬಂಡಲ್‌ಗಳನ್ನು ಬಿಚ್ಚಿ ಮತ್ತೆ ಪ್ಯಾಕ್ ...ಡುತ್ತಿರುವುದನ್ನು ಪ್ರತ್ಯಕ್ಷವಾಗಿ ಗಮನಿಸಿದ ...ಯ ನಿವಾಸಿಗಳಾದ ಷಣ್ಮುಖ, ವೀರೇಶ, ಶಂಕರ್ ಈ ಬಗ್ಗೆ ವಿಚಾರಿಸಿದಾಗ ಅಲ್ಲಿದ್ದವರು ಇವರನ್ನೇ ಗದರಿಸಿ ಕಳುಹಿಸಿದ್ದಾರೆ. ಏನೋ ಅಕ್ರಮ ನಡೆಯುತ್ತಿದೆ ಎಂದುಕೊಂಡು ಇವರು ನೇರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.



ಓಟಕಿತ್ತ ಬಿಜೆಪಿಗಳು

ಪೊಲೀಸರು ಬಂದದ್ದೇ ಅಲ್ಲಿದ್ದ ಬಿಜೆಪಿ ಪಕ್ಷದವರು ಕಾರು, ವ್ಯಾನು, ಟ್ಯಾಕ್ಸ್‌ಗಳನ್ನು ಅಲ್ಲಿಯೇ ಬಿಟ್ಟು ಬೈಕ್‌ಗಳನ್ನು ಹತ್ತಿ ಓಟಕಿತ್ತಿದ್ದಾರೆ. ಡಿಲಕ್ಸ್ ರೋಡ್‌ಲೈನ್ಸ್ ಒಳಪ್ರವೇಶಿಸಿದ ಪೊಲೀಸರು 300 ಬಂಡಲ್‌ಗಳಲ್ಲಿ ತುಂಬಿದ್ದ ಒಟ್ಟು 3,143 ಸೀರೆಗಳನ್ನು ಸೀಜ್ ಮಾಡಿದ್ದಾರೆ. ಇವುಗಳನ್ನು ತುಂಬಿಕೊಂಡು ಹೋಗಲು ತಂದಿದ್ದ ಒಂದು ಇಂಡಿಕಾ ಕಾರು (ಕೆಎ-17 ಎಂ 6248), ಒಂದು ಮಾರುತಿ ವ್ಯಾನ್ (ಕೆಎ-3 5890) ಮತ್ತು ಮೂರು ಟ್ರಾಕ್ಸ್ ವಾಹನಗಳನ್ನು ಪೊಲೀಸರು ಸೀಜ್ ಮಾಡಿ ಡಿಲಕ್ಸ್‌ರೋಡ್ ಲೈನ್ಸ್‌ಗೆ ಬೀಗ ಜಡಿದಿದ್ದಾರೆ. ವಿಶೇಷವೇನೆಂದರೆ ಪೊಲೀಸರು ಸೀಜ್ ಮಾಡಿದ ಇಂಡಿಕಾ ಕಾರು ಹೊನ್ನಾಳಿ ತಾಲ್ಲೂಕು ಬಿಜೆಪಿ ಅಧ್ಯಕ್ಷ ಎ.ಬಿ. ಹನುಮಂತಪ್ಪನದು! ಸೀಜ್ ಮಾಡಿದ ಇತರ ವಾಹನಗಳೆಲ್ಲವೂ ಬಿಜೆಪಿಯವರಿಗೆ ಸೇರಿದವುಗಳೇ ಆಗಿದ್ದವು!

ಇದೇ ತಿಂಗಳು 11, 12ರಿಂದ 300 ಬಂಡಲ್ ಸೀರೆಗಳು ಸೂರತ್‌ನ ಮಿಲ್ಲುಗಳಿಂದ ದಾವಣಗೆರೆಯ ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ಹೆಸರಿಗೆ ಬಂದಿದ್ದವು. ಈ ಅಂಗಡಿಯ ಮಾಲೀಕ ಯಾರ್‍ಯಾರಿಗೆ ಹೇಳುತ್ತಾರೋ ಅವರಿಗೆ ಈ ಸೀರೆಗಳನ್ನು ಕೊಡುತ್ತಿದ್ದೇನೆಂದು ಡಿಲಕ್ಸ್ ರೋಡ್‌ಲೈನ್ಸ್ ಮ್ಯಾನೇಜರ್ ರಾಜಶೇಖರ್ ಪೊಲೀಸರ ಹತ್ತಿರ ಹೇಳಿಬಿಟ್ಟಿದ್ದಾನೆ. ಪೊಲೀಸರು ಡಿಲಕ್ಸ್ ಟ್ರಾನ್ಸ್‌ಪೋರ್ಟ್ ಕಂಪೆನಿಯ ರಾಜಶೇಖರ್, ದಿಲೀಪ್‌ಕುಮಾರ್, ನಾಗೇಂದ್ರಪ್ಪ ಈ ಮೂವರನ್ನು ವಿಚಾರಣೆಗೊಳಪಡಿಸಿದಾಗ ಬಿಜೆಪಿಯವರಿಗಾಗಿ ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ಟೆಕ್ಸ್‌ಟೈಲ್ ಮಾಲೀಕ ಸೀರೆಗಳನ್ನು ತರಿಸಿದ್ದು ಬಹಿರಂಗಗೊಂಡಿದೆ. ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ಟೆಕ್ಸ್‌ಟೈಲ್ ಮಾಲೀಕ ಬಿ.ಎಸ್. ಉಮಾಪತಿ "ಸೀರೆಗಳು ನಮ್ಮವೆ, ಆದರೆ ಬಿಜೆಪಿಯವರಿಗೂ ನಾವು ತರಿಸಿದ ಸೀರೆಗಳಿಗೂ ಯಾವುದೇ ಸಂಬಂಧವಿಲ್ಲ" ಎಂದು ಹೇಳಿ ನುಣುಚಿಕೊಳ್ಳಲು ಯತ್ನಿಸಿ ವಿಫಲನಾಗಿದ್ದಾನೆ. ಇದೇ ಜಾಡಿನಲ್ಲಿ ತನಿಖೆಯನ್ನು ಮುಂದುವರೆಸಿದ ಪೊಲೀಸರು ಹೊನ್ನಾಳಿ ತಾಲ್ಲೂಕು ಕೂಲಂಬಿ ಗ್ರಾಮದಲ್ಲಿ ಬಿಜೆಪಿ ಪಕ್ಷದವನೊಬ್ಬನ ಮನೆಯಿಂದ 72 ಸೀರೆಗಳನ್ನು ವಶಪಡಿಸಿಕೊಂಡಿದ್ದಾರೆ.





ಕಾಂಗ್ರೆಸ್‌ನವರು ಕುತಂತ್ರ ನಡೆಸುತ್ತಿದ್ದಾರೆಂದು ಹಲಬುತ್ತಿರುವ ರೇಣುಕಾಚಾರ್ಯ "ಎಸ್.ಪಿ. ಸೋನಿಯಾ ನಾರಂಗ್ ಇಲ್ಲಿದ್ದರೆ ಮುಕ್ತ ಚುನಾವಣೆ ನಡೆಯುವುದಿಲ್ಲ. ಆಕೆಯನ್ನು ವರ್ಗಮಾಡಬೇಕು"ಎನ್ನುತ್ತಿದ್ದಾನೆ. ಸೀರೆಗಳ್ಳತನದ ಆಪಾದನೆಯನ್ನು ಗಾಳಿಗೆ ತೂರಲು ರೇಣುಕಾಚಾರ್ಯ ಏನೆಲ್ಲ ಕಸರತ್ತು ನಡೆಸುತ್ತಿದ್ದರೂ ಎ.ಪಿ.ಎಂ.ಸಿ. ಯಾರ್ಡ್ ಪೊಲೀಸರು ಮಾತ್ರ 20 ಲಕ್ಷ ರೂ.ಗಳ ಮಾಲನ್ನು ವಶಪಡಿಸಿಕೊಂಡು ರೇಣುಕಾಚಾರ್ಯ ಮತ್ತು ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ಮಾಲೀಕನನ್ನು ಒಳಗೊಂಡು ಒಟ್ಟು 11 ಮಂದಿಯ ಮೇಲೆ ಚುನಾವಣಾ ನೀತಿ ಸಂಹಿತೆಯ ಆಧಾರದ ಮೇಲೆ ಕೇಸ್ ಜಡಿದಿದ್ದಾರೆ.

ಚುನಾವಣೆ ಮುಗಿಯುವ ಹೊತ್ತಿಗೆ ರೇಣುಕಾಚಾರ್ಯ ಇನ್ನೂ ಯಾವ ಹುತ್ತದೊಳಗೆ ಕೈ ಹಾಕಿ ಯಾರ್‍ಯಾರನ್ನು ಬೀದಿಗೆ ತರುತ್ತಾನೋ ಎಂದು ಬಿಜೆಪಿ ನಾಯಕರಿಗೆ ಬೇಧಿ ಶುರುವಾಗಿರುವುದಂತೂ ಸತ್ಯ!

■ ಚಂದ್ರಶೇಖರ ತೋರಣಘಟ್ಟ

ಭರಣಿ ನೆರಳಲ್ಲಿ ಕೊಲೆ ಪಾತಕಿ ಮಂಟೇಲಿಂಗಯ್ಯ

ಮೈಸೂರು ನಗರದ ಮಂಟೇಲಿಂಗಯ್ಯನೆಂಬ ಕ್ರಿಮಿ ಅಮಾಯಕ ಹೆಂಗಸೊಬ್ಬಳನ್ನು ಕತ್ತರಿಸಿ ಕೊಂದು ಈಗ ಜೈಲು ಪಾಲಾಗಿರುವ ಘಟನೆ ನಿಮಗೂ ನೆನಪಿರಬಹುದು.



ಮಾತೆತ್ತಿದರೆ ಅಂಬೇಡ್ಕರ್ ಹಾಗೂ ದಲಿತ ಸಂಘದ ಹೆಸರು ಹೇಳುತ್ತಿದ್ದ ಮಂಟೇಲಿಂಗಯ್ಯ ಬೆಳೆದಿದ್ದೇ ಸುಭಾಷ್ ಭರಣಿ ತರಹದ ಉನ್ನತ ಅಧಿಕಾರಿಗಳ ಬೆಂಬಲದಿಂದ. ಇವನು "ಐಎಎಸ್ ಅಧಿಕಾರಿಗಳ ಸಂಘ" ಎಂದು ಲೆಟರ್‌ಹೆಡ್ ಒಂದನ್ನು ಪ್ರಿಂಟ್ ಮಾಡಿಕೊಂಡು, ಅದರಲ್ಲಿ ಸುಭಾಷ್ ಭರಣಿ, ಕೆ. ಶಿವರಾಂ ಮುಂತಾದವರ ಹೆಸರನ್ನೆಲ್ಲಾ ಯಾವುದೇ ಎಗ್ಗಿಲ್ಲದೆ ಬಳಸಿಕೊಳ್ಳುತ್ತಾ ಹಲವಾರು ಕ್ರಿಮಿನಲ್ ಕೆಲಸ ನಡೆಸುತ್ತಿದ್ದ. ಇದು ತಪ್ಪು ಎಂದು ಭರಣಿ ಒಮ್ಮೆಯೂ ಹೇಳಿದ ದಾಖಲೆಗಳಿಲ್ಲ.

ಸದಾ ಭಟ್ಟಂಗಿಗಳ ನೆರಳಲ್ಲಿರುವವರಿಗೆ ಕಣ್ಣು ಕುರುಡಾಗಿರುತ್ತದನ್ನಲು ಮಂಟೇಲಿಂಗಯ್ಯ ತರಹದವರಿಗೆ ಭರಣಿ ನೈತಿಕ ಬೆಂಬಲ ನೀಡಿದ್ದೇ ಸಾಕ್ಷಿ.

ಸೋದರಿ ರೇಣುಕಮ್ಮ ಈಗ ಪ್ರತಿಸ್ಪರ್ಧಿ

ಜಾತ್ಯತೀತ ದಳದ ದೇವೇಗೌಡರೇನಾದರೂ ಒಂದು ಖಡಕ್ ತೀರ್ಮಾನ ತೆಗೆದುಕೊಂಡರೆ ಟಿ. ನರಸೀಪುರದಲ್ಲಿ ಬಿಜೆಪಿಯ ಸುಭಾಷ್ ಭರಣಿ ವಿರುದ್ಧ ಜೆಡಿಎಸ್ ಅಭ್ಯರ್ಥಿಯಾಗಿ ಯಾರು ಅಖಾಡಕ್ಕಿಳಿಯುತ್ತಾರೆ ಗೊತ್ತೇ?

ಶ್ರೀಮತಿ ರೇಣುಕಮ್ಮ ಭರಣಿ! ಇವರು ಬೇರೆ ಯಾರೂ ಅಲ್ಲ; ಸ್ವತಃ ಸುಭಾಷ್ ಭರಣಿಯ ಸ್ವಂತ ಅಕ್ಕ!!

"ಸ್ವಂತ ತಮ್ಮನ ವಿರುದ್ಧ ಯಾಕೆ ನಿಲ್ಲುತ್ತಿದ್ದೀರಿ?" ಅಂತಾ ಕೇಳಿದವರಿಗೆ ಆಕೆ ಏನನ್ನೂ ಹೇಳುತ್ತಿಲ್ಲ. ಬದಲಾಗಿ ನರಸೀಪುರ ಜನರೇ ಹೇಳುವುದೇನೆಂದರೆ "ಸುಭಾಷ್ ಭರಣಿ ಸ್ವಂತ ಒಡಹುಟ್ಟಿದವರಿಗೇ ಕಷ್ಟದಲ್ಲಿದ್ದಾಗ ಏನೂ ಸಹಾಯ ಮಾಡಲಿಲ್ಲ, ಇನ್ನೂ ಸಂಬಂಧವೇ ಇರದ ನಮಗೆ ಏನು ಉಪಕಾರ ಮಾಡಲು ಸಾಧ್ಯ" ಎಂದು ಗೇಲಿ ಮಾಡುತ್ತಾರೆ.

ನರಸೀಪುರದಲ್ಲಿ ಭರಣಿಗಿರುವ ಜನಬೆಂಬಲ ಇಷ್ಟೆ.



ದಲಿತ ದ್ರೋಹಿ ಭರಣಿ

◉

ಕಳೆದ ಮೂರು ದಶಕಗಳಿಂದಲೂ ಐಪಿಎಸ್ ಆಫೀಸರ್ ಆಗಿ ಮೆರೆದ ಭರಣಿ ಒಬ್ಬ ಸಾಮಾನ್ಯ ದಕ್ಷತೆಯ ಅಧಿಕಾರಿಯಾಗಿದ್ದರು. ಆತ ದಮನಿತ ದಲಿತ ಸಮುದಾಯದ ಆತ್ಮವಿಶ್ವಾಸ ಬೆಳೆಸುವಂತೆ ಬಿಂಬಿಸಲ್ಪಟ್ಟಿದ್ದರು. ಇದನ್ನೇ ತನ್ನ ಇಮೇಜ್ ಬೆಳೆಸಿಕೊಳ್ಳಲು ಚತುರತೆಯಿಂದ ಬಳಸಿಕೊಂಡ ಭರಣಿ ಬಾಯಿಬಿಟ್ಟರೆ ಅಂಬೇಡ್ಕರ್, ಸಾಮಾಜಿಕ ನ್ಯಾಯ, ಸಮಾನತೆ ಎಂದು ಭಾಷಣ ಬಿಗಿಯುತ್ತಿದ್ದರು. ಆದರೆ ಈಗ ಈತನ ಬಣ್ಣ ಬಯಲಾಗಿದೆ.

◉

'ಅಭಿನವ ಅಂಬೇಡ್ಕರ್' ಎಂದು ತನಗೆ ತಾನೇ ಪ್ರಚಾರ ಮಾಡಿಕೊಳ್ಳುತ್ತಿದ್ದ ಪೊಲೀಸ್ ಅಧಿಕಾರಿ ಸುಭಾಷ್ ಭರಣಿ ದಲಿತರಿಗೆಲ್ಲಾ ಕೈಕೊಟ್ಟು ದಲಿತ ವಿರೋಧಿ ಬಿಜೆಪಿಗೆ ಶರಣಾಗಿದ್ದಾರೆ.

ಮೊದಲಿನಿಂದಲೂ ಕೀರ್ತಿ ಶನಿ ಈ ಭರಣಿಯ ಬೆನ್ನಿಗೇರಿದ್ದ. ಈಗ ಅಧಿಕಾರ ವ್ಯಾಮೋಹದ ಶನಿ ಹೆಗಲೇರಿದೆ.

ಈ ಸುಭಾಷ್ ಭರಣಿ ರಾಜಕೀಯಕ್ಕೆ ಬಂದು ಇನ್ನೂ ಮೂರು ದಿನವೂ ಆಗಿಲ್ಲ. ಆದರೆ ಆಗಲೇ ನಕಲಿ ಮಾತು, ಡೋಂಗಿ ತರ್ಕ, ನಿರ್ಲಜ್ಜತೆಗಳ ಜೊತೆಗೆ ಪಕ್ಷಾಂತರದ ಕಲೆಯನ್ನು ಕರಗತ ಮಾಡಿಕೊಂಡಿರುವುದು ನಿಜಕ್ಕೂ ಬೆರಗು ಹುಟ್ಟಿಸುವಂತಿದೆ.

ಕಳೆದ ಮೂರು ದಶಕಗಳಿಂದಲೂ ಐಪಿಎಸ್ ಆಫೀಸರ್ ಆಗಿ ಮೆರೆದ ಭರಣಿ ಒಬ್ಬ ಸಾಮಾನ್ಯ ದಕ್ಷತೆಯ ಅಧಿಕಾರಿಯಾಗಿದ್ದರು. ಆತ ದಮನಿತ ದಲಿತ ಸಮುದಾಯದ ಆತ್ಮವಿಶ್ವಾಸ ಬೆಳೆಸುವಂತೆ ಬಿಂಬಿಸಲ್ಪಟ್ಟಿದ್ದರು. ಇದನ್ನೇ ತನ್ನ ಇಮೇಜ್ ಬೆಳೆಸಿಕೊಳ್ಳಲು ಚತುರತೆಯಿಂದ ಬಳಸಿಕೊಂಡ ಭರಣಿ ಬಾಯಿಬಿಟ್ಟರೆ ಅಂಬೇಡ್ಕರ್, ಸಾಮಾಜಿಕ ನ್ಯಾಯ, ಸಮಾನತೆ ಎಂದು ಭಾಷಣ ಬಿಗಿಯುತ್ತಿದ್ದರು. ಆದರೆ ಈಗ ಈತನ ಬಣ್ಣ ಬಯಲಾಗಿದೆ.





"ಖರ್ಗೆ, ಶ್ರೀನಿವಾಸ ಪ್ರಸಾದ್ ನನಗೆ ನಂಬಿಸಿ ಮೋಸ ಮಾಡಿದರು" ಎಂದು ಈಗ ಗೋಳಾಡುತ್ತಿರುವ ಭರಣಿಗೆ ರಾಜಕಾರಣದ ಪ್ರಾಥಮಿಕ ಮೌಲ್ಯವೂ ತಿಳಿದಿದ್ದಂತಿಲ್ಲ. ತನ್ನ ಸ್ವಂತ ಊರಾದ ತಿರುಮಕೂಡಲು ನರಸೀಪುರದಿಂದ ಚುನಾವಣೆಗೆ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ಕೇಳಿದ್ದ ಭರಣಿ ಟಿಕೆಟ್ ಸಿಗಲ್ಲ ಎಂದು ಗೊತ್ತಾದ ಕೇವಲ ಅರ್ಧ ಗಂಟೆಯಲ್ಲೇ ಕೋಮುವಾದಿ ಬಿಜೆಪಿಗೆ ಪಕ್ಷಾಂತರ ಮಾಡಿದ್ದಾರೆ.

ವಂಚಕ ರಾಜಕಾರಣಿಗಳಿಗೆ ಮಾತ್ರ ಸಾಧ್ಯವಿರುವ ಈ ಚೋರ ವಿದ್ಯೆ ಸುಭಾಷ್ ಭರಣಿಯಂಥ 'ಅಂಬೇಡ್ಕರ್ ಶಿಷ್ಯ'ನಿಗೆ ಹೇಗೆ ಸಿದ್ಧಿಸಿತು ಎಂದು ಹುಡುಕಲು ಹೊರಟರೆ ಭರಣಿಯ ಒಡಕು ವ್ಯಕ್ತಿತ್ವ ಗೋಚರವಾಗುತ್ತದೆ.

ಮನೆಗೆ ಮಾರಿ ಪರರಿಗೆ ಉಪಕಾರಿ

ಟಿ. ನರಸೀಪುರದ ಸೋಮನಾಥಪುರದ ಆಗರ್ಭ ಶ್ರೀಮಂತ ದಲಿತ ಕುಟುಂಬದಿಂದ ಬಂದ ಸುಭಾಷ್ ಭರಣಿ ಬಗ್ಗೆ ಅವರ ಬಂಧು ಬಳಗದವರಲ್ಲೇ ಗೌರವ ವಿಶ್ವಾಸವಿಲ್ಲ. ಇವರ ಕುಟುಂಬದ ಭರಣಯ್ಯ ಎಂಬುವರು ಸ್ವಾತಂತ್ರ ಪೂರ್ವದಲ್ಲೇ ಐಎಎಸ್ ಮಟ್ಟದ ಅಧಿಕಾರಿಯಾಗಿದ್ದವರು. ತಂದೆ ರಂಗನಾಥಯ್ಯ ಒಮ್ಮೆ ತಾಲ್ಲೂಕು ಪಂಚಾಯಿತಿ ಮೆಂಬರ್ ಆಗಿದ್ದರು. ಮೈಸೂರಲ್ಲಿ ಓದು ಮುಗಿಸಿ ಐಪಿಎಸ್ ಮಾಡಿಕೊಂಡ ಸುಭಾಷ್ ಭರಣಿ ಉನ್ನತ ಪೊಲೀಸ್ ಆಫೀಸರ್ ಆಗಿ ಕರ್ನಾಟಕದಲ್ಲಿ ಕಾಣಿಸಿಕೊಂಡಾಗ ದಲಿತ ಸಮುದಾಯದವರಿಗೆ ನಿಜಕ್ಕೂ ಥ್ರಿಲ್ ಆಗಿತ್ತು. ಅಕ್ಷರ ಹಾಗೂ ಅವಕಾಶ ವಂಚಿತ ದಮನಿತ ಸಮುದಾಯದ ಆಶಾಕಿರಣವೆಂಬಂತೆ ಭರಣಿ ಆಗ ಗೋಚರವಾಗಿದ್ದರು. ಆದರೆ ಅದೇ ಭರಣಿ ತನ್ನ ಅಧಿಕಾರದ ಹಾಗೂ ಸಾಮಾಜಿಕ ಸ್ಥಾನಮಾನ ಏರುತ್ತಿದ್ದಂತೆ ತನ್ನವರ್‍ಯಾರಿಗೂ ನೆರವಾಗದೇ ತನ್ನ ಸುತ್ತಲೇ ಸ್ವಾರ್ಥದ ಕೋಟೆ ಕಟ್ಟಿಕೊಂಡಿದ್ದರು. ಅದೇವೇಳೆ ಕೆಲ ದಲಿತ ಭಟ್ಟಂಗಿಗಳು ಭರಣಿ ಸುತ್ತಾ ಠಳಾಯಿಸುತ್ತಾ ಅವರ 'ಅಂಬೇಡ್ಕರವಾದಿ' ನಕಲಿ ಇಮೇಜ್ ಬೆಳೆಸುತ್ತಾ ಹೋದರು.

ಆದರೆ ಭರಣಿಯೊಳಗಿನ ಕ್ರೌರ್ಯ ಹಾಗೂ ಅಧಿಕಾರಶಾಹಿ ಠೇಂಕಾರವೂ ಆಗಲೇ ಬಯಲಾಯಿತು. ಬಿಟಿಎಂ ಲೇಔಟನಲ್ಲಿ ಮನೆ ಕಟ್ಟಿಸುತ್ತಿದ್ದ ಭರಣಿ ಆ ಕೆಲಸಕ್ಕೆ ಪೊಲೀಸ್ ಕಾನ್ಸ್‌ಟೇಬಲ್‌ಗಳನ್ನು ಕೂಲಿಯವರಂತೆ ಬಳಸಿಕೊಂಡಿದ್ದನ್ನು 'ಲಂಕೇಶ್ ಪತ್ರಿಕೆ'ಯೇ ಬಯಲಿಗೆಳೆದಿತ್ತು. ನಂತರ 2002 ರಲ್ಲಿ ಈದುವಿನಲ್ಲಿ ಪಾರ್ವತಿ ಹಾಜಿಮಾರನ್ನು ಪೊಲೀಸರು ಗುಂಡಿಟ್ಟು ಕೊಂದಾಗಲೂ ಅದರಲ್ಲಿ ಭರಣಿಯ ಪಾತ್ರವಿತ್ತು. ಮುಂದೆ ರಾಜ್ಯ ಕಾನೂನು ಮತ್ತು ಸುವ್ಯವಸ್ಥೆಯ ADGP ಯಾಗಿದ್ದ ಭರಣಿ ನಕ್ಸಲ್ ನಾಯಕ ಹಾಗೂ ಬುದ್ಧಿಜೀವಿ ಸಾಕೇತ್ ರಾಜನ್‌ರನ್ನು ಕೊಲ್ಲಿಸಿದರು. ಇವರನ್ನೆಲ್ಲಾ ಬಂಧಿಸಿ ವಿಚಾರಣೆಗೊಳಪಡಿಸಿ ಶಿಕ್ಷಿಸುವ ಅವಕಾಶವಿದ್ದರೂ ಭರಣಿ ಆ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಲೆಕ್ಕಿಸಿರಲಿಲ್ಲ. ಅದೇ ವೇಳೆ ಸಂಘ ಪರಿವಾರದ ಪುಂಡರು ರಾಜ್ಯಾದ್ಯಂತ ದಲಿತ-ಮುಸ್ಲಿಂ-ಕ್ರಿಶ್ಚಿಯನ್ನರ ಮೇಲೆ ಸತತ ದಾಳಿ ದೌರ್ಜನ್ಯಗಳನ್ನು ನಡೆಸುತ್ತಿದ್ದಾಗಲೂ 'ಅಂಬೇಡ್ಕರ್‌ವಾದಿ' ಭರಣಿ ಸಾಹೇಬರು ಗುಂಡುಕಲ್ಲಿನಂತೆ ಸುಮ್ಮನೆ ಕುಳಿತಿದ್ದರೆ ವಿನಃ ಆ ಸಮಾಜದ್ರೋಹಿಗಳನ್ನು ಮಟ್ಟಹಾಕುವ ಮನಸ್ಸು ಮಾಡಿರಲಿಲ್ಲ.

ಇಂಥ ಭರಣಿಯ ಹಿಪಾಕ್ರಸಿ ಪರಾಕಾಷ್ಠೆ ತಲುಪಿದ್ದು ಅವರು ಪೊಲೀಸ್ ಅಧಿಕಾರಿಯಾಗಿದ್ದಾಗಲೇ ಗೋಲ್ವಾಳ್ಕರ್ ಜನ್ಮದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿದಾಗ!

ಎರಡು ವರ್ಷದ ಹಿಂದೆ ಬೆಂಗಳೂರಿನ ಚೆಡ್ಡಿಗಳೊಮ್ಮೆ ಅಂಬೇಡ್ಕರ್ ಮತ್ತು ಗೋಲ್ವಾಳ್ಕರ್ ಜನ್ಮದಿನ ಆಚರಣೆ ಎಂದು ಹೇಳಿಕೊಂಡು ಕ್ರೀಡಾ ಸ್ಪರ್ಧೆ ಏರ್ಪಡಿಸಿದ್ದಾಗ ಈ ಭರಣಿ ಯಾವುದೇ ನಾಚಿಕೆಯಿಲ್ಲದೆ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಹಾಗೆ ಹೇಳಬೇಕೆಂದರೆ ಈ ಭರಣಿ ಕುಟುಂಬಕ್ಕೂ ಪುರೋಹಿತಶಾಹಿ ಬಿಜೆಪಿಗೂ ಮೊದಲಿಂದಲೂ ನೇರಾನೇರ ನಂಟಿದೆ. ಸುಭಾಷ್ ಭರಣಿ ತಮ್ಮ ರಾಘವೇಂದ್ರ ಭರಣಿ ಬಿಜೆಪಿ ಪಕ್ಷದ ಜಿಲ್ಲಾ ಪಂಚಾಯಿತಿ ಮೆಂಬರ್ ಆಗಿದ್ದಾತ.

ಅಂಬೇಡ್ಕರ್ ಹಾಗೂ ದಲಿತರ ಹೆಸರೇಳಿಕೊಂಡು ಕಾಲ ಹಾಕಿದ ಭರಣಿ ಬೆಂಗಳೂರಿನ ಬಿಟಿಎಂ ಲೇಔಟ್ ಹಾಗೂ ಸದಾಶಿವನಗರದಲ್ಲಿ ಭರ್ಜರಿ ಮನೆಗಳ

ಬಿ.ಸಿ. ಮೈಲಾರಪ್ಪ : ಕಾಪಿ ಹೊಡೆಯೋ ಮೇಸ್ಟ್ರಿಗೆ ಬಿಜೆಪಿ ಟಿಕೆಟ್

ಹಣ ದುರುಪಯೋಗ, ತನ್ನ ಪಿಹೆಚ್‌ಡಿ ವಿದ್ಯಾರ್ಥಿಗೆ ಕಾಪಿ ಹೊಡೆಯಲು ಪ್ರಚೋದನೆ, ತನ್ನ ವಿದ್ಯಾರ್ಥಿ ಬರೆದ ಪುಸ್ತಕದಿಂದ ತಾನೇ ಕಾಪಿ ಹೊಡೆದ ಸಾಧನೆ...

ಒಂದಾ ಎರಡಾ ಈ ಬಿ.ಸಿ. ಮೈಲಾರಪ್ಪನ ಮೇಲಿರುವ ಆಪಾದನೆ.


ಅಂದಹಾಗೆ ಅತ್ಯಂತ ಶಿಸ್ತಿನ, ಪ್ರಾಮಾಣಿಕರ ಪಕ್ಷವೆಂದು ಸುಳ್ಳುಸುಳ್ಳೇ ಹೇಳಿಕೊಳ್ಳುವ ಬಿಜೆಪಿಯು ಬೆಂಗಳೂರಿನ ಪುಲಕೇಶಿನಗರದಿಂದ ಸ್ಪರ್ಧಿಸಲು ಇದೇ ಮೈಲಾರಪ್ಪನಿಗೆ ಟಿಕೆಟ್ ಕೊಟ್ಟಿದೆ ಅಥವಾ ಮಾರಿಕೊಂಡಿದೆ ಎಂದರೂ ತಪ್ಪಲ್ಲ.

ವಿನಾಶ್ಚರ್ಯ ನೋಡಿ.

ಈ ಬಾರಿ ಬಿಜೆಪಿಯಿಂದ ಅನೇಕ ರಿಯಲ್ ಎಸ್ಟೇಟ್ ಖದೀಮರು, ಕಳ್ಳದಾರಿಯಲ್ಲಿ ಹಣ ಮಾಡಿಕೊಂಡಿರುವವರಿಗೆಲ್ಲಾ ಟಿಕೆಟ್ ಸಿಕ್ಕಿದೆ. ಹಾಗೆ ಟಿಕೆಟ್ ಖರೀದಿಸಿದವರೆಲ್ಲಾ 'ನಾವು ನ್ಯಾಯವಂತ'ರೆಂದೇ ಹೇಳಿಕೊಳ್ಳುತ್ತಿದ್ದಾರೆ. ಅವರ ಕತೆ ಹಾಳಾಗಲಿ ಬಿಡಿ.

ಆದರೆ ಡಾ|| ಬಿ.ಸಿ. ಮೈಲಾರಪ್ಪನ ಪುರಾಣ ಆ ತರಹದ್ದಲ್ಲ. ಬೆಂಗಳೂರು ವಿವಿಯ ಸೋಷಿಯಾಲಜಿ ವಿಭಾಗದಲ್ಲಿ ಮೇಸ್ಟ್ರಾಗಿದ್ದ ಮೈಲಾರಪ್ಪ ಪಿಹೆಚ್‌ಡಿ ಮಾಡುವಾಗ ಬೇರೆಯವರ ಪುಸ್ತಕದ ಮಾಹಿತಿ ಕದ್ದು ಬರೆದು ಸಿಕ್ಕಿಹಾಕಿಕೊಂಡಿದ್ದ.

'ಅಗ್ರಿಕಲ್ಚರ್ ಲೇಬರ್ ಎ ಸೋಷಿಯಾಲಾಜಿಕಲ್ ಸ್ಟಡಿ' ಎಂಬ ಈತನ ಘನಂದಾರಿ ಸಂಶೋಧನಾ ಗ್ರಂಥ ವಿವಾದವೆಬ್ಬಿಸಿತ್ತು. ಕೊನೆಗೆ ತನಿಖೆ ಮಾಡಲಾಗಿ ಜಿ. ಸತ್ಯನಾರಾಯಣ ಎಂಬುವವರು 1992ರಲ್ಲಿ ಬರೆದಿದ್ದ 'ಚೇಂಜಿಂಗ್ ಅಗ್ರಿರಿಯನ್ ಸ್ಟ್ರಕ್ಚರ್ ಅಂಡ್ ಲೇಬರ್ ರಿಲೇಷನ್ಸ್' ಹಾಗೂ ಡ್ಯಾನಿಯಲ್ ಥೋರ್ನರ್ ಎಂಬಾತನ 'ದಿ ಅಗ್ರಿರಿಯನ್ ಪ್ರಾಸ್ಪೆಕ್ಟ್ಸ್ ಇನ್ ಇಂಡಿಯಾ' ಎಂಬ ಪುಸ್ತಕಗಳನ್ನು ಹೋಲ್‌ಸೇಲಾಗಿ ಕದ್ದು ಈ ಮೈಲಾರಿ ತನ್ನ ಪಿಹೆಚ್‌ಡಿ ಪ್ರಬಂಧ ಬರೆದುಕೊಟ್ಟಿದ್ದ ಎಂಬುದು ಸಾಬೀತಾಗಿತ್ತು. ಆಮೇಲೆ ಇವನ ವಿದ್ಯಾರ್ಥಿ ವೆಂಕಟರಮಣಪ್ಪನಿಗೂ ಇದೇ ರೀತಿ ಕಾಪಿ ಹೊಡೆಯಲು ಹೇಳಿಕೊಟ್ಟು ಸಿಕ್ಕಿ ಬಿದ್ದಿದ್ದ ಮೈಲಾರಿ. ಕೊನೆಗೆ ಬೆಂಗಳೂರು ವಿವಿಯ ದೂರ ಶಿಕ್ಷಣ ಕೇಂದ್ರದ ನಿರ್ದೇಶಕನಾಗಿ ವಕ್ಕರಿಸಿದ ಮೈಲಾರಿ ಲಕ್ಷಾಂತರ ರೂಪಾಯಿ ಕದ್ದು ಸಿಕ್ಕಿಹಾಕಿಕೊಂಡ. ರಾಜ್ಯಪಾಲ ಚತುರ್ವೇದಿಯವರನ್ನೇ ಏಕವಚನದಲ್ಲಿ ಹೀಯಾಳಿಸಿದ್ದ. ಅಂತಿಮವಾಗಿ ವಿವಿ ಸಿಂಡಿಕೇಟ್ ಮೈಲಾರಿಯನ್ನು ವಜಾ ಮಾಡಿದರೆ ಅವನು ಕೋರ್ಟಿಗೆ ಹೋದ. ಆದರೆ ಅಲ್ಲೂ ಛೀಮಾರಿ



ಹಾಕಿಸಿಕೊಂಡ. ಇಂಥ ಘಟಿಂಗನಿಗೆ ಬಿಜೆಪಿ ಕರೆದು ಟಿಕೆಟ್ ಕೊಟ್ಟಿದೆಯೆಂದರೆ ಇವರಿಗೆ ಮಾನಮರ್ಯಾದೆ ಏನಾದರೂ ಇದೆಯಾ ಅಂತ?

ಬಿಜೆಪಿಯ ಎಂಎಲ್‌ಸಿ ನರಹರಿ

ಕ ಊರು ಸೋಮನಾಥಪುರದಲ್ಲಿ 25 ಎಕರೆ
ಮೀನು, ಬೆಂಗಳೂರಿನ ಸ್ಟಾರ್ ಹೋಟೆಲ್ ಒಂದರಲ್ಲಿ
ದಲ್ಸ್ ಕಾರ್‌ಗಳು, ನರಸೀಪುರ ರಸ್ತೆಯಲ್ಲಿ ತನ್ನ
ತ ವಜ್ರೇಗೌಡನ ಬೇನಾಮಿ ಹೆಸರಲ್ಲಿ ಪೆಟ್ರೋಲ್
ಊ ಎಲ್ಲಾ ಮಾಡಿಕೊಂಡು ದುಂಡಗಾಗಿದ್ದಾರೆ.

ಅವರ ಅಧಿಕಾರಾವಧಿ ಇನ್ನು ಕೇವಲ ಒಂದೂವರೆ
ಮಾತ್ರವಿತ್ತು. ಅಷ್ಟರಲ್ಲಿ ಬೆಂಗಳೂರು ಸಿಟಿ
ಲೀಸ್ ಕಮಿಷನರ್ ಅಥವಾ ಡಿಜಿಪಿ ಆಗಿ
ೋಷನ್ ಸಿಗುವ ಸಾಧ್ಯತೆ ಕ್ಷೀಣಿಸಿತ್ತು. ಆಗಲೇ
ಕೀಯ ಅಧಿಕಾರದತ್ತ ಭರಣಿ ಗಮನ ಹರಿದಿದ್ದು.
ನೀರಾವರಿ ಇಲಾಖೆಯ ಅಧಿಕಾರಿ ಜಯಚಂದ್ರ
ೂ ಇನ್ನೊಬ್ಬ ಐಎಎಸ್ ಸಿದ್ದಯ್ಯ ಕೂಡಾ ಭರಣಿಗೆ
ಕ್ಕು ಕೊಟ್ಟಿದ್ದರು.

ಕೈಲಿ ಸಾಕಷ್ಟು ದುಡ್ಡು ಇಮೇಜು ಹಾಗೂ
ಖ್ಯವಾಗಿ ಅಧಿಕಾರದಾಹವಿದ್ದ ಭರಣಿಗೆ ಕಾಂಗ್ರೆಸ್
ಟ್ ಸಿಕ್ಕೇಸಿಗುತ್ತೆಂಬ ನಂಬಿಕೆ ಇತ್ತೆಂದು ಕಾಣುತ್ತದೆ.
ಸಿ ಅಧ್ಯಕ್ಷ ಖರ್ಗೆ, ಶ್ರೀನಿವಾಸಪ್ರಸಾದ್ ಟಿಕೆಟ್
ಸುವ ಭರವಸೆ ನೀಡಿದ್ದಿರಲೂಬಹುದು. ಆದರೆ
ಗ್ರೆಸ್ ಹೈಕಮಾಂಡಿಗೆ ತನ್ನದೇ ಬೇರೆ
ನದಂಡಗಳಿದ್ದವು. ಇನ್ನು ಮೇಲಾಗಿ ಸಿದ್ಧರಾಮಯ್ಯ
ದ ಡಾ. ಎಚ್.ಸಿ. ಮಹದೇವಪ್ಪ ಟಿ.
ೀಪುರದಿಂದಲೇ ಜೆಡಿಎಸ್‌ನಿಂದ ಗೆದ್ದು ಸಿದ್ದು
ತೆಗೆ ಕಾಂಗ್ರೆಸ್ ಸೇರಿದ್ದರಲ್ಲ. ಹಾಗಾಗಿ ಕಾಂಗ್ರೆಸ್
ಟ್ ಅವರಿಗೆ ಸಿಕ್ಕಿದೆಯೇ ವಿನಃ ಪಕ್ಷ-ಸಿದ್ಧಾಂತಗಳ
ತೆಯಿಲ್ಲದ ಭರಣಿಗೆ ಕಾಂಗ್ರೆಸ್ ಮನ್ನಣೆ ಕೊಡಲಿಲ್ಲ.
ರೆ ನಿರ್ಲಜ್ಜ ಭರಣಿ ಮಿಂಚಿನ ವೇಗದಲ್ಲಿ ಬಜೆಪಿ
ಕೊಂಡು 'ಸಾಮಾಜಿಕ ನ್ಯಾಯದ ಪರ ಇರುವ
ಬಜೆಪಿ' ಎಂದು ಭಟ್ಟಂಗಿ ರಾಗ ತೆಗೆದಿದ್ದಾರೆ.

ಈ ಸುಭಾಷ್ ಭರಣಿಯ ಕಣ್ಣು-ಕಿವಿ ಸರಿ ಇದ್ದಿದ್ದರೆ
ಇತ್ತೀಚೆಗೆ ಬಜೆಪಿ ಪುಂಡರು ಶಾಂತಿಗ್ರಾಮದಲ್ಲಿ
ತರ ಮೇಲೆ ನಡೆಸಿದ ದೌರ್ಜನ್ಯದ ನೆನಪಿರುತ್ತಿತ್ತೇನೊ!

ಆದರೆ ಈತ ದಲಿತನಲ್ಲ.

ಬದಲಾಗಿ ಬಲಿತ ವ್ಯಕ್ತಿ.

ಅಂತವರಿಗೆ ತಮ್ಮ ಸ್ವಾರ್ಥ ಮುಖ್ಯವಾಗುತ್ತದೆಯೇ
ದಮನಿತರ ಕೂಗಲ್ಲ. ಇಷ್ಟಕ್ಕೂ ಭರಣಿ ಬಜೆಪಿಗೆ
ದ ತಕ್ಷಣ ನರಸೀಪುರದ ಚುನಾವಣಾ ಚಿತ್ರಣವೇನೂ
ಾಗಿ ಬಿಡುವುದಿಲ್ಲ.

ಕಾಂಗ್ರೆಸ್ ಅಭ್ಯರ್ಥಿ ಡಾ. ಎಚ್.ಸಿ. ಮಹದೇವಪ್ಪ,
ಜನ ಸಮಾಜ ಪಕ್ಷದ ಗುರಪ್ಪಾಜಿ ಹಾಗೂ
ದಿಂದ ಸುಂದರೇಶ್ ಸ್ಪರ್ಧಿಸುತ್ತಿದ್ದಾರೆ. ಇಲ್ಲಿ
ಲ್ಲರೂ ದಶಕಗಳ ಕಾಲದಿಂದಲೂ ಜನರೊಟ್ಟಿಗೆ
ಕು ರಾಜಕೀಯ ನಡೆಸಿದವರು. ಇವರ ವಿರುದ್ಧ
ಂತರಿ ಪಕ್ಷಿ ಬಜೆಪಿಯ ಭರಣಿ ಏನೇ ಲಾಗಾ
ದರೂ ಜನಬೆಂಬಲ ಸಿಗಲಾರದು. ಬಜೆಪಿ ಎಂಬ
ಾಕ್ಕೆ ಸ್ವಲ್ಪ ಲಿಂಗಾಯತರ ಓಟು ಹಾಗೂ ದಲಿತರ
ವು ಮತಗಳು ಭರಣಿಗೆ ಸಿಗಬಹುದಷ್ಟೇ.

ಈ ಸುಭಾಷ್ ಭರಣಿ ತನ್ನ ಮೇಲೆ ನಂಬಿಕೆ
ಕೊಂಡಿದ್ದ ಸಮಸ್ತ ದಮನಿತ ಹಾಗೂ ದಲಿತ
ದಾಯಕ್ಕೆ ದ್ರೋಹ ಬಗೆದು ದಲಿತ ವಿರೋಧಿ
ಪಿ ಸೇರಿಕೊಂಡಿರುವುದರಿಂದ ಈತನನ್ನು ಸೋಲಿಸಿ
ಗೆ ಕಳುಹಿಸುವ ಹೊಣೆ ಟಿ. ನರಸೀಪುರದ
ದಾರರ ಮೇಲಿದೆ.

■ ಬಿಳಿದಾಳೆ ಪಾರ್ವತೀಶ

ಾರಿಯಿಂದ ಅನೇಕ ರೀತಿಯ ಉಪಕಾರ
ರು ದಾಖಲೆ ಸಮೇತ ಸಿಕ್ಕಿಬಿದ್ದು ಮೈಲಾರಿ
ತದಲ್ಲಿದ್ದಾರೆ. ಅವನ ಬ್ಲಾಕ್‌ಮೇಲ್‌ಗೆ
ಯೋ ಏನೋ ನರಹರಿ ಬಜೆಪಿ ಟಿಕೆಟ್
ಸಿದ್ದಾರೆಂಬ ವದಂತಿ ಬಜೆಪಿಯಲ್ಲಿದೆ.

ಕಾಂಗ್ರೆಸ್‌ನ ಪ್ರಸನ್ನಕುಮಾರ್ ಹಾಗೂ ದಳದ
ಮುತ್ತು ಎಂಬ ಆನೆಗಳ ಎದಿರು ಮೈಲಾರಿ
ುರಿಯಂತೆ ಕಾಣುತ್ತಿದ್ದಾನೆ. ಬಜೆಪಿ ಟಿಕೆಟ್
ನ್ನ ನಟ ಮದನ ಪಟೇಲ್ ಈಗ
ಾಯವೆದ್ದಿರುವುದೂ ಮೈಲಾರಿಗೆ
ಾಗಿದೆ.

ಆದರೆ ಮುಖ್ಯ ಪ್ರಶ್ನೆ ಇದಲ್ಲ. ಬಜೆಪಿಯಲ್ಲಿ
ಅಭ್ಯರ್ಥಿಗಳಾದ ಎಸ್‌ಸಿ, ಎಸ್‌ಟಿ
ರ್ಚಾದ ಮುನಿಕೃಷ್ಣ ಹಾಗೂ ವೈ.
ೇಶ್ ಇದ್ದಾಗಲೂ ಒಬ್ಬ ಅಕಡೆಮಿಕ್
ಸಲ್ ಹಾಗೂ ಭ್ರಷ್ಟ ಮೈಲಾರಪ್ಪನಿಗೆ ಬಜೆಪಿ
ಟಿಕೆಟ್ ನೀಡಿದೆ ಎಂಬುದು.

ಬಜೆಪಿಗೆ ಬೇರೆ ಯಾರೂ ಗತಿ ಇರಲಿಲ್ಲವೇ? ■



ಗುಜರಾತನ್ನು ಯಾಕೆ ಮರೆತಿರಿ ರೇವಣಸಿದ್ದಯ್ಯ?

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಎಲ್ಲ ಬಜೆಪಿ ಅಭ್ಯರ್ಥಿಗಳಿಗೂ ನಾವು ಕೇಳಲೇಬೇಕಾದ ಪ್ರಶ್ನೆ ಇದು. ಆದಾಗ್ಯೂ ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ರೇವಣಸಿದ್ದಯ್ಯ ಒಬ್ಬರನ್ನು ಮಾತ್ರ ಹೆಸರಿಸಿ ಹೀಗೆ ಪ್ರಶ್ನಿಸಿರುವುದಕ್ಕೆ ಒಂದು ಹಿನ್ನೆಲೆ ಇದೆ. ರೇವಣಸಿದ್ದಯ್ಯ ತಮ್ಮ ಡಿಐಜಿ ಹುದ್ದೆಯಿಂದ ನಿವೃತ್ತರಾದ ಮೇಲೆ ಕಾಂಗ್ರೆಸ್ ಪಕ್ಷ ಸೇರಿದರು. ಇದೀಗ ಹೊಸದಾಗಿ ರೂಪುಗೊಂಡಿರುವ ಮೈಸೂರಿನ ವರುಣಾ ಕ್ಷೇತ್ರದಲ್ಲಿ ತನಗೆ ಕಾಂಗ್ರೆಸ್ ಟಿಕೆಟ್ ಸಿಗಲಾರದು ಎನ್ನಿಸಿ ಅವರು ಬಜೆಪಿಗೆ ಹಾರಿದ್ದಾರೆ; ಆ ಪಕ್ಷದ ಟಿಕೆಟ್ಟನ್ನೂ ಗಿಟ್ಟಿಸಿಕೊಂಡಿದ್ದಾರೆ. ರೇವಣಸಿದ್ದಯ್ಯನವರಿಗೆ ಹೀಗೆ ಪಕ್ಷಾಂತರ ಮಾಡಲು ಸಿದ್ಧಾಂತ, ನಿಷ್ಠೆ ಇತ್ಯಾದಿ ಅಡ್ಡಬರಲಿಲ್ಲ. 'ನಾಯಿ ಹಸಿದಿತ್ತು; ಅನ್ನ ಹಳಸಿತ್ತು' ಎನ್ನುವ ತರಹದ ಕೂಡಿಕೆ ಇದು. ಹಾಗೆಂದು ಇದು ನಮ್ಮ ರಾಜಕೀಯದಲ್ಲಿ ಹೊಸ ವಿದ್ಯಮಾನವೇನೂ ಅಲ್ಲ; ಆದರೆ ರೇವಣಸಿದ್ದಯ್ಯನವರ ವಿಶ್ವಾಸದ್ರೋಹ ಇದಕ್ಕೂ ಹೆಚ್ಚು ಗಂಭೀರವಾದದ್ದು. ಅವರು ತನ್ನ ಪಕ್ಷಾಂತರದ ಜೊತೆ ಗುಜರಾತ್ ಹತ್ಯಾಕಾಂಡದ ಕುರಿತು, ತನ್ನ ಬದಲಾದ ನಿಲುವಿನ ಬಗ್ಗೆ ಕೂಡ ಮತದಾರರಿಗೆ ವಿವರಣೆ ನೀಡಬೇಕಾಗಿದೆ.

ಗುಜರಾತ್ ಬಗ್ಗೆ ಅಂದು ರೇವಣಸಿದ್ದಯ್ಯ ಹೇಳಿದ್ದು

2002 ಮಾರ್ಚ್ ತಿಂಗಳ ಉತ್ತರಾರ್ಧದ ಒಂದು ಸಂಜೆ, ಉಡುಪಿಯ 'ರಥ ಬೀದಿಗೆ ಗೆಳೆಯರು'-ಸಂಘಟನೆಯ ವತಿಯಿಂದ ಗುಜರಾತ್‌ನ ವಿದ್ಯಮಾನಗಳನ್ನು ಚರ್ಚಿಸಲು ಒಂದು ಸಭೆಯನ್ನು ಕರೆಯಲಾಗಿತ್ತು. ಆ ಕಾರ್ಯಕ್ರಮದಲ್ಲಿ ಮುಖ್ಯ ಉಪನ್ಯಾಸಕರಾಗಿದ್ದವರು ರೇವಣಸಿದ್ದಯ್ಯ. ಅವರು ಒಂದು ನಾಗರಿಕ ಸಂಘಟನೆಯ ಪ್ರತಿನಿಧಿಯಾಗಿ ಗುಜರಾತ್‌ಗೆ ತೆರಳಿ ಅಲ್ಲಿ ಸಂಭವಿಸಿದ್ದ ಹಿಂಸಾಕಾಂಡದ ಅಧ್ಯಯನ ನಡೆಸಿ, ಮರಳಿದ್ದರು. ಉಡುಪಿಯ ಸಭೆಯಲ್ಲಿ ರೇವಣಸಿದ್ದಯ್ಯ ಸುಮಾರು 1 ಗಂಟೆಯ ಕಾಲ ಮಾತನಾಡಿ, ತನ್ನ ಈ ಪ್ರತ್ಯಕ್ಷದರ್ಶಿ ಅಧ್ಯಯನದ ವಿವರಗಳನ್ನಿತ್ತರು.

ಅವರ ಮಾತಿನಲ್ಲಿ ಉದ್ವೇಗವಿರಲಿಲ್ಲ; ಶ್ರೋತೃಗಳನ್ನು ಉದ್ರೇಕಿಸುವ ಹವಣಿಕೆಯೂ ಇರಲಿಲ್ಲ. ಗುಜರಾತ್‌ನಲ್ಲಿ, ಮುಖ್ಯವಾಗಿ ಅಹ್ಮದಾಬಾದ್‌ನಲ್ಲಿ ಇದ್ದ ಕೆಲವು ದಿನಗಳ ಅವಧಿಯಲ್ಲಿ ತಾನು ಕಂಡದ್ದು ಹಾಗೂ ಕೇಳಿದ್ದನ್ನು ಅವರು ಯಥಾವತ್ತಾಗಿ ಕ್ರಿಮಿನಲ್ ಕೇಸಿನ ಪೊಲೀಸ್ ಎಫ್.ಐ.ಆರ್. (ಪ್ರಥಮ ಮಾಹಿತಿ) ಭಾಷೆಯಲ್ಲಿ ಸಭೆಯ ಮುಂದಿಟ್ಟರು. ಆ ಹಿಂಸಾಕಾಂಡಕ್ಕೆ ಗುಜರಾತ್‌ನ ಬಜೆಪಿ ಸರ್ಕಾರವೇ ಹೊಣೆಗಾರ ಎಂಬ ಮಾತನ್ನೂ ರೇವಣಸಿದ್ದಯ್ಯ ಸ್ಪಷ್ಟವಾಗಿ ಹೇಳಿದರು. ಸುದೀರ್ಘ ಕಾಲ, ಹಿರಿಯ ಪೊಲೀಸು ಅಧಿಕಾರಿಯಾಗಿದ್ದ ತನ್ನ ಅನುಭವದ ಮೇಲಿನಿಂದ ಹೇಳುವುದಾದರೆ ಗುಜರಾತ್‌ನ ಹಿಂಸಾಕಾಂಡ ಪೂರ್ವ ನಿರ್ಧರಿತವಾದದ್ದು ಮತ್ತು ಪೂರ್ವ ತಯಾರಿಯಿಂದಲೇ ನಡೆಸಲಾಗಿರುವಂತಹದ್ದು ಎಂಬ ಬಗ್ಗೆ ಸಂದೇಹವೇ ಇಲ್ಲ ಎಂಬ ಮಾತನ್ನೂ ಅವರು ಸೇರಿಸಿದರು. ಆ ಪ್ರಮಾಣದ ಹಿಂಸೆ ಮತ್ತು ಅದಕ್ಕೆ ಬೇಕಾದ ತಯಾರಿ, ಆ ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಗಳು, ಗೃಹಮಂತ್ರಿ ಮತ್ತು ಮುಖ್ಯಮಂತ್ರಿಯವರ ಗಮನಕ್ಕೆ ಬರದೆ ನಡೆಯುವುದು ಸಾಧ್ಯವೇ ಇಲ್ಲ ಎಂದು ರೇವಣಸಿದ್ದಯ್ಯ ಖಡಾಖಂಡಿತವಾಗಿ ಹೇಳಿದರು. ಪೊಲೀಸರು ಹದ್ದು ಮೀರಿ ವರ್ತಿಸುವುದು, ಸ್ವತಃ ತಾವೇ ಕಾನೂನನ್ನು ಮುರಿಯುವುದು, ಮುಂತಾದ್ದನ್ನು ತನ್ನ ವೃತ್ತಿಜೀವನದಲ್ಲಿ ಸಾಕಷ್ಟು ಕಂಡಿದ್ದೇನೆ; ಆದರೆ ಗುಜರಾತ್‌ನಲ್ಲಿ ಕಾನೂನಿನ ಆಳ್ವಿಕೆ ಎಂಬುದೇ ಇರಲಿಲ್ಲ; ಸರ್ಕಾರ ಪ್ರಜೆಗಳ ಜೀವ ರಕ್ಷಿಸುವ ತನ್ನ ಕನಿಷ್ಠ ಕರ್ತವ್ಯವನ್ನೂ ಪಾಲಿಸಲಿಲ್ಲ ಎಂದು ಅವರು ನೇರವಾಗಿ ಆಪಾದಿಸಿದರು.

ಆ ದಿನಗಳಲ್ಲಿ ಗುಜರಾತನ್ನು ಆವರಿಸಿದ್ದ ಭಯದ ವಾತಾವರಣಕ್ಕೆ ರೇವಣಸಿದ್ದಯ್ಯ ತನ್ನ ಸ್ವಂತ ಅನುಭವದ ಹಲವು ಉದಾಹರಣೆಗಳನ್ನು ನೀಡಿದರು. ಅಹ್ಮದಾಬಾದ್‌ನಲ್ಲಿ ಭಾರೀ ಪ್ರಮಾಣದ ಹಿಂಸೆ, ಕೊಲೆ ಮುಂತಾದವು ಸಂಭವಿಸಿದ ನರೋಡ ಪಾಟಿಯಾಕ್ಕೆ ತಾನು ಹೋಗಬೇಕು ಎಂದು ಅವರು ಹೇಳಿದಾಗ, ಅವರ ರಕ್ಷಣೆಗೆ ಎಂದು ನೇಮಕವಾದ ಗುಜರಾತ್ ಪೊಲೀಸ್ ಸಿಬ್ಬಂದಿ "ನೀವು ಅಂತಹ ಸ್ಥಳಗಳಿಗೆ ಹೋಗದೆ ಇದ್ದರೇನೆ ಕ್ಷೇಮ" ಎಂದು ಅವರನ್ನು ತಡೆದರಂತೆ. ಅಹ್ಮದಾಬಾದ್‌ನ ಒಂದು ನಿರಾಶ್ರಿತ



ಶಿಬಿರವನ್ನು ನೋಡಬೇಕು ಎಂದು ರೇವಣಸಿದ್ದಯ್ಯ ಬಯಸಿದಾಗ, ಒಬ್ಬ ಪೊಲೀಸ್ ಅಧಿಕಾರಿ "ನೀವು ನೋಡುವಂತಹದ್ದು ಏನೂ ಅಲ್ಲಿ ಇಲ್ಲ" ಎಂದು ಅಡ್ಡಗಾಲು ಹಾಕಿದ. ರೇವಣಸಿದ್ದಯ್ಯನವರ 'ವಿಪರೀತ ಕುತೂಹಲ'ದ ಸುದ್ದಿ ಗುಜರಾತ್ ಪೊಲೀಸ್ ಖಾತೆಯ "ಮೇಲಿನವರಿಗೂ" ತಲುಪಿ, ಡಿಐಜಿ ಮಟ್ಟದ ಒಬ್ಬ ಪೊಲೀಸ್ ಅಧಿಕಾರಿ, ಅವರಿಗೆ ನಿಷ್ಠುರವಾಗಿ, "ನೀವು ನಿಮ್ಮ ಇನ್ಸ್‌ಪೆಕ್ಷನ್ ಬಂಗ್ಲೆಯ ಕೋಣೆಯೊಳಗೇ ಇದ್ದುಬಿಟ್ಟರೆ ನಿಮಗೇ ಒಳ್ಳೆಯದು" ಎಂದು ಹೇಳಿದರಂತೆ.

ರೇವಣಸಿದ್ದಯ್ಯನವರ ಈ ಉಪನ್ಯಾಸ ನಡೆದ ಉಡುಪಿಯ ಎಂ.ಜಿ.ಎಮ್. ಕಾಲೇಜಿನ ಸಭಾಂಗಣ ಅಂದು ತುಂಬಿತ್ತು. ಆಗಲಿದ ಗೆಳೆಯ ಮುರಾರಿ ಬಲ್ಲಾಳ, ತನ್ನ ಜೀವವೇ ಅದರ ಮೇಲೆ ನಿಂತಿದೆ ಎಂಬಷ್ಟು ಕಾಳಜಿಯಿಂದ ಈ ಸಭೆಯನ್ನು ಏರ್ಪಡಿಸಿ, ತನಗೆ ಗೊತ್ತಿರುವವರನ್ನೆಲ್ಲ- ಅದೇನೂ ಸಣ್ಣ ಸಂಖ್ಯೆಯಲ್ಲ- ಒತ್ತಾಯಪೂರ್ವಕವಾಗಿ ಕರೆದಿದ್ದರು. ಗುಜರಾತ್ ಹಿಂಸೆ ಕುರಿತು ರೇವಣಸಿದ್ದಯ್ಯನವರ ತಣ್ಣಗಿನ, ಕರುಳು ಕತ್ತರಿಸುವಂತಹ ಮಾತುಗಳನ್ನು ಸಭಿಕರು 'ಸೂಜಿ ಬಿದ್ದರೂ ಕೇಳುವಂತಹ' ಮೌನದಲ್ಲಿ ಕೇಳಿದರು. ಆದರೆ ಆ ಉಪನ್ಯಾಸಕ್ಕೆ ವೇದಿಕೆಯ ಮೇಲೆ ಇದ್ದ ಕೆಲವು 'ಗಣ್ಯ'ರ ಪ್ರತಿಕ್ರಿಯೆ ಮಾತ್ರ ವಿಚಿತ್ರವಾಗಿತ್ತು. ಅವರು ಯಾರೂ ರೇವಣಸಿದ್ದಯ್ಯನವರ ಮಾತುಗಳಲ್ಲಿ ಇದ್ದ ಸತ್ಯವನ್ನು ಸಂದೇಹಿಸಲಿಲ್ಲ. ಆದರೆ ನರೇಂದ್ರ ಮೋದಿ ಹಾಗೂ ಆತನ ಸರ್ಕಾರವನ್ನು ಹಿಂಸೆಗೆ ನೇರ ಹೊಣೆಗಾರ ಎಂಬಂತೆ ರೇವಣಸಿದ್ದಯ್ಯ ಮಾತಾಡಿದ್ದು ಈ ಗಣ್ಯರನ್ನು ಸಿಟ್ಟಿಗೆಬ್ಬಿಸಿತ್ತು.

ವೇದಿಕೆಯಲ್ಲಿ ಅತಿಥಿಯಾಗಿ ಕುಳಿತಿದ್ದ ಒಬ್ಬ ನಿವೃತ್ತ ಮೇಜರ್, ತಾನು ಆರ್ಮಿಯಲ್ಲಿ ಸರ್ವಿಸ್‌ನಲ್ಲಿದ್ದಾಗ ಕಾಶ್ಮೀರದಲ್ಲಿ ಡ್ಯೂಟಿ ಮಾಡಿದ್ದೆ; ಅಲ್ಲಿ ಪಾಕಿಸ್ತಾನ ಏನು ಮಾಡಿದೆ, ಮುಸ್ಲಿಮರು ಏನು ಮಾಡಿದ್ದಾರೆ ಎಂಬುದನ್ನು ಕಣ್ಣಾರೆ ನೋಡಿದ್ದೇನೆ; ನೆಹರೂರಂತಹ ಸೆಕ್ಯೂಲರ್ ನಾಯಕರು ಏನು ಮಾಡಿದರು ಎಂದೂ ತನಗೆ ಗೊತ್ತಿದೆ ಎಂದು ಮುಂತಾಗಿ ಗುಜರಾತ್‌ನ ಘಟನೆಗಳಿಗೆ ಅದು ಒಂದು ವಿವರಣೆ ಎಂಬಂತೆ ಬಡಬಡಿಸಿದ. ಆ ಸಭೆಯ ಅಧ್ಯಕ್ಷತೆ ವಹಿಸಿದ್ದ ವಿನಯ ಹೆಗ್ಡೆ-ನಿಟ್ಟೆಯ ಶಿಕ್ಷಣ ಸಂಸ್ಥೆಗಳ ಬಾಸ್-ಈ ರೀತಿ ಒದರಾಡದೆ, ಬೆಣ್ಣೆಯಲ್ಲಿ ಕೂದಲು ತೆಗೆಯುವಷ್ಟು ನಯವಾಗಿ ಮಾತಾಡುತ್ತ ಮುಸ್ಲಿಮರ ರಾಷ್ಟ್ರನಿಷ್ಠೆಯನ್ನು ಸಂದೇಹಿಸಿದರು. "ಗುಜರಾತ್‌ನಲ್ಲಿ ಮುಸ್ಲಿಮರ ಮೇಲೆ ನಡೆದ ಹಿಂಸೆ, ಅವರೇ ತಮ್ಮ ಮೇಲೆ ತಂದುಕೊಂಡದ್ದು. ರೇವಣಸಿದ್ದಯ್ಯನವರಿಗೆ ಯಾಕೆ ಇದರ ಉಪದ್ವ್ಯಾಪ?" ಎಂಬುದು ಆ ಇಬ್ಬರು 'ಗಣ್ಯರ' ಮಾತುಗಳ ತಾತ್ಪರ್ಯವಾಗಿತ್ತು. ಈ ಸಭೆ ಮುಗಿದ ಮೇಲೆ, ಉಡುಪಿಯ ಕೆಲವು 'ದೊಡ್ಡ ಮನುಷ್ಯರು' ಮುರಾರಿಯವರನ್ನು "ನೀವು ಅಂತಹವರನ್ನೆಲ್ಲ ಯಾಕೆ ಕರೆದು ಭಾಷಣ ಮಾಡಿಸುತ್ತೀರಿ?" ಎಂದು ಕೇಳಿ ರೇವಣಸಿದ್ದಯ್ಯನವರ ರಾಷ್ಟ್ರನಿಷ್ಠೆಯನ್ನೆ ಪ್ರಶ್ನಿಸಿದರಂತೆ!

ಮುರಾರಿ ಬಲ್ಲಾಳ ಅಪ್ರಿಯವಾದ ಸತ್ಯಕ್ಕೆ ಕಿವಿ ಮುಚ್ಚಿಕೊಂಡವರಲ್ಲ; ಅಷ್ಟೇ ಯಾಕೆ ಅವರು ಸತ್ಯ ಅಪ್ರಿಯವಾದಷ್ಟೂ ಅದನ್ನು ಕೇಳುವ ಮತ್ತು ಹೇಳುವ ಅಗತ್ಯವೂ ಜಾಸ್ತಿ ಎಂದು ನಂಬಿದವರು. ರೇವಣಸಿದ್ದಯ್ಯನವರು ಸಹ ಅದೇ ನಂಬಿಕೆಯಲ್ಲಿ ಅಂದು ಗುಜರಾತ್ ಬಗ್ಗೆ ಮಾತನಾಡಿದ್ದರು. ಗುಜರಾತ್‌ನಲ್ಲಿ ಹಿಂಸೆಗೊಳಗಾದ ಮುಸ್ಲಿಮರು ಈ ದೇಶದ ಪ್ರಜೆಗಳು; ಅವರನ್ನು ಗುಂಪುಹಿಂಸೆಯಿಂದ ರಕ್ಷಿಸುವುದು ಯಾವುದೇ ಸರ್ಕಾರದ ಆದ್ಯಕರ್ತವ್ಯ. ಗುಜರಾತ್‌ನ ಬಜೆಪಿ ಸರ್ಕಾರ ಅದನ್ನು ನಿರ್ವಹಿಸಲಿಲ್ಲ ಮಾತ್ರವಲ್ಲ ಆಡಳಿತದ ಆಯಕಟ್ಟಿನ ಸ್ಥಾನದಲ್ಲಿದ್ದವರು ಮತ್ತು ಪೊಲೀಸ್ ಖಾತೆಯ ಹಿರಿಯ ಅಧಿಕಾರಿಗಳು ಆ ಹಿಂಸೆಯಲ್ಲಿ ಶಾಮೀಲಾಗಿದ್ದರು. ಗುಜರಾತ್‌ನ ಹತ್ಯಾಕಾಂಡದ ಬಗ್ಗೆ ರಾಜ್ಯದ ಮುಖ್ಯಮಂತ್ರಿಯಾಗಲೀ, ಬಜೆಪಿ ಪಕ್ಷವಾಗಲೀ ಇವತ್ತಿಗೂ ವಿಷಾದ ವ್ಯಕ್ತಪಡಿಸಿಲ್ಲ. ಆಗ ಕೇಂದ್ರದಲ್ಲಿ ಗೃಹಮಂತ್ರಿಯಾಗಿದ್ದ ಬಜೆಪಿ ನಾಯಕ ಎಲ್.ಕೆ. ಅಡ್ವಾಣಿ ಈಗಲೂ ನರೇಂದ್ರ ಮೋದಿಯವರನ್ನು ಸಮರ್ಥಿಸುತ್ತಾರೆ. 'ಲೋಹ ಪುರುಷ' ಅಡ್ವಾಣಿಯ ಬರ್ಬರತೆ ಯಾವ ಮಟ್ಟದ್ದು ಎಂದರೆ, ಅವರು ತಮ್ಮ ಆತ್ಮಕತೆಯಲ್ಲಿ ತಾನು ಸ್ವತಃ ಮಧ್ಯ ಪ್ರವೇಶಿಸಿ, ಗುಜರಾತ್ ಹಿಂಸಾಕಾಂಡದ ದಿನಗಳಲ್ಲಿ, ನರೇಂದ್ರ ಮೋದಿಗೆ ಫೋನ್ ಮಾಡಿ ಹಲವು ಮುಸ್ಲಿಮರ ಜೀವ ಉಳಿಸಿದ್ದರ ಬಗ್ಗೆ ಬರೆದುಕೊಂಡಿದ್ದಾರೆ. ಆ ಬಗ್ಗೆ ಅವರಿಗೆ ನಾಚಿಕೆ ಕೂಡ ಇಲ್ಲ. ಕೆಲವು ಪ್ರಜೆಗಳ ಜೀವ ಉಳಿಸಲು, ದೇಶದ ಗೃಹಮಂತ್ರಿಯೇ ಆ ರಾಜ್ಯದ ಮುಖ್ಯಮಂತ್ರಿಗೆ ಶಿಫಾರಸ್ಸು ಮಾಡಬೇಕಾದ ಸನ್ನಿವೇಶ ಎಷ್ಟು ಕರಾಳವಾದದ್ದು, ಪ್ರಜೆಗಳಲ್ಲಿ ಎಷ್ಟು ಜನ ಹೀಗೆ ಕೇಂದ್ರ ಗೃಹಮಂತ್ರಿಯ ಶಿಫಾರಸ್ಸು ದೊರಕಿಸಿಕೊಳ್ಳಬಲ್ಲರು ಎಂಬ ಚಿಂತೆಯೂ ಅಡ್ವಾಣಿಯನ್ನು ಬಾಧಿಸುವುದಿಲ್ಲ! ಈತ ಈಗ ದೇಶದ ಪ್ರಧಾನಮಂತ್ರಿಯ ಹುದ್ದೆಗೆ ಬಜೆಪಿಯ ಅಭ್ಯರ್ಥಿ! ನರೇಂದ್ರ ಮೋದಿ ಆ ಪಕ್ಷದ ಕಣ್ಮಣಿ.

ಇಂತಹ ವಿಕಟ ಸನ್ನಿವೇಶದಲ್ಲಿ ರೇವಣಸಿದ್ದಯ್ಯ ಮೈಸೂರಿನ ಮತದಾರರ ಎದುರು ಬಜೆಪಿಯ ಅಭ್ಯರ್ಥಿಯಾಗಿ ನಿಂತಿದ್ದಾರೆ. ಗುಜರಾತ್ ಹಿಂಸಾಕಾಂಡ ಮತ್ತು ಅದರಲ್ಲಿ ಬಜೆಪಿ ಹಾಗೂ ಗುಜರಾತ್ ರಾಜ್ಯ ಸರ್ಕಾರ ವಹಿಸಿದ ಪಾತ್ರದ ಬಗ್ಗೆ ಈಗ ರೇವಣಸಿದ್ದಯ್ಯನವರ ನಿಲುವು ಏನು? ಮತದಾನಕ್ಕೆ ಮುನ್ನ ಅವರು ಈ ಬಗ್ಗೆ ಪ್ರಜೆಗಳಿಗೆ ಸೂಕ್ತ ವಿವರಣೆ ನೀಡಬೇಕಾಗಿದೆ.

■ ಜೆ. ರಾಜಶೇಖರ

ಚುನಾವಣಾ ಚಮಕ್

ಆನೆ ತುಳಿತಕ್ಕೆ ಯಾರ್‍ಯಾರು ಬಲಿ?

ಕೊಪ್ಪಳ

ಅಂತೂ ಕೊಪ್ಪಳ ಜಿಲ್ಲಾ ಬಿಎಸ್‌ಪಿ ಹರಸಾಹಸ ಮಾಡಿ ಅಭ್ಯರ್ಥಿಗಳನ್ನು ಹುಡುಕಿಕೊಂಡಿದೆ. ಪಟ್ಟಿ ಇನ್ನೂ ಬಹಿರಂಗವಾಗಿಲ್ಲ. ಆದರೂ ಸಿಕ್ಕ ಮಾಹಿತಿಯಂತೆ ಕೊಪ್ಪಳಕ್ಕೆ ಎಸ್.ಎಂ. ಪಾಟೀಲ್ ಹಾಗೂ ಯಲಬುರ್ಗಿಗೆ ಡಿ.ಕೆ.ಪರಶುರಾಮ್ ಸ್ಪರ್ಧಿಸುತ್ತಾರಂತೆ.

ಉತ್ತರ ಪ್ರದೇಶದಲ್ಲಿ ತಿಲಕ್ (ಬ್ರಾಹ್ಮಣ), ತರಾಜು (ವೈಶ್ಯ) ಹಾಗೂ ತಲವಾರ್ (ಕ್ಷತ್ರಿಯ) ಇನ್ ತೀನೋ ಜೊತೆ ಮಾರೋ ಚಾರ್ ಅಂತ ರಾಜಕೀಯ ಮಾಡಿ ಕೊನೆಗೆ ಸೋಷಿಯಲ್ ಇಂಜಿನಿಯರಿಂಗ್ ಎಂಬ ಹೆಸರಿನಲ್ಲಿ ತಾನು ಈ ತನಕ ಬೈದುಕೊಂಡು ಬಂದವರನ್ನೆ ಅಪ್ಪಿಕೊಂಡು ಅಧಿಕಾರಕ್ಕೆ ಬಂದದ್ದು ಬಿಎಸ್‌ಪಿ. ಅದು ಈಗ ಕರ್ನಾಟಕದಲ್ಲೂ ಇದೇ ತಂತ್ರವನ್ನು ಕಾರ್ಯರೂಪಕ್ಕಿಳಿಸುವ ಯೋಚನೆಯಲ್ಲಿದೆಯೆ? ಬಿಎಸ್‌ಪಿಯ ಅಭ್ಯರ್ಥಿಗಳ ಪಟ್ಟಿಯನ್ನು ನೋಡಿದರೆ ಹಾಗೆ ಅನ್ನಿಸುವುದು ಸಹಜ. ಯಲಬುರ್ಗದಲ್ಲಿ ದಲಿತ ಸಮುದಾಯದ ಡಿ.ಕೆ. ಪರಶುರಾಮ ಸ್ಪರ್ಧಿಸಿದರೆ 1957ರಿಂದ ಈ ಕ್ಷೇತ್ರದಲ್ಲಿ ಒಬ್ಬನೇ ಒಬ್ಬ ದಲಿತ ಸ್ಪರ್ಧೆ ಮಾಡದ ಕೊರತೆಯನ್ನು ನೀಗಿಸಿದಂತಾಗುತ್ತದೆ. ಕೊಪ್ಪಳದಲ್ಲಿ ಲಿಂಗಾಯತ ಸಮುದಾಯದ ಎಸ್.ಎಂ. ಪಾಟೀಲ್ ಸ್ಪರ್ಧಿಸಲಿದ್ದಾರೆ. ಇವರ ತಂದೆ ಕೊಪ್ಪಳದ ಮಾಜಿ ಶಾಸಕರು. ಇಲ್ಲಿ ಬಿಎಸ್‌ಪಿ ಗೆಲ್ಲುತ್ತೋ ಬಿಡುತ್ತೋ ಬೇರೆ ವಿಚಾರ. ಆದರೆ, ಸಭ್ಯರಾದ ಪಾಟೀಲರ ಸ್ಪರ್ಧೆಯಿಂದ ಅದು ಗಮನ ಸೆಳೆಯುವುದಂತೂ ಖಚಿತ. ಕುಷ್ಟಗಿಯಲ್ಲಿ ಬ್ರಾಹ್ಮಣ ಸಮುದಾಯದ ಆನಂದರಾವ್ ದೇಸಾಯಿ ಹೆಸರು ಫೈನಲ್ ಆಗಿದೆ. ಗಂಗಾವತಿಯಿಂದ ಮಹಾಬಲೇಶ್ವರ ಹಾಸಿನಾಳ, ಕನಕಗಿರಿಯಿಂದ ಆರತಿ ತಿಪ್ಪಣ್ಣ.



ಇದಿಷ್ಟು 'ಆನೆ' ಮೇಲಿನ ಅಂಬಾರಿಯಲ್ಲಿ ಕೂರುವವರ ಪಟ್ಟಿ. ಕಾಂಗ್ರೆಸ್, ಬಿಜೆಪಿಗಳು ಜಾತಿರಾಜಕಾರಣದ ಲೆಕ್ಕಾಚಾರದಲ್ಲಿನ್ನೂ ತಲ್ಲೀನರಾಗಿರುವಾಗಲೇ ಅವರ ತಲೆಯ ಮೇಲೆ ಹೊಡೆದಂತೆ ಬಿಎಸ್‌ಪಿ ಅದನ್ನು ಮಾಡಿಮುಗಿಸಿದೆ. ಆನೆ ತುಳಿತಕ್ಕೆ ಯಾರಾದರೂ ಬಲಿಯಾಗ್ತಾರಾ ಅಂತ ಕಾದು ನೋಡಬೇಕಷ್ಟೆ.

ಕನಕಗಿರಿ ಬಿಜೆಪಿ: ಮಸ್ತ್ ಜಗಳಮಾಡಿ

ಕನಕಗಿರಿ ಕ್ಷೇತ್ರದ ಟಿಕೆಟ್‌ಗಾಗಿ ಬಿಜೆಪಿಯಲ್ಲಿ ಮಾರಾಮಾರಿ ಶುರುವಾಗಿದೆ. ಕೆಲವರಂತೂ ಚಪ್ಪಲಿಗಳನ್ನು ಕೈಯಲ್ಲಿಡಿದು ಯುದ್ಧಕ್ಕಿಳಿದಿದ್ದಾರೆ.

ಈ ಮೀಸಲು ಕ್ಷೇತ್ರಕ್ಕೆ ಶಾಮಣ್ಣ ನಾರಿನಾಳ ಎಂಬುವವರಿಗೆ ಬಿಜೆಪಿ ಟಿಕೆಟ್ ಸಿಕ್ಕಿದೆ. ಈತ ಹಿಂದೊಮ್ಮೆ ಜಿಲ್ಲಾ ಪಂಚಾಯತಿಗೆ ಸ್ಪರ್ಧಿಸಿ ಸೋತು ನಂತರ ಎಂಜಿನಿಯರ್ ಆಗಿದ್ದಾತ. ಈಗ ಅರ್ಧಕ್ಕೆ ರಾಜಿನಾಮೆ ಬಿಸಾಡಿ ಪಕ್ಕಾ ಕಮಲಣ್ಣನಾಗಿದ್ದಾನೆ. ಈತನಿಗೆ ಟಿಕೆಟ್ ಸಿಕ್ಕಿರುವುದು ಕ್ಷೇತ್ರದ ಬಿಜೆಪಿಯೊಳಗೆ ಒಂದು ಅಂತರ್ಯುದ್ಧವನ್ನೇ ಹುಟ್ಟುಹಾಕಿದೆ. ಅರವಿಂದ ಲಿಂಬಾವಳಿಯ ಸಂಬಂಧಿ, ಇಳಕಲ್ ಗ್ರಾನೈಟ್ ಕುಳ, ರಾಜ್ಯ ಬಿಜೆಪಿ ಯುವ ಮೋರ್ಚಾದ ಉಪಾಧ್ಯಕ್ಷ ಶಿವರಾಜ್ ತಂಗಡಿ ಇದೇ ಕ್ಷೇತ್ರದಿಂದ ಸ್ಪರ್ಧಿಸುವ ಆಕಾಂಕ್ಷೆ ಇಟ್ಟುಕೊಂಡಿದ್ದ. ಅದಕ್ಕಾಗಿ ಬೇಕಾಬಿಟ್ಟಿಯಾಗಿ ದುಡ್ಡನ್ನೂ ಚೆಲ್ಲಿ ಕ್ಷೇತ್ರದಾದ್ಯಂತ ಮಿಂಚಲು ಪ್ರಯತ್ನಿಸಿದ್ದ. ಈಗ ನಾರಿನಾಳ್‌ಗೆ ಟಿಕೆಟ್ ಸಿಕ್ಕಿರುವುದರಿಂದ ತಂಗಡಿಯ ಪ್ರಯತ್ನವೆಲ್ಲ ಹೊಳೆಯಲ್ಲಿ ಹುಣಸೆ ಹಣ್ಣು ಕದಡಿದಂತಾಗಿದೆ. ಆದರೂ ಆತ ಸುಮ್ಮನೆ ಕುಳಿತಿಲ್ಲ, ಈತ ಹೇಳಿಕೇಳಿ ಗ್ರಾನೈಟ್ ಕುಳ. ಯಾರ್‍ಯಾರಿಗೆ ಎಷ್ಟೆಷ್ಟು ತಿನ್ನಿಸಿದನೋ ಗೊತ್ತಿಲ್ಲ ಅಂತೂ ಹತ್ತು ಹಲವು ಲೀಡರುಗಳು ಇವನ ಬೆಂಬಲಕ್ಕೆ ನಿಂತಿದ್ದಾರೆ. ಬ್ಲಾಕ್ ಅಧ್ಯಕ್ಷ ಕೆಲ್ಲಾ ಶೇಷಗಿರಿರಾವ್, ತಿಮ್ಮನಗೌಡ್ರ, ಜಿಲ್ಲಾ ಪಂಚಾಯತ್ ಸದಸ್ಯ ಬಾಲಪ್ಪ ಹೂಗಾರ ಮತ್ತಿತರರು ನಾರಿನಾಳ್‌ಗೆ ಟಿಕೆಟ್ ಕೊಟ್ಟಿರುವುದನ್ನು ಪ್ರತಿಭಟಿಸಿದ್ದಾರೆ.

ಈ ಎರಡೂ ಗುಂಪಿನ ಶೀತಲ ಘರ್ಷಣೆಯನ್ನು ಶಮನ ಮಾಡುವುದಕ್ಕೆ ಮೊನ್ನೆ ಒಂದು ಮೀಟಿಂಗ್ ಕೂಡ ನಡೆಯಿತು. ಅಲ್ಲಿ ಶಾಮಣ್ಣ ನಾರಿನಾಳ್ ಪರ ರಾಜ್ಯ ರೈತ ಮೋರ್ಚಾದ ತಿಪ್ಪೇರುದ್ರ ಸ್ವಾಮಿ ವಕೀಲಿಕೆ ಪ್ರಾರಂಭಿಸಿದ್ದೇ ತಡ ಜಗಳ ಶುರುವಾಗಿ, ಕೈಕೈ ಮಿಲಾವಣೆಯೂ ನಡೆದುಬಿಟ್ಟಿತು. ಪಕ್ಷದೊಳಗೆ ಇಂತಹ ಜಗಳಗಳಾದರೆ ಪಕ್ಷದ ಹಿರಿಯರೇ ವಾತಾವರಣವನ್ನು ತಿಳಿಗೊಳಿಸುತ್ತಾರೆ. ಆದರೆ, ಇಲ್ಲಿ ಆ ಕೆಲಸವನ್ನು ಪೊಲೀಸರು ಮಾಡಬೇಕಾಯಿತು. ಸಭೆಗೆ ಪೊಲೀಸರೇಕೆ ಬಂದರು ಎಂಬುದನ್ನು ಕೆದಕುತ್ತಾ ಹೋದರೆ ಮತ್ತೊಂದು ವಿಷಯ ಹೊರಬೀಳುತ್ತದೆ. ವಾಸ್ತವದಲ್ಲಿ ಶಾಮಣ್ಣ ನಾರಿನಾಳ್ ಪರವಿರುವ ತಿಪ್ಪೇರುದ್ರಸ್ವಾಮಿ ತನಗೆ ಶಿವರಾಜ್ ತಂಗಡಿ ಪರವಿರುವ ಬ್ಲಾಕ್ ಅಧ್ಯಕ್ಷ ಕೆಲ್ಲಾ ಶೇಷಗಿರಿರಾವ್ ಜೀವಬೆದರಿಕೆ ಹಾಕಿದ್ದಾರೆ ಎಂದು ದೂರು ಸಲ್ಲಿಸಿದ್ದರು. ಮೀಟಿಂಗ್‌ನಲ್ಲಿ ಗದ್ದಲ ನಡೆಯೋದು ಗ್ಯಾರಂಟಿ ಅಂದುಕೊಂಡಿದ್ದ ಪೊಲೀಸರು ಯಾವುದಕ್ಕೂ ಇರಲಿ ಎಂದು ಬಂದಿದ್ದರು.

ಅದೇನೇ ಆದರೂ, ಸಮಾಜದಲ್ಲಿ ಜಗಳ ಹಚ್ಚೋ ಬಿಜೆಪಿಗಳು ತಮ್ಮೊಳಗೇ ಕಚ್ಚಾಡಿಕೊಳ್ಳುತ್ತಿರುವುದನ್ನು ನೋಡಿ ಕಾಂಗ್ರೆಸ್‌ಗಳು, ಜೆಡಿಎಸ್‌ಗಳು ಮುಸಿಮುಸಿ ನಗುತ್ತಿರುವುದಂತೂ ಸತ್ಯ. ಜೊತೆಗೆ, ಈ ಕಚ್ಚಾಟವೇ ಬಿಜೆಪಿಗೆ ಮುಳುವಾಗುವುದೂ ಅಷ್ಟೇ ಸತ್ಯ.

ಎಲ್ಲಿದ್ದೀಯವ್ವಾ ಶಕುಂತಲಕ್ಕ?




ಶಕುಂತಲಕ್ಕ

ಕಾಂಗ್ರೆಸ್ ಪಕ್ಷದಲ್ಲಿ ಮಹಿಳೆಯರಿಗೆ ಶೇ. 33 ರಷ್ಟು ಮೀಸಲಾತಿ ಎಂದು ಸೋನಿಯಾ ಹೇಳಿದ್ದರು. ಪ್ರತೀ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಂದು ಎಮ್ಮೆಲ್ಲೆ ಟಿಕೆಟ್ ಮಹಿಳೆಯರಿಗೆ ಅಂತ ಕಾಂಗ್ರೆಸ್ ಹೇಳಿತ್ತು, ಈಗ ಟಿಕೆಟ್ ಹಂಚಿಕೆಯಲ್ಲೂ ಶೇ. 33ರಷ್ಟು ಮೀಸಲಾತಿ ಕೊಡಿ ಅಂತ ಮಹಿಳೆಯರು ದುಂಬಾಲು ಬಿದ್ದಿದ್ದಾರೆ.

ಕೊಪ್ಪಳ ಜಿಲ್ಲೆಯಲ್ಲಿ ಮಹಿಳಾ ಕೋಟಾದಡಿಯಲ್ಲಿ ನಗರಸಭಾ ಸದಸ್ಯೆ ಇಂದಿರಾ ಭಾವಿಕಟ್ಟಿಯವರು ಅರ್ಜಿ ಹಾಕಿದ್ದಾರೆ. ಆದರೆ, ಇದು ಕೆಲವರಿಗಂತೂ ನುಂಗಲಾರದ ತುತ್ತಾಗಿದೆ. ಮೊನ್ನೆ ತಾನೆ ಕೌನ್ಸಿಲರ್ ಆಗಿದ್ದು ಮತ್ತೆ ಈಗ ಎಮ್ಮೆಲ್ಲೆ ಟಿಕೆಟ್ ಕೊಡಿ ಎಂದರೆ ಹೇಗೆ ಎಂಬುದು ಅವರ ಅಂಬೋಣ. ಆದರೆ, ಅಸಲಿ ವಿಷಯ ಅದಲ್ಲ, ಈ ಹಿಂದೆ ಕೊಪ್ಪಳ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಶಕುಂತಲಾ ಹುದೇಜಾಲಿಯವರು ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ನಗರಸಭೆ ಚುನಾವಣೆಗಳಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ ಕೊಡಬೇಕು ಎಂದು ಭೂಮಿಯಾಕಾಶಗಳನ್ನು ಒಂದು ಮಾಡಿದ್ದರು. ಇಡೀ ಮಹಿಳಾ ಸಮುದಾಯ ಉದ್ಧಾರ ಮಾಡಬೇಕು ಎನ್ನುವುದಕ್ಕಿಂತ ತಮಗೆ ಟಿಕೆಟ್ ಬೇಕು ಎನ್ನುವ ಕಾರಣಕ್ಕಾಗಿಯೇ ಅವರು ಅಷ್ಟು ರಂಪಾಟ ನಡೆಸಿದ್ದರು ಎಂಬುದರಲ್ಲಿ ಯಾರಿಗೂ ಸಂಶಯವಿಲ್ಲ, ಅಂತೆಯೇ ಟಿಕೆಟ್ ಪಡೆದರು ಕೊನೆಗೆ ಕೌನ್ಸಿಲರ್ ಕೂಡ ಆದರು.

ಆದರೆ, ಇವತ್ತು ಇಂದಿರಾ ಭಾವಿಕಟ್ಟಿಯವರು ಟಿಕೆಟ್‌ಗಾಗಿ ಅರ್ಜಿ ಹಾಕಿರುವಾಗ ಶಕುಂತಲಕ್ಕನ ಮಹಿಳಾ ಮೀಸಲಾತಿ ಮಲಗಿಕೊಂಡುಬಿಟ್ಟಿದೆ. ಭಾವಿಕಟ್ಟಿಯವರು ಮಹಿಳೆ ಅನ್ನುವ ಕಾರಣಕ್ಕಾಗಿಯಾದರೂ ಅವರಿಗೆ ಟಿಕೆಟ್ ಕೊಡಿ ಅಂತ ಶಕುಂತಲಾ ಅವರು ಒಂದೇ ಒಂದು ಹೇಳಿಕೆಯನ್ನೂ ನೀಡಿಲ್ಲ, ಅದು ಸಾಧ್ಯವೂ ಇಲ್ಲ ಬಿಡಿ. ಏಕೆಂದರೆ, ಹೇಳಿಕೇಳಿ ಶಕುಂತಲಾ ಬಸವರಾಜ್ ಹಿಟ್ನಾಳನ ಪಟ್ಟಾ ಶಿಷ್ಯೆ. ಇಲ್ಲಿ ಹಿಟ್ನಾಳ ಕೂಡ ಟಿಕೆಟ್ ಆಕಾಂಕ್ಷಿ. ಮಹಿಳೆಯರಿಗೆ ಮೀಸಲಾತಿ, ಇಂದಿರಾ ಹುದೇಜಾಲಿಗೆ ಟಿಕೆಟ್ ಅಂತೇನಾದರೂ ಶಕುಂತಲಾ ಮಾತಾಡಿದರೆ ಹಿಟ್ನಾಳ ಸುಮ್ಮನಿರುತ್ತಾನೆಯೇ? ಈ ಎಲ್ಲಾ ಕಿರಿಕಿರಿಯೇ ಬೇಡ ಎಂದುಕೊಂಡು ಶಕುಂತಲಕ್ಕ ಈಗ ತನ್ನ ಮಹಿಳಾ ಮೀಸಲಾತಿ ಬ್ಯಾನರ್‌ನ್ನು ಹಾಸಿಕೊಂಡು ಅಜ್ಞಾತಜಾಗದಲ್ಲಿ ನಿದ್ದೆ ಮಾತ್ರೆ ಸೇವಿಸಿ ಮಲಗಿಬಿಟ್ಟಿದ್ದಾಳೆ. ಪ್ರಾಯಶಃ ಎಲೆಕ್ಷನ್ ಮುಗಿದ ಮೇಲೆಯೇ ಆಕೆ ಎದ್ದೇಳೋದು ಅಂತ ಕಾಣುತ್ತೆ.


ಜೇವರ್ಗಿ: ಧರ್ಮಸಿಂಗನ ಡುಬ್ಬ ಕೆತ್ತಲು ಗೌನಳ್ಳಿ ಬಸ್ಸಣ್ಣ ರೆಡಿ?



ಗೌನಳ್ಳಿ ಬಸ್ಸಣ್ಣ ರೆಡ್ಡಿ

ಧರ್ಮಸಿಂಗ್ ಇಷ್ಟು ವರ್ಷಗಳವರೆಗೆ ತನ್ನ ತವರು ಮನೆ ಎಂಬಂತೆ ಆಯ್ಕೆಯಾಗಿ ಬರುತ್ತಿದ್ದ ಜೇವರ್ಗಿ ಮತಕ್ಷೇತ್ರ ಇನ್ನು ಮುಂದೆ ಅವರ ಕೈಯ್ಯಲ್ಲಿ ಉಳಿಯಲಾರದು ಅನಿಸುತ್ತಿದೆ. ಇದಕ್ಕೆ ಬಹು ಮುಖ್ಯ ಕಾರಣ ಕೈ ಕೊಡುತ್ತಿರುವ ಅವರ ಆರೋಗ್ಯ. ಎದ್ದರೆ ಕೂರಲಾಗದ, ಕೂತರೆ ಏಳಲಾಗದ ಅವರ ದೈನೇಸಿ ಸ್ಥಿತಿ. ಅಲ್ಲದೆ, ಇತ್ತೀಚೆಗಂತೂ ಮರೆವು ಧರ್ಮಸಿಂಗನನ್ನು ಕಾಡಲು ಶುರುಮಾಡಿವೆ.

ಇವೆಲ್ಲದಕ್ಕಿಂತ ಹೆಚ್ಚಾಗಿ ತನ್ನ ಮತಕ್ಷೇತ್ರದ ಕೆಲಸಗಳತ್ತ ಅವರು ತೋರಿದ ದಿವ್ಯ ನಿರ್ಲಕ್ಷ್ಯದಿಂದ ಮುನಿಸಿಕೊಂಡಿರುವ ಮತದಾರರು ಈ ಬಾರಿ ಅವರನ್ನು ಮನೆಗೆ ಕಳಿಸಿದರೂ ಆಶ್ಚರ್ಯವಿಲ್ಲ. ಈತ ತನ್ನ ಕ್ಷೇತ್ರದಲ್ಲಿ ಸರಕಾರದ ಯೋಜನೆಗಳು ಸರಿಯಾಗಿ ಜಾರಿಯಾಗುತ್ತಿವೆಯೇ ಎಂದು ಅಪ್ಪಿತಪ್ಪಿಯೂ ನೋಡುವವನಲ್ಲ, ತನ್ನ ಹಿಂಬಾಲಕರೆಂಬ ಗಡವಗಳು ತನ್ನ ಎದುರಾ ಎದುರೆ ನಿಂತು ಎಲ್ಲವನ್ನೂ ಬಿಟ್ಟು ಬಿಡದೆ ಮೇಯುತ್ತಿದ್ದರೂ ಆ ಕಡೆ ಹೊರಳಿಯೂ ನೋಡದವ. ತನ್ನ ಗುಡಾಣವಂತೂ ತುಂಬಿದೆ. ತನ್ನ ಸುತ್ತಮುತ್ತಲವರ ಗುಡಾಣವೂ ಕೊಂಚ ತುಂಬಲಿ ಎಂಬ ಉಮೇದು ಈ ದೊಡ್ಡ ಗಡವಕ್ಕೆ.



ಧರ್ಮಸಿಂಗ್ ಕರ್ನಾಟಕ ರಾಜ್ಯದಲ್ಲಿ ಏನಾದರೂ ಆಗಿದ್ದರೆ ಅದರ ಹಿಂದೆ ಮತಕ್ಷೇತ್ರದ ಬಹುತೇಕ ಸಾಮಾನ್ಯ ಕಾರ್ಯಕರ್ತರಿಂದ ಹಿಡಿದು ಗೌನಳ್ಳಿ ಬಸ್ಸಣ್ಣನಂಥವರ ಕೊಡುಗೆ ಅಪಾರ. ಹಲವಾರು ಸಂದರ್ಭಗಳಲ್ಲಿ ಗೌನಳ್ಳಿ ಬಸ್ಸಣ್ಣನನ್ನು ಹಿಡಕೊಂಡು ಊರೂರು ತಿರುಗಾಡಿದಂತೆ ತೋರಿಸಿಕೊಂಡು ಕುರುಬರ ಮತಗಳನ್ನು ತನ್ನ ಬುಟ್ಟಿಗೆ ಹಾಕಿಕೊಂಡಿದ್ದ. ಈಗ ಒಮ್ಮಿಂದೊಮ್ಮೆ ಅದೇ ಗೌನಳ್ಳಿ ಬಸ್ಸಣ್ಣನವರನ್ನು ಪಕ್ಷದಿಂದಲೇ ಉಚ್ಚಾಟಿಸುವ ಉದ್ಧಟತನ ತೋರಿರುವ ಧ್ರಮ್‌ಸಿಂಗ್ ಘೋರ ತಪ್ಪನ್ನೆ ಎಸಗಿದ್ದಾನೆ. ಅದಕ್ಕೆ ಈ ಚುನಾವಣೆಯಲ್ಲಿ ಪ್ರತಿಫಲ ಸಿಗಲಿದೆ.

ಪಕ್ಷದಿಂದ ಉಚ್ಚಾಟನೆಗೊಂಡ ಗೌನಳ್ಳಿ ಈಗ ಆಕ್ರೋಶದಿಂದ ಕುದಿಯುತ್ತಿದ್ದಾನೆ. ಜೊತೆಗೆ ಈಗಾಗಲೆ ಮತಕ್ಷೇತ್ರದ ಉದ್ದಗಲಕ್ಕೂ ಸಂಚರಿಸಿ ತಾನು ಯಾರಿಗೆ ಸಪೋರ್ಟ್ ಮಾಡಿದರೆ ಚೆನ್ನಾಗಿರುತ್ತದೆ ಎಂದು ತನ್ನ ಹಿಂಬಾಲಕರನ್ನು ಕೇಳತೊಡಗಿದ್ದಾನೆ. ಗೌನಳ್ಳಿಯೇನಾದರೂ ಗಟ್ಟಿಯಾಗಿ ನಿಂತು, ಬಿ.ಜೆ.ಪಿಯ ನರಬೋಳಿ ದೊಡ್ಡಪ್ಪಗೌಡನನ್ನು ಬೆಂಬಲಿಸುವ ನಿರ್ಧಾರಕ್ಕೆ ಬಂದರೆ (ಧರ್ಮಸಿಂಗ್ ಡುಬ್ಬ ಕೆತ್ತಲು ರೆಡಿಯಾದರೆ) ಧ್ರಮ್‌ಸಿಂಗ್ ಪರ್ಮನೆಂಟಾಗಿ ಮನೆ ಸೇರಬೇಕಾಗುತ್ತದೆ.

■ ವಿಶ್ವಾರಾಧ್ಯ ಸತ್ಯಂಪೇಟೆ

ಹುಬ್ಬಳ್ಳಿ ಚುನಾವಣಾ ಚಮಕ್

ಹಾಲಹರವಿಯ ಚೆಡ್ಡಿಯೇಕೆ ಒದ್ದೆಯಾಯಿತು?

ಹುಬ್ಬಳ್ಳಿ ಶಹರ ಮೀಸಲು ಕ್ಷೇತ್ರಕ್ಕೆ ಬಿಜೆಪಿಯಿಂದ ವೀರಭದ್ರಪ್ಪ ಹಾಲಹರವಿ ಟಿಕೆಟ್ ಪಡೆದಿದ್ದಾರೆ. ಆದರೆ ಇವರ ಕಾಲೆಳೆಯುವುದಕ್ಕೂ ಬಿಜೆಪಿಯಲ್ಲಿ ಗಟ್ಟಿಮುಟ್ಟಾದ ತಂಡವೊಂದು ಸಜ್ಜಾಗಿ ನಿಂತಿದೆ. ಅವರೆಲ್ಲರೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಉದ್ಯೋಗಿ ಚಂದ್ರಶೇಖರ್ ಗೋಕಾಕ್ ಬೆಂಬಲಿಗರು. ಚಂದ್ರಶೇಖರ್ ಗೋಕಾಕರು ಕೊರವ ಸಮಾಜದ ನಾಯಕರಾಗಿದ್ದಾರೆ, ಸಂಘಪರಿವಾರದಲ್ಲಿ ಕೆಲಸ ಮಾಡಿದ್ದಾರೆ, ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದಾರೆ ಎಂಬ ಮಾನದಂಡಗಳನ್ನು ಮುಂದಿಟ್ಟು ಅವರಿಗೇ ಟಿಕೆಟ್ ಕೊಡಬೇಕು ಅಂತ ಪ್ರತಿಭಟನೆಗಿಳಿದಿದ್ದಾರೆ. ಹತ್ತು ಜನ ಪಾಲಿಕೆ ಸದಸ್ಯರು ಗೋಕಾಕನ ಹಿಂದಿದ್ದಾರೆ. ಗೋಕಾಕರಿಗೆ ಟಿಕೆಟ್ ನೀಡದೆ ಬೇರೆ ಯಾರಿಗೇ ಟಿಕೆಟ್ ನೀಡಿದರೂ ಅವರನ್ನು ಸೋಲಿಸಲು ಶಕ್ತಿಮೀರಿ ಪ್ರಯತ್ನಿಸುತ್ತೇವೆ ಎಂದು ಮೊನ್ನೆ ಬಹಿರಂಗ ಪ್ರತಿಭಟನೆ ಮಾಡಿ ಆವಾಜ್ ಹಾಕಿದ್ದಾರೆ. ಇದನ್ನು ಕೇಳಿಯೇ ಹಾಲಹರವಿಯ ಚೆಡ್ಡಿ ಒದ್ದೆ ಆಗಿದೆ.


ಹೊರಗಿನ ದೆವ್ವ ಬಂದು ಮನಿ ದೆವ್ವನನ್ನು ಓಡಿಸುತ್ತಿದೆಯೆ?

ಬಿಜೆಪಿ ಸಂಸದ ಮಂಜುನಾಥ್ ಕುನ್ನೂರು ಕಾಂಗ್ರೆಸ್‌ಗೆ ಸೇರಿದ ಸುದ್ದಿ ಈಗ ಹಳೆಯದಾಗಿದೆ. ಆದರೂ ಬಿಜೆಪಿಗಳು ಅದನ್ನು ಒಪ್ಪಿಕೊಳ್ಳಲು ಹಿಂಜರಿಯುತ್ತಿದ್ದಾರೆ. 'ಕುನ್ನೂರು ಇನ್ನೂ ಬಿಜೆಪಿ ಬಿಟ್ಟಿಲ್ಲ' ಅಂತ ಬಿಜೆಪಿಯ ಮುದಿ ರಾಜಕಾರಣಿ ಸಿ.ಎಂ.ಉದಾಸಿ ಹೇಳಿದರೆ, ಇನ್ನೊಬ್ಬ ಬಿಜೆಪಿ ಗಿರಾಕಿ 'ಕುನ್ನೂರು ಕಾಂಗ್ರೆಸ್ ಸೇರೋದ್ರಿಂದ ನಮಗೇನೂ ನಷ್ಟವಿಲ್ಲ' ಅಂತಾರೆ. ಕುನ್ನೂರು ಬಿಜೆಪಿಗೆ ಬೆನ್ನು ತೋರಿಸಿ ಹೋಗಿರುವುದು ಚುನಾವಣೆಯ ಮೇಲೆ ಪ್ರಭಾವ ಬೀರಿ ತಮಗೆ ನೆಗೆಟಿವ್ ಪಾಯಿಂಟ್ ಆಗುತ್ತೆ ಅಂತ ಬಿಜೆಪಿಗಳು ಗಾಬರಿಗೊಂಡಿರುವುದಂತೂ ಎದ್ದು ಕಾಣುತ್ತದೆ.

'ಆದರೆ ಕುನ್ನೂರ್‌ಗೆ ಕಾಂಗ್ರೆಸ್‌ನಲ್ಲೂ ಅದ್ದೂರಿ ಸ್ವಾಗತ ಇಲ್ಲ ಎಂಬುದೂ ಅಷ್ಟೇ ಸ್ಪಷ್ಟ. 'ಕುನ್ನೂರು ಕಾಂಗ್ರೆಸ್‌ಗೆ ಬಂದಿರೋದು ಸ್ವಾಗತ. ಆದರೆ, ಟಿಕೆಟ್ ಕೇಳಿದರೆ ನಾನು ಸುಮ್ಮನಿರೋಲ್ಲ' ಅಂತ ಕಾಂಗ್ರೆಸ್‌ನ ಹಿರಿಯ ರಾಜಕಾರಣಿ ಹಾಗೂ ಶಿಗ್ಗಾಂವ್ ಕ್ಷೇತ್ರದ ಮಾಜಿ ಶಾಸಕ ಅಜ್ಜಂಪೀರ್ ಖಾದ್ರಿ ಗದರಿಸಿರುವುದು ಕುನ್ನೂರ್‌ಗೆ ಕಾಂಗ್ರೆಸ್‌ನಲ್ಲಿ ಸಿಗುತ್ತಿರುವ ಆತಿಥ್ಯವನ್ನು ಎತ್ತಿ ತೋರುತ್ತದೆ. ಇನ್ನೊಬ್ಬ ಕಾಂಗ್ರೆಸ್ ಮುಖಂಡ ಮಾಜಿ ಸಚಿವ ಕೆ.ಬಿ. ಕೋಳಿವಾಡ 'ಕುನ್ನೂರು ಕಾಂಗ್ರೆಸ್‌ಗೆ ಬಂದಿರೋದು ಓಕೆ. ಆದರೆ, ಅವರಿಗೆ ಶಿಗ್ಗಾಂವ್ ಟಿಕೆಟ್ ಕೊಡುವುದಕ್ಕೆ ಎಲ್ಲ ಕಾಂಗ್ರೆಸ್ ಮುಖಂಡರ ವಿರೋಧವಿದೆ' ಅಂತ ಗುಡುಗಿದ್ದಾರೆ.

ಆದರೆ ಕುನ್ನೂರು ಮಾತ್ರ "ಯಾರೇ ಏನೇ ಅಂದರೂ ಕಾಂಗ್ರೆಸ್ ಹೈಕಮಾಂಡ್ ನನ್ನ ಪರವಾಗಿದೆ, ಶಿಗ್ಗಾಂವ್ ಕ್ಷೇತ್ರದ ಟಿಕೆಟ್ ಗ್ಯಾರಂಟಿ'' ಅಂತ ಸುಮ್ಮನಿದ್ದಾರೆ. ಆದರೆ, 'ಹೊರಗಿನ ದೆವ್ವ ಬಂದು ಮನಿ ದೆವ್ವನನ್ನು ಓಡಿಸಿತು' ಅನ್ನೋ ಫಜೀತಿ ಶಿಗ್ಗಾಂವ್‌ನ ಮಾಜಿ ಶಾಸಕ ಅಜ್ಜಂಪೀರ್ ಖಾದ್ರಿಯದು.

ಬೆಲ್ಲದ್ ಹಟಾವೋ ಬಿಜೆಪಿ ಬಚಾವೋ



ಬಂಡಾಯದಿಂದ ಬಿಜೆಪಿ ತತ್ತರಿಸಿ ಹೋಗಿದೆ. ಚಂದ್ರಕಾಂತ್ ಬೆಲ್ಲದ್‌ಗೆ ಟಿಕೆಟ್ ನೀಡಿರುವುದನ್ನು ಪ್ರತಿಭಟಿಸಿ ಹುಬ್ಬಳ್ಳಿ-ಧಾರವಾಡಗಳಲ್ಲಿ ಪಕ್ಷದೊಳಗೇ 'ಬೆಲ್ಲದ್ ಹಟಾವೋ, ಬಿಜೆಪಿ ಬಚಾವೋ' (ಬೆಲ್ಲದ್‌ನನ್ನು ತೊಲಗಿಸಿ, ಬಿಜೆಪಿಯನ್ನು ರಕ್ಷಿಸಿ) ಎಂಬ ಸ್ಲೋಗನ್ ಅಡಿಯಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆಗಿಳಿದಿದ್ದಾರೆ. ಇದೇ ಸ್ಲೋಗನ್ ಅಡಿಯಲ್ಲಿ ಮೊನ್ನೆ ಧಾರವಾಡದಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಬಹಿರಂಗ ಪ್ರತಿಭಟನೆಗೆ ಮಕಬೂಲ್ ಬೆಳಗಾಂವಕರ್ ನೇತೃತ್ವ ವಹಿಸಿದ್ದಾರೆ. ಬರಲಿರುವ ಚುನಾವಣೆಯಲ್ಲಿ ಬಿಜೆಪಿ ಮಣ್ಣು ಮುಕ್ಕುವುದಕ್ಕೆ ಇಷ್ಟು ಸಾಕು ತಾನೆ?

ಚಿಕ್ಕನಗೌಡ್ರ ವಿರೋಧವಾಗಿ ಉರುಳುಸೇವೆ!

ಕ್ಷೇತ್ರ ಪುನರ್ವಿಂಗಡಣೆಯ ಪರಿಣಾಮವಾಗಿ ತಮ್ಮ ಕಲಘಟಗಿ ಕ್ಷೇತ್ರ ಕಳೆದುಕೊಂಡು ಅನಾಥವಾಗಿರುವ ಎಸ್.ಐ. ಚಿಕ್ಕನಗೌಡ್ರು ಪಕ್ಕದ ಕುಂದಗೋಳ ಕ್ಷೇತ್ರಕ್ಕೆ ವಕ್ಕರಿಸಿಕೊಂಡಿದ್ದಾರೆ. ಆದರೆ ಬೇರೆ ಪಕ್ಷಗಳ ಮಾತು ದೂರ ಇರಲಿ, ಕುಂದಗೋಳದ ತಮ್ಮದೇ ಬಿಜೆಪಿ ಪಕ್ಷದ ಕಾರ್ಯಕರ್ತರು ಅವರ ವಿರುದ್ಧ ಸೆಟೆದು ನಿಂತಿದ್ದಾರೆ.

ಕುಂದಗೋಳವನ್ನು ಪ್ರತಿನಿಧಿಸಿದ್ದ ಎಂ.ಎಸ್.ಅಕ್ಕಿ ಎಂಬ ಮಾಜಿ ಶಾಸಕ ಹಾಗೂ ಈಗಾಗಲೇ ರೈತರಲ್ಲಿ ಕೇಸರಿ ವಿಷವನ್ನು ಬಿತ್ತುವಲ್ಲಿ ಒಂದಿಷ್ಟು ಯಶಸ್ವಿಯಾಗಿದ್ದ ಎಂ.ಆರ್.ಪಾಟೀಲ್ ಅಭಿಮಾನಿಗಳು ತಮ್ಮ ತಮ್ಮ ನಾಯಕರುಗಳ ಪರವಾಗಿ ಮತ್ತು ವಿಶೇಷವಾಗಿ ಚಿಕ್ಕನಗೌಡ್ರ ವಿರೋಧವಾಗಿ ಉರುಳುಸೇವೆ, ವಿಶೇಷ ಪೂಜೆಗಳನ್ನು ಹಮ್ಮಿಕೊಂಡಿದ್ದಾರೆ. ಚಿಕ್ಕನಗೌಡ್ರಿಗೆ ಇದು ನುಂಗಲಾರದ ತುತ್ತಾಗಿದೆ. ಒಟ್ಟಿನಲ್ಲಿ ಬಿಜೆಪಿ ಇಂತಹ ಒಳಜಗಳ, ಕಚ್ಚಾಟ, ಬಂಡಾಯ ರಾಜ್ಯಾದ್ಯಂತ ಹೆಚ್ಚೂ ಕಮ್ಮಿ ಎಲ್ಲ ಕ್ಷೇತ್ರಗಳಲ್ಲೂ ಕಾಣುತ್ತಿದೆ. ಈ ಬಾರಿಯ ಚುನಾವಣೆಯಲ್ಲಿ ಈ ಒಳ-ಕಚ್ಚಾಟವೇ ಅದನ್ನು ಹಣ್ಣುಗಾಯಿ ನೀರುಗಾಯಿ ಮಾಡಿದರೆ ಅಚ್ಚರಿಯೇನಿಲ್ಲ.

ಮಹಿಳೆಯರು ಕೂಗಲು ಬೇಕು, ಟಿಕೆಟ್ ಕೇಳಲು ಅಲ್ಲ!

ಧಾರವಾಡ ಜಿಲ್ಲೆಯಲ್ಲಿ ಒಟ್ಟು ಏಳು ವಿಧಾನಸಭಾ ಕ್ಷೇತ್ರಗಳಿವೆ. ಕಾಂಗ್ರೆಸ್‌ನ ಅಧಿನಾಯಕಿ ಸೋನಿಯಾ ಕೂಡ ಒಬ್ಬ ಮಹಿಳೆ, ಮಹಿಳೆಯರಿಗೆ ಆದ್ಯತೆ ನಿಡುತ್ತಾರೆ ಅಂದುಕೊಂಡು ಅನೇಕ ಮಹಿಳೆಯರು ಟಿಕೆಟ್ ಅರಸಿ ಅರ್ಜಿ ಹಾಕಿದ್ದರು. ನವಲಗುಂದದಿಂದ ಶಾಂತಮ್ಮ ಗುಜ್ಜಳ, ಕುಂದಗೋಳದಿಂದ ಗೀತ ಕರೆಮ್ಮನವರ್, ಶಾರದ ಪಟ್ಟಿಲ, ಧಾರವಾಡ ಕ್ಷೇತ್ರದಿಂದ ಮಂಗಳಗೌರಿ ಅಗ್ನಿಹೋತ್ರಿ, ಹುಬ್ಬಳ್ಳಿ-ಧಾರವಾಡ ಪೂರ್ವ ಮೀಸಲು ಕ್ಷೇತ್ರದಿಂದ ಶೀಲ ಮಿರ್ಜಿ - ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಆದರೆ, ಸೋನಿಯ 'ನೋ' ಎಂದು ಬಿಸಿದ್ದಾರೆ. ಹೀಗಾಗಿ 'ನಾವು ಮಹಿಳೆಯರು ಘೋಷಣೆ ಕೂಗಲು ಮಾತ್ರ ಬೇಕು, ಟಿಕೆಟ್ ಕೇಳಲು ಅಲ್ಲ' ಎಂಬ ಘೋಷಣೆಯನ್ನೇ ಕೂಗುತ್ತಾ ಈಗ ಹುಬ್ಬಳ್ಳಿ ಶಹರ ಮೀಸಲು ಕ್ಷೇತ್ರದಿಂದ ಸುಧಾ ಮಣಿಕುಂಡಲ್ ಎಂಬ ಪಾಲಿಕೆ ಸದಸ್ಯೆ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾರೆ. ಇವರ ಸ್ಪರ್ಧೆ ಕಾಂಗ್ರೆಸ್‌ಗೆ ಒಂದಿಷ್ಟು ಹಾನಿ ಮಾಡುವುದಂತೂ ಸತ್ಯ.

ಧಾರವಾಡ ಗ್ರಾಮೀಣ ಕ್ಷೇತ್ರದಿಂದ 1972 ಮತ್ತು 78ರಲ್ಲಿ ಸುಮತಿ ಮಡಿವಣ್ಣನ್ ಹಾಗೂ 1989ರಲ್ಲಿ ಕಲಘಟಗಿ ಕ್ಷೇತ್ರದಿಂದ ಮನೋರಮ ಎಂಬ ಮಹಿಳೆಯರು ಸ್ಪರ್ಧಿಸಿದ್ದು ಬಿಟ್ಟರೆ ಅವಿಭಜಿತ ಧಾರವಾಡ ಜಿಲ್ಲೆಯಲ್ಲಿ ಮಹಿಳೆಯರನ್ನು ಕಾಂಗ್ರೆಸ್ ಕಣಕ್ಕಿಳಿಸಿದ ಇತಿಹಾಸವೇ ಇಲ್ಲ, ಈಗ ಮಣಿಕುಂಡಲ್ ಗೆಲ್ಲುತ್ತಾರೋ ಅಥವಾ ಕಾಂಗ್ರೆಸ್‌ಗೆ ಹಾನಿ ಮಾಡುವಲ್ಲಿ ಮಾತ್ರವೇ ಯಶಸ್ವಿಯಾಗುತ್ತಾರೋ ನೋಡಬೇಕು.

ಮಹಿಮಾ ಪಟೇಲ್ ಅಭಿಮನ್ಯು ಆಗುತ್ತಾರಂತಲ್ಲಾ!

ಥೂತ್ತೇರಿ

ಯಾಹೂ

ಇತ್ತ ಕರ್ನಾಟಕವನ್ನು ಕೊಳ್ಳೆ ಹೊಡೆಯಲು ಕನಿಷ್ಠ ಒಂದು ಕ್ಷೇತ್ರಕ್ಕೆ ಇಪ್ಪತ್ತು ಕೋಟಿ ಬಂಡವಾಳ ಸುರಿಯಲು ಮೂರು ಪಾರ್ಟಿಗಳು ಮೂಟೆ ತುಂಬುತ್ತಿದ್ದರೆ, ಇತ್ತ ಸರ್ವೋದಯ ಕರ್ನಾಟಕ, ಬಿಎಸ್‌ಪಿ, ಸಿಪಿಐ(ಎಂ) ಮತ್ತು ಇತರೇ ಹಲವು ಪಾರ್ಟಿಗಳು ಹ್ಯಾಂಡ್ ಬಿಲ್ಲುಗಳನ್ನು ಪ್ರಿಂಟಿಗೆ ಕೊಟ್ಟು ಇನ್ನೂ ಕಾಯುತ್ತಿವೆಯಂತಲ್ಲಾ. ಇನ್ನೊಂದು ಕಡೆ ಎರಡು ಕ್ಷೇತ್ರಗಳನ್ನು ಬಿಜೆಪಿಗಿ ಹಸ್ತಾಂತರ ಮಾಡಿ ಕಾಂಗ್ರೆಸ್‌ನಲ್ಲಿ ಏಗುತ್ತಿರುವ ಡಿ.ಬಿ. ಚಂದ್ರೇಗೌಡರು 'ಬಂ' ಪಾದದ ಬಳಿ ಕುಳಿತು, "ನೋಡಿ, ದೊಡ್ಡ ಮನಸ್ಸು ಮಾಡಿ. ನಮ್ಮ ಜೊತೆ ಬನ್ನಿ. ನಮ್ಮ ಬೂತುಗಳನ್ನು ಈಡಿಗರ ಉಪಟಳದಿಂದ ಪಾರು ಮಾಡಿ" ಎಂದು ಬೇಡಿಕೊಂಡರಂತಲ್ಲಾ. ಇದನ್ನು ಕೇಳಿ ಒಳಗೊಳಗೇ ನಕ್ಕ 'ಬಂ', "ಅದು ಸರಿ ಚಂದ್ರೇಗೌಡ್ರೆ. ನನ್ನಿಂದ ನಿಮ್ಮ ಎಸ್ಸೆಂ ಕೃಷ್ಣ ವಿರೋಧ ಪಕ್ಷವೇ ಇಲ್ಲದಂತೆ ಆಡಳಿತ ಮಾಡಿದರು. ಅದೇ ನನ್ನಿಂದ ಅಧಿಕಾರವನ್ನೂ ಕಳೆದುಕೊಂಡರು. ಇಷ್ಟೆಲ್ಲಾ ಗೊತ್ತಿದ್ದೂ ಕೂಡ ಅವರು ಬಂದಿಲ್ಲ, ಹೋಗಿ ಅವರನ್ನು ಕಳುಹಿಸಿ" ಎನ್ನುತ್ತಾ ತಮ್ಮ ಮಗ ಮಧು ಬಂಗಾರಪ್ಪನನ್ನು ಕರೆದು ದೇವೇಗೌಡರ ಮನೆ ಬಳಿ ಹೋಗಿ ಬರುವಂತೆ ಸೂಚಿಸಿದರಂತಲ್ಲಾ, ಥೂತ್ತೇರಿ!

* * * * *

ಅಪ್ಪನ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸಲು ಹೊರಟ ಮಧು, ಶಿರದ ಮೇಲಿದ್ದ ಕೂದಲನ್ನು ಸರಿ ಮಾಡಿಕೊಂಡು ಹೋಗಿ ದೇವೇಗೌಡರ ಮುಂದೆ ನಿಂತರಂತಲ್ಲಾ. ದೇವೇಗೌಡರು ತಮ್ಮ ಮೈಮೇಲೆ ಯಾವುದೋ ಲೋಕಲ್ ದೇವರು ಅಮರಿಕೊಂಡಂತೆ ಕಣ್ಣುಮುಚ್ಚಿಕೊಂಡಿದ್ದು, ಎಷ್ಟು ಹೊತ್ತಾದರೂ ಅವು ತೆರೆದುಕೊಳ್ಳದ ಕಾರಣ "ಸರ್, ನಾನು ಮಧು ಬಂದಿದ್ದೀನಿ" ಎಂದರಂತಲ್ಲಾ, ಆಗ ಕಣ್ಣು ಬಿಟ್ಟ ಗೌಡರು, "ಯಾವಾಗ ಬಂದೆ? ಊರು ಕಡೆ ಎಲ್ಲಾ ಚೆನ್ನಾಗಿದಾರ? ಮಳೆ ಹೇಗಿದೆ?" ಎಂದು ಕೇಳಿದರಂತಲ್ಲಾ, ಇದರಿಂದ ಬೆಚ್ಚಿದ ಮಧು "ನಾನು ಸಾರ್ ಬಂಗಾರಪ್ಪನವರ ಎರಡನೇ ಮಗ ಮಧು ಬಂಗಾರಪ್ಪ" ಎನ್ನಲಾಗಿ, "ಓಹ್ ಓ, ಬನ್ನಿ ಕೂತುಗೊಳಿ. ಬಂಗಾರಪ್ಪನವರ ಆರೋಗ್ಯ ಹೇಗಿದೆ? ಎಷ್ಟೇ ತೊಂದರೆಯಾದರೂ ಈ ಸಮಯದಲ್ಲಿ ಆಸ್ಪತ್ರೆಗೆ ಅಡ್ಮಿಟ್ ಆಗಬಾರದಿತ್ತು. ನನಗೂ ಆರೋಗ್ಯ ಕೆಟ್ಟಾಗ ಮನೆಗೇ ವೈದ್ಯರನ್ನು ಕರೆಸುತ್ತೇನೆಯೇ ಹೊರತೂ ನಾನೆಂದೂ ಆಸ್ಪತ್ರೆ ಬಳಿಗೋಗಲ್ಲ" ಎಂದರಂತಲ್ಲಾ, ಥೂತ್ತೇರಿ!!!

* * * * *

ದೇವೇಗೌಡರ ಬಳಿ ಮಾತನಾಡಲು ಬಂದ ವಿಷಯ ನೆನೆಸಿಕೊಂಡ ಮಧು "ಅಪ್ಪ ನಿಮ್ಮನ್ನ ಸೀಟು ಕೇಳು ಅಂತ ಕಳಿಸಿದಾರೆ" ಎಂದರಂತಲ್ಲಾ, ಅದಕ್ಕೆ ಗೌಡರು "ಸೀಟು ನಮ್ಮಲ್ಲಿ ಬೇಕಾದಷ್ಟಿವೆ. ನಮಗೆ ಬೇಕಿರುವ ಸೀಟುಗಳಲ್ಲಿ ಮಾತ್ರ ಅಭ್ಯರ್ಥಿಗಳನ್ನು ನಿಲ್ಲಿಸಿಕೊಂಡು ಉಳಿದವನ್ನು ಖಾಲಿ ಬಿಟ್ಟಿದ್ದೇವೆ. ಅಲ್ಲೆಲ್ಲಾ ನಿಮ್ಮ ಪಾರ್ಟಿ ಸ್ಪರ್ಧಿಸಿಕೊಂಡು ಆದಷ್ಟು ಕಾಂಗ್ರೆಸ್ ಸೀಟುಗಳನ್ನು ಸೋಲಿಸಬೇಕು" ಎಂದರಂತಲ್ಲಾ. ದೇವೇಗೌಡರು ಖಾಲಿ ಬಿಟ್ಟಿರುವ ಸೀಟುಗಳು ಯಾವುವು, ಅಲ್ಲಿ ನಮ್ಮ ಪಾರ್ಟಿ ಇದೆಯಾ, ಇದ್ದರೂ ಅಲ್ಲಿ ಯಾವ ಅಭ್ಯರ್ಥಿ ನಿಲ್ಲಿಸುವುದು ಎಂಬ ಆಲೋಚನೆಗಳಲ್ಲಿ ಮುಳುಗಿ ಹೋದ ಮಧು 'ಬಂ' ಶಾನೆ ಹೊತ್ತಿನ ನಂತರ ಎಚ್ಚೆತ್ತವರಂತೆ "ಹಾಗಾದರೆ ಬರ್ಲಾ ಸಾರ್?" ಎಂದು ಹೊರಟರಂತಲ್ಲಾ, ಆಗ ದೇವೇಗೌಡರು ಕೊನೆಯ ಮಾತೆಂಬಂತೆ "ಮುಂದೆ ಕುಮಾರಸ್ವಾಮಿ ಜೊತೆ ಚರ್ಚೆ ಮಾಡಿ, ಅವರ ನಾಯಕತ್ವವನ್ನು ಒಪ್ಪಿಕೊಂಡು ಬರೋದಾದರೆ ಐದು ಕ್ಷೇತ್ರವನ್ನು ಜಾಸ್ತಿ ಕೊಡುತ್ತೇವೆ" ಎಂದರಂತಲ್ಲಾ, ಥೂತ್ತೇರಿ!!

* * * * *

ಕರ್ನಾಟಕದಲ್ಲಿ ಅಕಾಲಿಕವಾಗಿ ಸಂಭವಿಸುತ್ತಿರುವ ಚುನಾವಣೆಯೆಂಬ ಕುರುಕ್ಷೇತ್ರದಲ್ಲಿ, ಅರ್ಜುನನಿಲ್ಲದ ಸಮಯದಲ್ಲಿ ಯಾವ ಅಭಿಮನ್ಯು ಚಕ್ರವ್ಯೂಹವನ್ನು ಭೇದಿಸಲೆಂದು ಹೋಗಿ ಹೊರಬರಲಾರದೆ ಹತನಾದನೋ, ಅದೇ ರೀತಿ ಪಟೇಲರಿಲ್ಲದ ಕಾಲದಲ್ಲಿ ಅವರ ಮಹಿಮಾಸುತನಾದ ಮಹಿಮಾ ಪಟೇಲ್ ಏಕಾಂಗಿಯಾಗಿ ಕುರುಕ್ಷೇತ್ರ ಯುದ್ಧ ಭೂಮಿಗೆ ಹೊರಟಿದ್ದಾರಂತಲ್ಲಾ, ಅದೂ ನಿರಾಯುಧನಾಗಿ ಮತ್ತು ನಿರಸ್ತ್ರನೂ ಆಗಿ ಚುನಾವಣಾ ರಂಗವನ್ನು ಪ್ರವೇಶಿಸಿರುವ ಆ ಮಹಿಮಾ ಪಟೇಲರ ಧೈರ್ಯವನ್ನು ಮೆಚ್ಚಿ ಮಾತನಾಡಿಸಬೇಕೆನಿಸಿತಲ್ಲಾ, ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು,

ರಿಂಗ್‌ಟೋನ್: ಉತದೇವಾ ಅವಹಿತಂ ದೇವಾ ಉನ್ನಯಥಾ ಪುನಃ

ಉತಾಗಶ್ಚಕುಷಂ ದೇವಾದೇವಾ ಜೀವಿಯಥಾ ಪುನಃ

"ಹಲೋ, ಯಾರು?"

"ನಾನು ಸಾರ್, ಯಾಹೂ ಅಂತ, ಪತ್ರಕರ್ತ."

"ಓ, ನಮ್ಮ ಗೌರಿ ಲಂಕೇಶ್ ಪತ್ರಿಕೆಯವರಲ್ಲವಾ?"

"ಹೌದು ಸಾರ್, ಹಿಂದೊಮ್ಮೆ ಮಾತಾಡಿಸಿದ್ದೆ, ನಿಮ್ಮೂರಿಗೂ ಬಂದಿದ್ದೆ."

"ಗೊತ್ತಾಯ್ತು, ಏನೇಳಿ ಯಾಹೂ ಅವರೆ."

"ರಿಂಗ್‌ಟೋನ್ ಸ್ಲೋಕ ಚನ್ನಾಗ್ಗದೆ ಸಾರ್. ಅದರರ್ಥ ಏನು ಸಾರ್?"

"ಹೇ ಜಯವನ್ನು ಬಯಸುವವರೆ, ವ್ಯವಹಾರಸ್ಥರೇ, ಕೆಳಗಿನವರನ್ನು ಮೇಲೆತ್ತಿ, ಪಾಪ ಮಾಡುವವರನ್ನು ಸನ್ಮಾರ್ಗಕ್ಕೆ ತನ್ನಿ. ಅವರಿಗೆ ಹೊಸ ಜೀವನ ಕೊಡಿ ಅಂತ ಯಾಹೂ ಅವರೆ."

"ಬಹಳ ಚನ್ನಾಗಿದೆ ಸಾರ್. ನಿಮ್ಮ ದನಿ ಬುದ್ಧನ ದನಿ ಇದ್ದಂಗಿದೆ ಸಾರ್. ಪುನಃ ಕೇಳಬೇಕು ಅನ್ನಿಸ್ತಾಯಿದೆ."

"ಬುದ್ಧನ ದನಿ ನೀವೆಲ್ಲಿ ಕೇಳಿದ್ರಿ, ಯಾಹೂ? ಆ ಕಾಲದಲ್ಲಿ ಟೇಪ್ ರಿಕಾರ್ಡ್ ಇರಲಿಲ್ಲ."


"ಆದ್ರು ಕಲ್ಪಿಸಿಕೊಬಲ್ಲೆ ಸಾರ್. ಮನುಕುಲದ ಉದ್ಧಾರದ ಮಾತುಗಳು ಸಾಮಾನ್ಯವಾಗಿ ನಿಮ್ಮ ದನಿಲೆ ಕೇಳುಸ್ತವೆ ಅದ್ಕೆ ಹಾಗಂದೆ. ಹೇಗೆ ನಡದಿದೆ ಸಾರ್ ಕ್ಯಾನ್‌ವಾಸ್?"

"ಮೊದ್ಲು ತರನೆ ನಡೆಯುತ್ತೆ. ಯಾರಿಗೂ ಹಣ ಕೊಡದಿಲ್ಲ, ಯಾರಿಗೂ ಕುಡಸೊದಿಲ್ಲ. ಒಂದು ಹ್ಯಾಂಡ್‌ಬಿಲ್ ಕೊಡ್ತಿನಿ. ಕೈ ಮುಗದು ಓಟು ಕೇಳ್ತಿನಿ."

"ನಿಮ್ಮ ತಂದೆಯವರ ಗೆಳೆಯರಾದ ಗೋಪಾಲಗೌಡ್ರು ನಿಮ್ಮ ತರನೇ ಚುನಾವಣೆ ಮಾಡಿದ್ರು ಸಾರ್. ನಾವು ಕೇಳಿ ತಿಳಕೊಂಡಂತಹ ಆ ಕಾಲ ಚನ್ನಗಿರಿ ಭಾಗದಲ್ಲಿ ಮರುಕಳಿಸಿದೆ ಅಂದ್ರೆ ಬಹಳ ಖುಷಿಯಾಗ್ತಯಿದೆ. ನಾನು ಒಂದು ದಿನ ಬಂದು ನಿಮ್ಮ ಜೊತೆ ನಾಲ್ಕು ಹೆಜ್ಜೆ ಹಾಕಬೇಕು ಅನ್ನಿಸ್ತಾಯಿದೆ ಸಾರ್."

"ಬನ್ನಿ, ನಾನು ನಿಮಗೋಸ್ಕರ ಕಾಯ್ತಿನಿ. ಆದ್ರೆ ನಿಮ್ಮ ದುಡ್ನಲ್ಲೇ ಕುಡುದು, ನಿಮ್ಮ ದುಡ್ನಲ್ಲೇ ಊಟ ಮಾಡಿ ಹೋಗಬೇಕು. ವೆಜಿಟೇರಿಯನ್ ಊಟ ಆದ್ರೆ ನಾನೂ ಕೂಡ ಕಂಪ್ನಿ ಕೊಡ್ತಿನಿ."

"ಥೂತ್ತೇರಿ!!!





ಯಡಿಯೂರಪ್ಪನವರ ಮೃತ ಪತ್ನಿ ಮೈತ್ರಾದೇವಿಯ ಆತ್ಮವು ಶಿಕಾರಿಪುರದ ಮಾಸೂರು ರಸ್ತೆಯ ಸ್ಮಶಾನದಲ್ಲಿ ಅಲೆದಾಡಿಕೊಂಡಿದೆಯೆಂದು ಇವತ್ತಿಗೂ ಆ ಊರಿನ ಜನ ನಂಬುತ್ತಾರೆಂದರೆ, ರಾತ್ರಿ ಹೊತ್ತು ಸ್ಮಶಾನದ ಆಜೂಬಾಜಿನ ಸರಸ್ವತಿಪುರ ಮತ್ತು ಜಟ್‌ಫಟ್ ನಗರದ ಬೀದಿಗಳು ಈ ಕಾರಣಕ್ಕೆ ನಿರ್ಮಾನುಷಗೊಳ್ಳುತ್ತವೆಯೆಂದರೆ ಅದಕ್ಕೂ ಒಂದು ಕಾರಣವಿರಲೇಬೇಕಲ್ಲವೇ?

ಯಡ್ಡಿ ಬಚ್ಚಿಟ್ಟ ಸತ್ಯಗಳು!

ಶಿಕಾರಿಪುರದಲ್ಲಿ ಮೈತ್ರಾದೇವಿಯ ಪ್ರೇತಾತ್ಮ

■ ರಾ. ಸೋಮನಾಥ್

ಮೌಢ್ಯಕ್ಕೂ ಕಾರಣಗಳಿರುತ್ತವೆ.

ಯಡಿಯೂರಪ್ಪನವರ ಮೃತ ಪತ್ನಿ ಮೈತ್ರಾದೇವಿಯ ಆತ್ಮವು ಶಿಕಾರಿಪುರದ ಮಾಸೂರು ರಸ್ತೆಯ ಸ್ಮಶಾನದಲ್ಲಿ ಅಲೆದಾಡಿಕೊಂಡಿದೆಯೆಂದು ಇವತ್ತಿಗೂ ಆ ಊರಿನ ಜನ ನಂಬುತ್ತಾರೆಂದರೆ, ರಾತ್ರಿ ಹೊತ್ತು ಸ್ಮಶಾನದ ಆಜೂಬಾಜಿನ ಸರಸ್ವತಿಪುರ ಮತ್ತು ಜಟ್‌ಫಟ್ ನಗರದ ಬೀದಿಗಳು ಈ ಕಾರಣಕ್ಕೆ ನಿರ್ಮಾನುಷಗೊಳ್ಳುತ್ತವೆಯೆಂದರೆ ಅದಕ್ಕೂ ಒಂದು ಕಾರಣವಿರಲೇಬೇಕಲ್ಲವೇ?

ಅದರರ್ಥ ಮೈತ್ರಾದೇವಿಯದು ಕೇವಲ ದುರ್ಮರಣವಲ್ಲ, ಅದೊಂದು ಬರ್ಬರ ಕೊಲೆಯೆಂದು ಯಡ್ಡಿಗೆ ಓಟು ಕೊಟ್ಟವರೇ ನಿರ್ಧರಿಸಿಬಿಟ್ಟಿದ್ದಾರೆ!



ರಾಘವೇಂದ್ರ



ವಿಜಯೇಂದ್ರ

ಶಿಕಾರಿಪುರದ ಜನರ ಇಂಥ ನಂಬುಗೆಗೂ ಕಾರಣಗಳಿವೆ. ಸಹಜ ಸಾವಿಗೂ ಮುನ್ನ ಆತ್ಮಹತ್ಯೆ ಮಾಡಿಕೊಂಡವರು, ಕೊಲೆಗೀಡಾದವರು ಹೀಗೆ ಪ್ರೇತವಾಗಿ ಸುತ್ತಾಡಿಕೊಂಡಿರುತ್ತಾರೆಂಬುದು ಪ್ರತೀತಿಯಾದರೆ; ಮೈತ್ರಾದೇವಿ ಸತ್ತ ರೀತಿ, ಅದನ್ನು ಯಡ್ಡಿ ಮುಚ್ಚಿ ಹಾಕಿದ ಪರಿ ಮತ್ತು ಇಡೀ ಮೈತ್ರಾದೇವಿಯ ಕುಟುಂಬದ ದುರಂತಕ್ಕೆ ಯಡ್ಡಿ ಕಾರಣನಾದ ಗತಿ ಇತ್ಯಾದಿಗಳೆಲ್ಲವೂ ಇಂಥದೊಂದು ತರ್ಕಕ್ಕೆ ಪುಷ್ಟಿಕೊಟ್ಟವೆ.

2004ರ ಅಕ್ಟೋಬರ್ 16ರ ಬೆಳ್ಳಂಬೆಳಗ್ಗೆ ತಮ್ಮ ಶಿವಮೊಗ್ಗದ ವಿನೋಭನಗರದ ಮನೆಯ ಸಂಪಿನೊಳಕ್ಕೆ ಹೆಣವಾಗಿ ಬಿದ್ದಿದ್ದ ಮೈತ್ರಾದೇವಿಯದು ಸಹಜ ಸಾವಾಗಲಿ, ಆತ್ಮಹತ್ಯೆಯಾಗಲಿ ಅಲ್ಲವೆಂಬುದು ಕೇವಲ ಶಿಕಾರಿಪುರಕ್ಕಷ್ಟೇ ಅಲ್ಲ, ಇಡೀ ಶಿವಮೊಗ್ಗಕ್ಕೇ ಚೆನ್ನಾಗಿ ಗೊತ್ತು. ಅವತ್ತು ಬೆಳಗ್ಗಿನ ಪೂಜೆಗೆಂದು ಚೊಂಬಿನಿಂದ ನೀರ ಮೊಗೆಯಲು ಬಗ್ಗಿದಾಗಲೇ ಹಾರ್ಟ್ ಆಟ್ಯಾಕ್ ಸಂಭವಿಸಿತೆಂದೂ, ಅವರು ಸಂಪಿನೊಳಕ್ಕೆ ಬಿದ್ದು ತೀರಿಕೊಂಡರೆಂದೂ ಯಡ್ಡಿ ಕತೆ ಹೊಡೆಯುತ್ತಾರೆ. ಅದನ್ನೇ ಪತ್ರಿಕೆಗಳು ನಂಬುತ್ತವೆ. ಇನ್ನೂ ಕೆಲ ಮೀಡಿಯಾಗಳು ಮೈತ್ರಾದೇವಿಗೆ ಮನೋರೋಗವಿತ್ತು, ಅವರ ಇಬ್ಬರು ತಮ್ಮಂದಿರೂ ಬುದ್ಧಿಮಾಂದ್ಯರಾಗಿದ್ದರು, ಆ ಕಾರಣದಿಂದಲೇ ಮೈತ್ರಾದೇವಿ ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ತಿಪ್ಪೆ ಸಾರಿಸುತ್ತಾರೆ.

ಪೋಸ್ಟ್ ಮಾರ್ಟಂ ಏಕಿಲ್ಲ?

ಆದರೆ ಯಾರೂ ತಲೆ ಕೆಡಿಸಿಕೊಳ್ಳದ ವಾಸ್ತವವೆಂದರೆ, ಕೇವಲ ಒಂದೂವರೆ ಅಡಿಯಷ್ಟು ಉದ್ದ ಅಗಲಕ್ಕಿದ್ದ ಆ ತೊಟ್ಟಿಯಲ್ಲಿ ತೋರಗಾತ್ರದ ಮೈತ್ರಾದೇವಿ ಹೇಗೆ ತಾನೇ ಮುಳುಗಲು ಸಾಧ್ಯ? ಆತ್ಮಹತ್ಯೆಯ ಉದ್ದೇಶದಿಂದ ಪ್ರಯತ್ನಪಟ್ಟರೂ ಮುಳುಗಲು, ಧುಮುಕಲು ಸಾಧ್ಯವಿಲ್ಲದ ಕಿರುಬಾಯಿಯ ನೀರಿನ ತೊಟ್ಟಿಯಲ್ಲಿ ಮೈತ್ರಾದೇವಿಯ ಹೆಣವನ್ನು ತುರುಕಿದ್ದು ಯಾರು? ಯಾಕೆ ಪೊಲೀಸರು ಈ ಬಗ್ಗೆ ತನಿಖೆ ಮಾಡಲಿಲ್ಲ? ಯಾವುದೇ ದುರ್ಮರಣವಾದರೂ ಅದರ ಪೋಸ್ಟ್ ಮಾರ್ಟಂ ನಡೆಯಲೇಬೇಕು. ಅದು ಕಾನೂನು. ಅಸಹಜ ಸಾವು ಸಂಭವಿಸಿದಾಗ ಸಂಬಂಧಪಟ್ಟವರು ಅದನ್ನು ಪೊಲೀಸರ ಗಮನಕ್ಕೆ ತರಬೇಕೆಂಬುದೂ ನೆಲದ ಕಾಯ್ದೆ. ಹಾಗೊಮ್ಮೆ ಸಂಬಂಧಿಗಳು ಅಂಥ ಸಾವನ್ನು ಮುಚ್ಚಿಟ್ಟಿದ್ದೇ ಆದಲ್ಲಿ, ಈ ಬಗ್ಗೆ ಪೊಲೀಸರಿಗೆ ಮಾಹಿತಿ ಸಿಕ್ಕಲ್ಲಿ ಪೊಲೀಸರೇ ಆಸಕ್ತಿ ವಹಿಸಿ ತನಿಖೆ ನಡೆಸಬೇಕು. ಕಡ್ಡಾಯವಾಗಿ ಅಂಥ ಹೆಣವನ್ನು ಪೋಸ್ಟ್‌ಮಾರ್ಟಂಗೊಳಪಡಿಸಲೇಬೇಕು.

ಇಷ್ಟಾಗ್ಯೂ ಮೈತ್ರಾದೇವಿಯ ದುರ್ಮರಣದ ವಿಷಯದಲ್ಲಿ ಮಾತ್ರ ಯಾವೊಂದು ಕಾನೂನು ಕ್ರಮವೂ ಜರುಗಲೇ ಇಲ್ಲ ಏಕೆ?

ಯಡಿಯೂರಪ್ಪ ಆ ಹೊತ್ತಿಗೆ ರಾಜ್ಯದ ವಿರೋಧ ಪಕ್ಷದ ನಾಯಕ. ಮೈತ್ರಾದೇವಿಯದು ಸಾವಲ್ಲ ಕೊಲೆ ಎಂದೇ ಕೆಲ ಪತ್ರಿಕೆಗಳು ವಿಶೇಷ ವರದಿ ಪ್ರಕಟಿಸಿದ್ದವು. ಇವತ್ತಲ್ಲ ನಾಳೆ ತನ್ನ ಮೇಲೆ ಕೊಲೆ ಆರೋಪ ಬರಬಹುದೆಂದು ಯಡ್ಡಿಯಂಥ ವಿರೋಧಿ ನಾಯಕನೊಬ್ಬನಿಗೆ ಏಕೆ ತೋಚಲಿಲ್ಲ? ಯಾರೇ ಜನಸಾಮಾನ್ಯನೊಬ್ಬ ತನ್ನ ಮನೆಯಲ್ಲಿ ಜಾರಿಬಿದ್ದು ಸಾವಾದರೂ ಅದನ್ನು ಪೊಲೀಸರಿಗೆ ತಿಳಿಸುತ್ತಾನೆ. ತಾನೇ ಮೇಲೆ ಬಿದ್ದು ಪೋಸ್ಟ್ ಮಾರ್ಟಂ ಮಾಡಿಸಿ ತನ್ನ ಸಾಚಾತನವನ್ನು ಪ್ರಕಟಿಸುತ್ತಾನೆ. ಆದರೆ ಯಡ್ಡಿ ಮಾಡಿದ್ದಾದರೂ ಏನು?



ಎಸ್ಪಿ ಅರುಣ್ ಚಕ್ರವರ್ತಿ



ಅರುಣಾ ಮಗಳು

ನಲ್ಲಿಗಳಿದ್ದಾಗಲೂ.....

ಪೋಸ್ಟ್‌ಮಾರ್ಟಂ ಮಾಡದಂತೆ ಆಗ ಶಿವಮೊಗ್ಗದ ಎಸ್ಪಿಯಾಗಿದ್ದ ಅರುಣ್‌ಚಕ್ರವರ್ತಿಯ ಮೇಲೆ ಪ್ರಭಾವ ಬೀರುತ್ತಾರೆ. ದೊಡ್ಡಪೇಟೆಯ ಇನ್ಸ್‌ಪೆಕ್ಟರ್ ಶಿವಕುಮಾರ್‌ರನ್ನು ಕರೆಸಿಕೊಂಡು ಹಾರ್ಟ್ ಅಟ್ಯಾಕ್ ಆಗಿ ತೊಟ್ಟಿಗೆ ಬಿದ್ದರೆಂದು ಕತೆ ಕಟ್ಟುತ್ತಾರೆ. ಹೆಂಡತಿ ತೊಟ್ಟಿಗೆ ಬಿದ್ದ ಸಂದರ್ಭದಲ್ಲಿ ಮನೆಯಲ್ಲಿ ಯಾರೊಬ್ಬರೂ ಇರಲೇ ಇಲ್ಲ ಎಂದು ಮತ್ತೊಂದು ಕತೆ ಹೊಡೆಯು... ಹೆಂಡತಿ ಸತ್ತ ರೀತಿಯ ಫೋಟೋ ಕೂಡ ತೆಗೆಯಕೊ... ಬಂದ ಪತ್ರಕರ್ತರಿಗೂ ಇದೇ ಕತೆ ಹೇಳುತ್ತಾರೆ.

ಸರಿ, ಮೈತ್ರಾದೇವಿಗೆ ಹೃದಯಾಘಾತವೇ ಆಗಿ... ಯಡ್ಡಿಗೆ ಗೊತ್ತಾಗಿದ್ದು ಹೇಗೆ? ಯಡ್ಡಿ ಡಾಕ್ಟರ್ ಬೇರೆ ಯಾವುದೇ ವೈದ್ಯರನ್ನು ಕರೆಸಿ ಶವಪರೀಕ್ಷೆ... ಮಾಡಲಿಲ್ಲ ಎಂದಮೇಲೆ ಹಾರ್ಟ್ ಅಟ್ಯಾಕ್ ಅಂ... ಯಾವ ಆಧಾರದ ಮೇಲೆ ಹೇಳುತ್ತಾರೆ? ಓರ್ವ ವಿರೋ... ಪಕ್ಷದ ನಾಯಕನ ಮನೆಯಲ್ಲಿ ಕನಿಷ್ಠ ಒಬ್ಬ... ಕೆಲಸದವಳೂ ಇರುವುದಿಲ್ಲವೇ? ಯಾರೂ ಇ... ಏಕಾಂಗಿಯಾಗಿ ಮೈತ್ರಾದೇವಿ ಆ ಮನೆಯಲ್ಲಿರುತ್ತಿದ್ದರೆ... ಯಡ್ಡಿಯ ಕೌಟುಂಬಿಕ ಕ್ಷೋಭೆ ಇನ್ನೆಂಥದಿತ್ತು?

ಮೈತ್ರಾದೇವಿಯದು ದುರ್ಮರಣವಲ್ಲ, ಕೆ... ಎಂಬುದಕ್ಕೆ ಇಂಥ ಸಣ್ಣಸಣ್ಣ ಪ್ರಶ್ನೆಗಳೇ ಪುಷ್ಟಿಕೊಡು...



2004ರ ಅಕ್ಟೋಬರ್ 16ರ ಬೆಳ್ಳಂಬೆಳಿಗ್ಗೆ ಮೈತ್ರಾ... ಪೂಜೆಗೆಂದು ಪಂಚಪಾತ್ರೆಯಲ್ಲಿ ನೀರೆತ್ತಿಕೊಳ್ಳಲು ... ಮುಂದಿನ ತೊಟ್ಟಿಗೆ ಬಗ್ಗಿದಾಗಲೇ ಹೃದಯಾ... ಸಂಭವಿಸಿತೆಂದು ಒಮ್ಮೆ ಹೇಳುವ ಯಡ್ಡಿ ಮತ್ತೊ... ಗಿಡಕ್ಕೆ ನೀರು ಹಾಕಲು ತೊಟ್ಟಿಗೆ ಕೈಹಾಕಿದ್ದು ಎನ್ನು... ಈ ಥರದ ಯಡ್ಡಿ ಹೇಳಿಕೆಯೇ ಬಾಲಿಶ. ಪೂಜೆಗೆಂ... ಗಿಡಕ್ಕೆ ನೀರು ಹಾಕಲೆಂದೋ ಭೂಗತ ತೊ... ಬಗ್ಗಬೇಕಾದ ಪರಿಸ್ಥಿತಿಯೇ ಮೈತ್ರಾದೇವಿಗಿರಲಿಲ್ಲ. ಏಕೆ... ತೊಟ್ಟಿಯ ನಾಲ್ಕೂ ದಿಕ್ಕಿನಲ್ಲಿ ನಾಲ್ಕು ಕೊಳಾಯಿಗಳಿ... ದಿನದ ಇಪ್ಪತ್ನಾಲ್ಕು ಗಂಟೆಯೂ ಅಲ್ಲಿ ನೀರು ಬರು... ಸಾಲದ್ದಕ್ಕೆ ಯಡ್ಡಿ ಮನೆಗೊಂದು ಓವರ್‌ಹೆಡ್ ಟ್ಯಾ... ಬೇರೆ ಇತ್ತು, ಮೈತ್ರಾದೇವಿ ಸತ್ತ ಬೆಳಗ್ಗೆಯೂ ಆ ಟ್ಯಾ... ತುಂಬ ನೀರು ತುಂಬಿತ್ತು!

ತೊಟ್ಟಿಗೆ ತುರುಕಿದ ರೀತಿ

ಆರಾಮವಾಗಿ ನಲ್ಲಿ ತಿರುಗಿಸಿದರೇನೇ ನೀ... ಬರುವಾಗ ಅದೆಲ್ಲವನ್ನೂ ಬಿಟ್ಟು ಮೈತ್ರಾದೇವಿ ತೊ... ಬಗ್ಗಿ ತ್ರಾಸಪಡುತ್ತಾರೆಂದರೆ ಯಾರಾದರೂ ನಂಬ...ದುಂಟಾ?

ಮೈತ್ರಾದೇವಿಯ ಸಾವು ಸಂಭವಿಸಿದಾಗ ಮನೆ... ಯಾರೂ ಇರಲಿಲ್ಲವೆಂದ ಮೇಲೆ ಸಾವು ... ಸಂಭವಿಸಿತೆಂದು ಯಡ್ಡಿಗೇನು ಕನಸು ಬಿದ್ದಿತ್ತೆ?

ಒಂದೂವರೆ ಅಡಿ ಅಗಲದ ತೊಟ್ಟಿಯೊ... ಇಳಿಯುವುದೇ ಕಷ್ಟವಾಗಿರುವಾಗ ಮೈತ್ರಾದೇವಿ... ಹೆಣವನ್ನು ಅದರೊಳಕ್ಕೆ ತುರುಕಬೇಕೆಂದರೂ ಅದು ನ... ಜನರ ಸಹಾಯವಿಲ್ಲದೇ ಆಗುವುದಿಲ್ಲ, ಅದರರ್ಥ... ಮೈತ್ರಾದೇವಿಯವರನ್ನು ಅಂದು ಮನೆಯಲ್ಲಿದ್ದ ಯಾ... ನಾಲ್ಕು ಜನ ಸೇರಿಕೊಂಡು ನೀರಿನ ತೊಟ್ಟಿಗೆ ತು... ಬೇಕೆಂದು ಇವತ್ತು ಶಿಕಾರಿಪುರಕ್ಕೆ ಶಿಕಾರಿಪು... ಮಾತಾಡಿಕೊಳ್ಳುತ್ತಿದೆ! ಜನ ಇಂಥದೊಂದು ನಿರ್ಧಾ... ಬರಬೇಕೆಂದರೂ ಅದಕ್ಕೆ ಕಾರಣವಿರುತ್ತದೆ. ಮೈತ್ರಾದೇ... ಆತ್ಮ ಮಾಸೂರು ರಸ್ತೆಯ ವೀರಶೈವರ ಸ್ಮಶಾನ... ದೆವ್ವವಾಗಿ ಸುತ್ತಾಡಿಕೊಂಡಿದೆ ಎಂದು ಜನ ಮ... ಬೀಳುತ್ತಾರೆಂದರೂ ಅದಕ್ಕೂ ವಾಸ್ತ... ಕೊಂಡಿಯೊಂದು ಬೆಸೆದುಕೊಂಡಿದೆ.

ಅದು ಯಡಿಯೂರಪ್ಪನವರ ... ಅರ್ಥಾತ್ ಮೈತ್ರಾದೇವಿಯ ತಂದೆ ಶಿ... ಪುರದ ಹಿರಿಕರಾದ ವೀರಭದ್ರಶಾಸ್ತ್ರಿ... ಕೌಟುಂಬಿಕ ದುರಂತ ಕತೆ.

ಬಹುಶಃ ಯಡ್ಡಿಯಂಥ ಕಪಟಿಯ... ಅಳಿಯನಾಗಿ ವೀರಭದ್ರಶಾಸ್ತ್ರಿಗಳ ಮನೆಯ... ಕಾಲಿಡದೇ ಹೋಗಿದ್ದರೆ ಆ ಮನೆತನವ... ಸಮೃದ್ಧಿಯಾಗೇ ಇರುತ್ತಿತ್ತು.

ಶಾಸ್ತ್ರಿ ಮನೆತನದ ದುರಂತ ಕ...

ಶಿಕಾರಿಪುರದ ಶಂಕರ್ ರೈಸ್‌ಮಿ... ಮಾಲೀಕ ವೀರಭದ್ರ ಶಾಸ್ತ್ರಿಗಳೆಂದರೆ ಊ... ಊರೇ ಕೊಂಡಾಡುತ್ತಿತ್ತು. ಶಿರಾಳಕೊ... ರಸ್ತೆಯಲ್ಲೊಂದು ಹೆಂಚಿನ ಕಾರ್ಖಾನೆ... ಅವರಿಗಿತ್ತು. ಆ ಕಾಲಕ್ಕೇ ಜಮೀನ್ದಾರರ... ವೀರಭದ್ರಶಾಸ್ತ್ರಿ ಮತ್ತು ಗಂಗಮ್ಮ ದಂಪ... ನಾಲ್ಕು ಮಕ್ಕಳ ಪೈಕಿ ಹಿರಿಯಳೇ ಮೈತ್ರಾದೇ... ಎರಡನೇಯವಳು ಭ್ರಮರಾಂಭ. ಆನ... ಹುಟ್ಟಿದ್ದು ಷಂಚಾಕ್ಷರಿ ಮತ್ತು ಷಡ... ಎಂಬಿಬ್ಬರು ಅವಳ ಮಕ್ಕಳು.


ಮೈತ್ರಾದೇವಿಗೆ ಮನೆಯೇ ಜೈಲು

ಶಿಕಾರಿಪುರದ ಬ್ರಹ್ಮಕುಮಾರಿಯವರ ಮಧ್ಯೆ ತನ್ನ ಬದುಕಿನ ಕೊನೆಗಾಲವನ್ನು ಸವೆಸಿದ ಮೈತ್ರಾದೇವಿಗೆ ಹುಚ್ಚು ಹಿಡಿದಿತ್ತೆಂಬುದೇ ಸುಳ್ಳಾಗಿತ್ತು. ಅದು ಮನೋಖಿನ್ನತೆ. ಜೀವನ ನಶ್ವರ ಜ್ಯೋತಿ ಸ್ವರೂಪಿ ಪರಮಾತ್ಮನೇ ಶಾಶ್ವತ ಎಂಬ ಬ್ರಹ್ಮಕುಮಾರಿ ತತ್ವವನ್ನು ಕಂಡ ಕಂಡವರೆದುರು ಕಂಠಪಾಠ ಒಪ್ಪಿಸುತ್ತಿದ್ದರು.

ಯಡ್ಡಿಯ ಮನೆ ಪಕ್ಕದಲ್ಲೇ ಇದ್ದ ಬ್ರಹ್ಮಕುಮಾರಿ ಧ್ಯಾನಕೇಂದ್ರದಲ್ಲೇ ಹೆಚ್ಚು ಹೊತ್ತು ಕಳೆಯುತ್ತಿದ್ದರು. ಅದರ ಮುಖ್ಯಸ್ಥೆ ಸ್ನೇಹಕ್ಕ ಮೈತ್ರಾದೇವಿಯ ಪಾಲಿಗೆ ಗುರು, ಸ್ನೇಹಿತೆ, ತಾಯಿ ಎಲ್ಲವೂ ಆಗಿಬಿಟ್ಟರು. ತನ್ನ ಗಂಡನ ವಿಕೃತಿಗಳು, ತನ್ನ ತಂಗಿ ಭ್ರಮರಾಂಭಳ ಸಾವು, ತನ್ನ ಕಣ್ಣೆದುರೇ ತನ್ನ ಸಹೋದರರು ಮತ್ತು ಅವರ ಪತ್ನಿಯರಿಗಾದ ಅನ್ಯಾಯ ಇತ್ಯಾದಿ ಯಡ್ಡಿಯ ದುರ್ಗುಣಗಳೆಲ್ಲವನ್ನೂ ಸ್ನೇಹಕ್ಕನ ಜೊತೆ ಹೇಳಿಕೊಂಡು ಮೈತ್ರಾದೇವಿ ಕಣ್ಣೀರಿಡುತ್ತಿದ್ದರು.

ಇದು ಬ್ರಹ್ಮಕುಮಾರಿಯರ ಬಾಯಿಂದ ಶಿಕಾರಿಪುರದ ಮರ್ಯಾದಸ್ಥರ ಕಿವಿ ಮುಟ್ಟುವುದು ಎಷ್ಟು ಹೊತ್ತು?

ತನ್ನ ದುರಾಚಾರಗಳೆಲ್ಲ ಪತ್ನಿಯ ಮೂಲಕವೇ ಬಯಲಾಗುತ್ತಿರುವುದು ಗೊತ್ತಾಗಿದ್ದೇ ಯಡ್ಡಿ ಒಮ್ಮೆ ಸೀದಾ ಬ್ರಹ್ಮಕುಮಾರಿ ಅಡ್ಡೆಗೆ ನುಗ್ಗಿದ್ದರು. ಸ್ನೇಹಕ್ಕಳ ಮೇಲೆ ಹಲ್ಲೆಗೂ ಯತ್ನಿಸಿದ್ದಾರೆ. ಕ್ರಮೇಣ ಮೈತ್ರಾದೇವಿಯವರನ್ನು ಮನೆಯಿಂದಹಾಚೆಗೆ ಹೋಗುವುದನ್ನೇ ನಿರ್ಬಂಧಿಸಿದ್ದಾರೆ. ತಾಯಿ ಕಾವಲಿಗೆಂದು ಮಗಳು ಅರುಣಳನ್ನು ಕಾವಲಿಟ್ಟಿದ್ದ ಯಡ್ಡಿಗೆ ಹಿರಿಮಗ ರಾಘವೇಂದ್ರನೂ ಸಾತು ಕೊಟ್ಟಿದ್ದಾನೆ. ಇಷ್ಟಾಗೂ ಮೈತ್ರಾದೇವಿಯ ಬ್ರಹ್ಮಕುಮಾರಿ ಮೋಹ ಕುಂದಲಿಲ್ಲ. ಅದೊಮ್ಮೆ ಮನೆಯಲ್ಲಿದ್ದ ಒಂದು ಲಕ್ಷ ರೂಪಾಯಿಯ



ಅರುಣಾ

ಕಂತೆಯನ್ನು ಕೆಲಸದಾಳು ಆದಿಯಮ್ಮನ ಮೂಲಕ ಬ್ರಹ್ಮಕುಮಾರಿಗೆ ಕಳಿಸಿದ್ದಾರ ಮೈತ್ರಾದೇವಿ. ಇದು ಯಡ್ಡಿಗ ಗೊತ್ತಾಗಿದ್ದೇ ಮರುದಿನದಿಂದಲೇ ಮೈತ್ರಾದೇವಿಯನ್ನು ಕೋಣೆಯೊಂದರಲ್ಲಿ ಕೂಡಿ ಹಾಕಿದ್ದಾರೆ.

ಇಷ್ಟಾಗಿಯೂ ಮೈತ್ರಾದೇವಿ ಧೃತಿಗೆಡಲಿಲ್ಲ. ತನಗೆ ಸಿಗುತ್ತಿದ್ದ ಒಂದು ರೂಪಾಯಿ, ಎರಡು ರೂಪಾಯಿಗಳ ನಾಣ್ಯಗಳನ್ನೆಲ್ಲ ಒಟ್ಟುಗೂಡಿಸಿ ಅದನ್ನು ಉಪ್ಪಿಟ್ಟಿನ ಮಧ್ಯೆ ಹುದುಗಿಸಿ ಬ್ರಹ್ಮಕುಮಾರಿಯರಿಗೆ ಕಳಿಸುವುದು ಮೈತ್ರಾದೇವಿಯ ಉದ್ದೇಶವಾಗಿತ್ತು. ಹಾಗೇ ಟಿಫಿನ್ ಕ್ಯಾರಿಯರ್ ಕೊಂಡೊಯ್ಯುತ್ತಿದ್ದವಳು ಆದಿಯಮ್ಮ. ಮೊದಲೇ ಇದರ ವಾಸನೆ ಗೊತ್ತಿದ್ದ ಮಗ ರಾಘು ಅದೊಮ್ಮೆ ಆದಿಯಮ್ಮನನ್ನು ರೆಡ್‌ಹ್ಯಾಂಡ್ ಹಿಡಿದು ಹೊಡೆದುಬಿಟ್ಟ. ಈ ಕಾರಣಕ್ಕೆ ಆದಿಯಮ್ಮನನ್ನು ಕೆಲಸಕ್ಕೆ ಬೇಡ ಅಂದ.

ಅಲ್ಲಿಂದಾಚೆಗೆ ಮೈತ್ರಾದೇವಿಯ ಪಾಲಿಗೆ ಮನೆಯೇ ಜೈಲಾಗಿ ಹೋಯಿತು. 2003ರ ಡಿಸೆಂಬರ್ ಸುಮಾರಿಗೆ ಮೈತ್ರಾ ದೇವಿಯವರನ್ನು ಶಿಕಾರಿಪುರದ ಮನೆಯಿಂದ ಶಿವಮೊಗ್ಗದ ಅರುಣಳ ಮನೆಗೆ ಸ್ಥಳಾಂತರಿಸಲಾಯ್ತು. ಮೈತ್ರಾದೇವಿಗೆ ನಿಜಕ್ಕೂ ಹುಚ್ಚು ಹಿಡಿದಿತ್ತಾ ಅಥವಾ ಹುಚ್ಚಿಯನ್ನಾಗಿ ಮಾಡಲಾಗಿತ್ತಾ? ಭಾವಿ ಮುಖ್ಯಮಂತ್ರಿ ಪದವಿ ಆಕಾಂಕ್ಷಿ ಯಡ್ಡಿಯ ಕ್ರೌರ್ಯಕ್ಕೆ ಇದಕ್ಕಿಂತ ಉದಾಹರಣೆಬೇಕೆ?

ಪ್ರಾರಂಭದಲ್ಲಿ ಮಂಡ್ಯ ಜಿಲ್ಲೆ ಕೆ.ಆರ್. ಪೇಟೆ ತಾಲ್ಲೂಕಿನ ಬೂಕನಕೆರೆಯಲ್ಲಿ ಸೈಕಲ್ಲೊಂದರ ಮೇಲೆ ನಿಂಬೆಹಣ್ಣು ತುಂಬಿಸಿಕೊಂಡು ಬೀದಿಬೀದಿ ಸುತ್ತಿ ಮಾರುತ್ತಿದ್ದ ಯಡಿಯೂರಪ್ಪ ಶಿಕಾರಿಪುರಕ್ಕೆ ಕಾಲಿಟ್ಟದ್ದೇ ಈ ವೀರಭದ್ರಶಾಸ್ತ್ರಿಗಳ ರೈಸ್‌ಮಿಲ್ ಕೆಲಸಗಾರನಾಗಿ. ತುಮಕೂರಿನ ಸಿದ್ಧಗಂಗಾ ಮಂಡಿಯ ಧಣಿ ಗಂಗಪ್ಪನವರೊಂದಿಗೆ ವೀರಭದ್ರಶಾಸ್ತ್ರಿಗಳಿಗೆ ಅಕ್ಕಿ ವ್ಯಾಪಾರವಿತ್ತು. 'ಯಾರಾದರೂ ಒಳ್ಳೇ ಮನೆ ಅಳಿಯನನ್ನು ನೋಡು' ಎಂದು ವೀರಭದ್ರಶಾಸ್ತ್ರಿಗಳು ಗಂಗಪ್ಪನಿಗೆ ಹೇಳಿದ್ದರಂತೆ. ಅದಕ್ಕೆ ಗಂಗಪ್ಪ ತನ್ನದೇ ಮಂಡಿಯಲ್ಲಿ ಚಾಕರಿ ಮಾಡಿಕೊಂಡಿದ್ದ ಯಡ್ಡಿಯನ್ನು ಕಳಿಸಿಕೊಟ್ಟರು. ಮೊದಮೊದಲು ಶ್ರದ್ಧೆಯಿಂದ ದುಡಿದು ನಂಬಿಕೆ ಹುಟ್ಟಿಸಿದ ಯಡ್ಡಿಗೆ ಮೊದಲ ಪುತ್ರಿ ಮೈತ್ರಾ ದೇವಿಯನ್ನು ಕೊಟ್ಟು ಮದುವೆ ಮಾಡಿದ್ದೇ ಯಡ್ಡಿಯ ಹುಟ್ಟುಗುಣವೂ ಬಯಲಾಗತೊಡಗಿತು. ಬ್ಯಾಂಕ್ ಅಧಿಕಾರಿಗಳಿಗೆ ಸುಳ್ಳು ಲೆಕ್ಕ ತೋರಿಸಿ ಹೆಣ್ಣು ಕೊಟ್ಟ ಮಾವನ ಮನೆಗೇ ಯಡ್ಡಿ ಕನ್ನವಿಟ್ಟಿದ್ದರು. ಇದು ಗೊತ್ತಾಗಿದ್ದೇ ವೀರಭದ್ರಶಾಸ್ತ್ರಿಗಳು ಯಡ್ಡಿಯನ್ನು ಮನೆಯಿಂದ ಹೊರಗಟ್ಟಿ 'ಈತನೊಂದಿಗೆ ಯಾರೂ ಹಣಕಾಸಿನ ವ್ಯವಹಾರ ನಡೆಸಕೂಡದೆಂದು' ಪ್ರಜಾವಾಣಿ ಪತ್ರಿಕೆಯಲ್ಲಿ ಜಾಹೀರಾತು ಕೊಟ್ಟರು.

ಮನೆಯಿಂದ ಹೊರಹಾಕುವಾಗ ಮಗಳು ಮೈತ್ರಾ ದೇವಿಗೆಂದು ನಾಲ್ಕೆಕರೆ ಜಮೀನನ್ನು ಬರೆದುಕೊಟ್ಟರು!

ಬಾವಿಯಲ್ಲಿ ತಂಗಿಯ ಹೆಣ

ಹೀಗೆ ಬೀದಿಗೆ ಬಿದ್ದ ಯಡ್ಡಿ ಕುಟುಂಬದ ಕೈಹಿಡಿದು ಬಾಡಿಗೆಗೊಂದು ಮನೆ ಮಾಡಿಕೊಟ್ಟದ್ದು ಶಿಕಾರಿಪುರದ ಆರೆಸ್ಸೆಸ್ ಕಾರ್ಯಕರ್ತರು. ಕೇವಲ ಹಣಕಾಸಿನ ವಂಚನೆಯಷ್ಟೇ ಆಗಿದ್ದರೆ ಮಾವ ವೀರಭದ್ರಶಾಸ್ತ್ರಿಗಳು ಆಪಾಟ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ, ಆದರೆ ಕೆಲವೇ ದಿನಗಳಲ್ಲಿ ಮೈತ್ರಾದೇವಿಯವರ ತಂಗಿ ಭ್ರಮರಾಂಭ ಗರ್ಭಿಣಿ ಎಂಬುದು ಬಯಲಾಗುತ್ತಿದ್ದಂತೆ ಆಕೆಯ ಹೆಣ ವೀರಭದ್ರಶಾಸ್ತ್ರಿಗಳ ಮನೆಯ ಬಾವಿಯಲ್ಲಿ ತೇಲಾಡುತ್ತಿತ್ತು!

ಗರ್ಭಿಣಿ ಭ್ರಮರಾಂಭಳ ಶವ ಬಾವಿಯಲ್ಲಿ ಪತ್ತೆಯಾಗಿದ್ದೇ ಆವತ್ತು ಇಡೀ ಶಿಕಾರಿಪುರ ಶಾಸ್ತ್ರಿಗಳ ಅಳಿಯನನ್ನೇ ಅನುಮಾನದಿಂದ ನೋಡಿತ್ತು!

ಇದು ವೀರಭದ್ರಶಾಸ್ತ್ರಿಗಳ ಕುಟುಂಬದಲ್ಲಿ ಸಂಭವಿಸಿದ ಮೊದಲ ದುರಂತವಾಗಿತ್ತು. ಮಗಳ ದುರಂತಕ್ಕೆ ನೊಂದು ಹಾಸಿಗೆ ಹಿಡಿದ ವೀರಭದ್ರಶಾಸ್ತ್ರಿಗಳು ಅದೇ ಕೊರಗಿಗೆ ಬಿದ್ದು ಕೊನೆಯುಸಿರೆಳೆದರು. ಬಹುಶಃ ಆವತ್ತು ಭ್ರಮಾರಾಂಭರ ಹೆಣವನ್ನೇನಾದರೂ ಪೋಸ್ಟ್ ಮಾರ್ಟಂ ಮಾಡಿದ್ದರೆ ಏನಾಗುತ್ತಿತ್ತೊ!

ಅದು ವೀರಭದ್ರಶಾಸ್ತ್ರಿಗಳ ಕೌಟುಂಬಿಕ ದುರಂತದ ಪ್ರಾರಂಭವಾಗಿತ್ತಷ್ಟೇ. ಮೊದಲು ಅಕ್ಕನ ಸಾವು ಆನಂತರ ತಂದೆಯ ದುರ್ಮರಣದಿಂದ ಆಘಾತಕ್ಕೀಡಾದ ಪಂಚಾಕ್ಷರಿ-ಷಡಾಕ್ಷರಿ ಕ್ರಮೇಣ ಮನೋರೋಗಕ್ಕೀಡಾದರು. ಇದು ಗೊತ್ತಿದ್ದೂ ಯಡಿಯೂರಪ್ಪ ತಾನೇ ಮುಂದೆ ನಿಂತು ಅವರಿಬ್ಬರಿಗೂ ಚೆನ್ನಗಿರಿ ಸಮೀಪದ ಮಾದಪ್ಪನ ಮಕ್ಕಳಾದ ವಿಜಯ ಮತ್ತು ಮಂಜುಳರನ್ನು ತಂದು ಮದುವೆ ಮಾಡಿಸಿಬಿಟ್ಟರು!

ಹೊಟ್ಟೆಗೆ ಅನ್ನ ತಿನ್ನುವ ಯಾರಾದರೂ ಮಾಡುವ ಕೆಲಸವಾ ಇದು?

ಇಷ್ಟಾದ ಮೇಲೆ ಇಡೀ ವೀರಭದ್ರಶಾಸ್ತ್ರಿಗಳ ಕುಟುಂಬವನ್ನೇ ಯಡ್ಡಿ ಆಕ್ರಮಿಸಿಕೊಂಡರು. ಮೈತ್ರಾದೇವಿಯ ಬುದ್ಧಿಭ್ರಮಿತ ತಮ್ಮಂದಿರಿಬ್ಬರನ್ನೂ ಹುಚ್ಚರೆಂದು ಪಟ್ಟಕಟ್ಟಿ ಧಾರವಾಡದ ಹುಚ್ಚಾಸ್ಪತ್ರೆಯೊಂದಕ್ಕೆ ಸೇರಿಸಿದರು.

ಮೊದಲು ತಂಗಿಗಾದ ದುರ್ಗತಿ, ಆನಂತರ ತಂದೆಯ ಸಾವು, ಈಗ ತಮ್ಮಂದಿರ ದುರಂತವನ್ನೆಲ್ಲ ಕಣ್ಣಾರೆ ಕಂಡು ಅನುಭವಿಸುತ್ತಿದ್ದ ಮೈತ್ರಾದೇವಿಯ ಮನಸ್ಥಿತಿ ಏನಾಗಿರಬೇಡ?

ಮೈತ್ರಾದೇವಿಯ ದುರಂತ ಶುರುವಾಗಿದ್ದೇ ಇಲ್ಲಿಂದ. ಈ ಹೊತ್ತಿಗೆ ಯಡ್ಡಿ ಬಿಜೆಪಿ ನಾಯಕರಾಗಿದ್ದರು. ಮುಂದೆ 2004 ರ ಚುನಾವಣೆಯಲ್ಲಿ ಗೆದ್ದು-ವಿರೋಧ ಪಕ್ಷದ ನಾಯಕರಾಗುವ ಹೊತ್ತಿಗಾಗಲೇ ಶೋಭಾ ಕರಂದ್ಲಾಜೆ ಯಡ್ಡಿಯ ಕೃಪೆಯಿಂದ ಬಿಜೆಪಿಯಲ್ಲಿ ಪ್ರವರ್ಧಮಾನಕ್ಕೆ ಬಂದಿದ್ದರು. ಯಡ್ಡಿಯದು ಶುರುವಿನಿಂದಲೂ ದೂರ್ವಾಸ ಬುದ್ಧಿ, ಸಣ್ಣಪುಟ್ಟ ಸಿಟ್ಟಿಗೂ ಹೆಂಡತಿಯನ್ನು ಹಿಡಿದು ಬಡಿಯುತ್ತಿದ್ದರು. ಮೂವರು ಹೆಣ್ಣು ಇಬ್ಬರು ಗಂಡು ಮಕ್ಕಳ ಪೈಕಿ ಅಪ್ಪನನ್ನು ಕಂಡರೆ ಪ್ರತಿಯೊಬ್ಬರೂ ಗಡಗಡ ನಡುಗುತ್ತಿದ್ದರು.

ವಿಚಿತ್ರವೆಂದರೆ ಮನೆ-ಮಕ್ಕಳ ಪಾಲಿಗೆ ದೂರ್ವಾಸನ ಅವತಾರದಂತಿದ್ದ ಯಡ್ಡಿ ಶೋಭಾ ಕರಂದ್ಲಾಜೆಯನ್ನು ಕಂಡದ್ದೇ ತಾಳ್ಮೆಯಮೂರ್ತಿಯಂತೆ ವರ್ತಿಸುತ್ತಿದ್ದರು. ಅದಕ್ಕೂ ಮುನ್ನ ಬಿಜೆಪಿಯ ಮಹಿಳಾ ಮೋರ್ಚಾದ ನಾಯಕಿಯೊಬ್ಬಳ ಜೊತೆ ದೆಹಲಿ ಯಾತ್ರೆ ಮುಗಿಸಿಕೊಂಡು ಬಂದ ಬಗ್ಗೆ ಯಡ್ಡಿ ಮನೆಯಲ್ಲಿ ರಾದ್ಧಾಂತವಾಗಿತ್ತು. ಆವತ್ತು ಮೈತ್ರಾದೇವಿ ಶಿಕಾರಿಪುರದ ಮನೆಯ ಬಾವಿ ತೊಟ್ಟಿಗೆ ಬಿದ್ದು ಆತ್ಮಹತ್ಯೆಗೆ ಯತ್ನಿಸಿದ್ದರು!

(14ನೇ ಪುಟಕ್ಕೆ)



ಬಳ್ಳಾರಿ ಗಣಿರೆಡ್ಡಿಗಳಿಗೆ

ಕೇಡುಗಾಲ ಆರಂಭ

ಬಳ್ಳಾರಿಯ ರಾಜಕೀಯ ಮಗ್ಗಲು ಬದಲಾಯಿಸಿದೆ. ಗಣಿರೆಡ್ಡಿಗಳ ಕೇಡುಗಾಲವೂ ಆರಂಭವಾಗಿದೆ. ಗಣಿ ಧೂಳಿನ ಅಮಲಿನಲ್ಲಿ ತೇಲುತ್ತಿರುವ, ಆಧುನಿಕ ಪಾಳೆಗಾರರಾಗಲು ಹೊರಟಿರುವ ಗಣಿ ರೆಡ್ಡಿ ಸಹೋದರರು ಕರ್ನಾಟಕದ ರಾಜಕೀಯವನ್ನು ಆಂಧ್ರದ ರಾಯಲಸೀಮೆಯಲ್ಲಿ ಪ್ರತಿಷ್ಠಾಪಿತಗೊಂಡಿದ್ದ ಫ್ಯಾಸಿಸ್ಟ್ ರಾಜಕೀಯದ ತದ್ರೂಪ ಮಾದರಿಯ ರಾಜಕಾರಣವನ್ನು ಬಳ್ಳಾರಿಯಲ್ಲಿ ನೆಲೆಗೊಳಿಸಲು ಹೊರಟಿದ್ದಾರೆ.

ಎಲ್ಲಾ ರೀತಿಯ ಓರೆಕೋರೆಗಳು, ನೇತ್ಯಾತ್ಮಕ ಆಯಾಮಗಳಿದ್ದಾಗಲೂ ಕರ್ನಾಟಕದ ಚುನಾವಣಾ ರಾಜಕಾರಣವೆಂಬುದು ಈ ಪರಿಯ ಹಿಂಸಾತ್ಮಕ ರೂಪ ಪಡೆದಿರಲಿಲ್ಲ. ಕರ್ನಾಟಕದ ರಾಜಕೀಯ ಸಂದರ್ಭದಲ್ಲಿ ರಾಜಕೀಯ ಅಪರಾಧೀಕರಣದಂತಹ ವಿದ್ಯಮಾನಗಳನ್ನು ದಾಖಲಿಸುವಾಗಲೆಲ್ಲಾ 'ಬಿಹಾರ ಶೈಲಿಯ ರಾಜಕೀಯ', 'ಆಂಧ್ರ ಶೈಲಿಯ ರಾಜಕೀಯ'ಎಂಬಂತಹ ಗುಣವಿಶೇಷಣ ಬಳಸಲಾಗುತ್ತಿತ್ತು. ಆದರೆ ಇನ್ನು ಮುಂದೆ ಅಂತಹ ಎರವಲು ಪರಿಭಾಷೆಯ ಹಂಗಿಲ್ಲದೇ ಈ ನೆಲದಲ್ಲಿಯೇ ಅಂತಹ ರಾಜಕೀಯ ಪರಿಭಾಷೆ ರೂಪು ತಳೆಯಲು ಬೇಕಾದ ಎಲ್ಲಾ ಭೂಮಿಕೆಯನ್ನು ಬಳ್ಳಾರಿ ಗಣಿ ಧಣಿಗಳ ರಾಜಕೀಯ ಸೃಷ್ಟಿಸುತ್ತಿದೆ.

ಮೊನ್ನೆ ಶುಕ್ರವಾರ ಬಳ್ಳಾರಿ ನಗರದಲ್ಲಿ ನಡೆದಿರುವ ವಿದ್ಯಮಾನಗಳು ಕರ್ನಾಟಕದ ರಾಜಕೀಯದ ವಾತಾವರಣದ ಮಟ್ಟಿಗೆ ಹೊಚ್ಚಹೊಸದಾಗಿವೆ ಮತ್ತು ಅತ್ಯಂತ ಅಪಾಯಕಾರಿ ಮಾದರಿಗಳಾಗಿವೆ. ಹಾಗೆ ನೋಡಿದರೆ ಇಡೀ ಘಟನೆಯ ಬಗ್ಗೆ ಅದರ ವಿವರಗಳು ಹೆಚ್ಚೇನನ್ನೂ ಹೇಳಲಾರವು. ಸರಳವಾಗಿ ಅದೊಂದು ರಾಜಕೀಯ ವಿದ್ವೇಷದ ಹಿಂಸಾತ್ಮಕ ಪ್ರಕಟಿತ ರೂಪ ಎಂದಷ್ಟೇ ಹೇಳಬಹುದು.



ಬಳ್ಳಾರಿಯಲ್ಲಿ ಈ ಹಿಂದೆಯೂ ಇಂತಹ ರಾಜಕೀಯ ವಿದ್ವೇಷದ ಘಟನೆಗಳು ನಡೆದಿದ್ದರೂ ಮೊನ್ನೆ ಶುಕ್ರವಾರದಂದು ನಡೆದ ಘಟನೆ ವಿದ್ವೇಷ ರಾಜಕಾರಣದಲ್ಲೊಂದು ಮೈಲಿಗಲ್ಲಾಗಿ ದಾಖಲಾಗಲಿದೆ.

ಮಾಜಿ ಶಾಸಕ ಅನಿಲ್‌ಲಾಡ್ ಕಾಂಗ್ರೆಸ್ ಸೇರುತ್ತಾರೆಂಬ ವದಂತಿಗಳಿಗೆ ರೆಕ್ಕೆಪುಕ್ಕ ಬಂದಾಗಲೇ ಗಣಿ ರೆಡ್ಡಿ ಸಹೋದರರು ಡಿಸ್ಟರ್ಬ್ ಆಗಿದ್ದರು. ಅನಿಲ್ ಲಾಡ್ ಮಾಜಿ ಸಚಿವ ಅಲ್ಲಂ ವೀರಭದ್ರಪ್ಪನವರ ಮನೆಯಲ್ಲಿ ಕಾಂಗ್ರೆಸ್ ಸೇರ್ಪಡೆಯಾದ ಸುದ್ದಿ ಪ್ರಕಟಿಸಿದ ನಂತರ ಬೆಂಗಳೂರಿನಲ್ಲಿ ಕೆಪಿಸಿಸಿಯ ಮುಖಂಡರನ್ನು ಭೇಟಿ ಮಾಡಿ ಅಧಿಕೃತವಾಗಿ ಕಾಂಗ್ರೆಸ್‌ನ ಸದಸ್ಯತ್ವ ಪಡೆದುಕೊಂಡದ್ದಲ್ಲದೇ ಬಳ್ಳಾರಿ ಕ್ಷೇತ್ರದ ಟಿಕೆಟ್‌ನ್ನು ಕಾಯಂ ಮಾಡಿಕೊಂಡೇ ಬಳ್ಳಾರಿಯತ್ತ ವಾಪಸಾಗಿದ್ದಾರೆ. ಬಳ್ಳಾರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿರುವ ರೆಡ್ಡಿ ಸಹೋದರರ ಹಿರಿಯಣ್ಣ ಜಿ. ಸೋಮಶೇಖರ ರೆಡ್ಡಿಯ ಗೆಲುವು ನಿಶ್ಚಿತವೆಂದೇ ಭಾವಿಸಿದ್ದ ಗಣಿ ರೆಡ್ಡಿ ಸಹೋದರರಿಗೆ ಅನಿಲ್‌ಲಾಡ್ ಆಗಮನವೆಂಬುದು ನುಂಗಲಾರದ ತುತ್ತಾಗಿದೆ. ಕಾಂಗ್ರೆಸ್ ಸೇರಿದ ಅನಿಲ್‌ಲಾಡ್ 'ಗಣಿ ರೆಡ್ಡಿಗಳ 150 ಕೋಟಿ ರೂ. ಲಂಚದ ಹಗರಣದ ಆರೋಪ ಶುದ್ಧ ಸುಳ್ಳು' ಎಂಬ ಹೇಳಿಕೆ ನೀಡಿದಾಗಲೇ ಗಣಿ ರೆಡ್ಡಿಗಳ ಅಂಡು ಉರಿಯಲಾರಂಭಿಸಿದೆ. ಇತ್ತ ಕಾಂಗ್ರೆಸ್‌ನಲ್ಲೂ ಅಲ್ಲಂ ವೀರಭದ್ರಪ್ಪ, ಕೊಂಡಯ್ಯ, ಡಿಸಿಸಿ ಅಧ್ಯಕ್ಷ ವಹಾಬ್ ಹೀಗೆ ಬೇರೆ ಬೇರೆ ನಾಯಕರ ಹೆಸರಲ್ಲಿ ಹಂಚಿ ಹೋಗಿದ್ದ ಕಾಂಗ್ರೆಸ್ಸಿಗರೂ ಒಂದೇ ವೇದಿಕೆಗೆ ಬಂದು ಚುನಾವಣೆಯಲ್ಲಿ ಸಕ್ರಿಯಗೊಳ್ಳುವ ಉತ್ಸಾಹ ತೋರಿಸಿದ್ದಾರೆ.

ತಮ್ಮನ್ನು ತಾವು ಅಜಾತಶತ್ರುಗಳು, 'ಬಳ್ಳಾರಿಯೆಂದರೆ ಗಣಿರೆಡ್ಡಿಗಳು-ಗಣಿರೆಡ್ಡಿಗಳೆಂದರೆ ಬಳ್ಳಾರಿ' ಎಂದೇ ಭಾವಿಸಿಕೊಂಡಿದ್ದ ರೆಡ್ಡಿ ಸಹೋದರರಿಗೆ ಯಾಕೋ ತಮ್ಮ ಲೆಕ್ಕಾಚಾರ ತಲೆಕೆಳಗಾಗುತ್ತವೆ ಅಂತ ಅನ್ನಿಸಿದೆ. ಮತ್ತೊಂದು ಕಡೆ ಬಿಜೆಪಿಯ ಹೈಕಮಾಂಡ್ ನಾಯಕರುಗಳಿಂದಲೂ ರೆಡ್ಡಿ ಸಹೋದರರ ಉತ್ಸಾಹಕ್ಕೆ ತಣ್ಣೀರೆರಚಿದಂತ ವಿದ್ಯಮಾನಗಳು ನಡೆದಿವೆ.

ಇಂತಿಪ್ಪ ಪರಿಸ್ಥಿತಿಯಲ್ಲಿ ಮೊನ್ನೆ ಶುಕ್ರವಾರ ಬಳ್ಳಾರಿ ನಗರದಲ್ಲಿ ಅನಿಲ್ ಲಾಡ್ ಪ್ರಚಾರ ಶುರುವಿಟ್ಟುಕೊಂಡಿದ್ದಾರೆ. ಬೆಳಿಗ್ಗೆ 7 ಗಂಟೆಯಿಂದಲೇ ಮರಿಸ್ವಾಮಿ ಮಠ, ದೊಡ್ಡಮಾರುಕಟ್ಟೆ, ರೂಪನಗುಡಿ ರಸ್ತೆ ಸೇರಿದಂತೆ ವಿವಿಧ ಕಡೆಗಳಲ್ಲಿ ಮತದಾರರ ಮನೆಮನೆಗೆ ಭೇಟಿ ನೀಡಿ ಮತಯಾಚನೆ ಮಾಡಿದ್ದಾರೆ. ದಲಿತ ಮುಖಂಡರಾದ ವಿ. ಅರುಣ್‌ಕುಮಾರ್, ಎ. ಮಾನಯ್ಯ, ಕುರುಬ ಸಮಾಜದ ಬೆಣಕಲ್ ಬಸವರಾಜ್ ಗೌಡ, ಆಯಾಜ್, ನಾಯಕ ಸಮಾಜದ ಮುಖಂಡ ಹಾಗೂ ಮೊಳಕಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂದೇ ಬಿಂಬಿತವಾಗಿರುವ ಪಿ. ರಾಂಪ್ರಸಾದ್ ಸೇರಿದಂತೆ ಹತ್ತು ಹಲವು ಮುಖಂಡರು ಅನಿಲ್ ಲಾಡ್ ಜೊತೆ ಮತಯಾಚನೆಯಲ್ಲಿ ಪಾಲ್ಗೊಂಡಿದ್ದಾರೆ.



ಗಣಿ ರೆಡ್ಡಿ ಸಹೋದರರ ಧನಮದ ಹಾಗೂ ನಾಯಕ ಜನಾಂಗದ ಅಮಾಯಕ ಯುವಕರನ್ನು ದಾಳವಾಗಿ ಬಳಸಿಕೊಂಡು ಕುರುಬ, ಲಿಂಗಾಯತ ಮತ್ತಿತರ ಜಾತಿ-ಜನಾಂಗದವರನ್ನೂ ಸಾಮಾಜಿಕವಾಗಿ, ರಾಜಕೀಯವಾಗಿ ಹತ್ತಿಕ್ಕುವ ಕುತ್ಸಿತ ಪ್ರಯತ್ನಗಳಿಂದ ಬೇಸತ್ತ ಜನ ಪರ್ಯಾಯ ರಾಜಕೀಯ ನಾಯಕನೊಬ್ಬನ ಹುಡುಕಾಟದಲ್ಲಿದ್ದರು. ಕಾಂಗ್ರೆಸ್‌ಗೆ ಅನಿಲ್‌ಲಾಡ್ ಆಗಮನ ಅಂತಹ ನಾಯಕನ ಕೊರತೆ ತುಂಬುವ ಭರವಸೆಯನ್ನು ಜನರಲ್ಲಿ ಮೂಡಿಸಿದೆ. ಹಾಗಾಗಿ ಮತದಾರರು ಅನಿಲ್‌ಲಾಡ್ ಹೋದಕಡೆಯಲ್ಲೆಲ್ಲಾ ಅಭೂತಪೂರ್ವವಾಗಿ ಸ್ಪಂದಿಸಿದ್ದಾರೆ.

ಬರೀ ರೋಡ್ ಶೋ ನಡೆಸುವ ರೆಡ್ಡಿ ಸಹೋದರರ ಗಿಮಿಕ್‌ಗಳಿಗಿಂತ ಭಿನ್ನವಾಗಿ ಮತದಾರನ ಮನೆಯ ಕದ ತಟ್ಟಿ ಮಾತನಾಡಿಸಿದ ಅನಿಲ್‌ಲಾಡ್ ಶೈಲಿ ಬಳ್ಳಾರಿಗರಿಗೆ ಪ್ರಿಯವಾಗಿದೆ. ಒಂದು ಕಡೆ ಅನಿಲ್‌ಲಾಡ್ ಮತಯಾಚನೆ ಮಾಡುತ್ತಿದ್ದರೆ ಮತ್ತೊಂದು ಕಡೆ ಬಳ್ಳಾರಿ ನಗರದಲ್ಲೆಲ್ಲಾ ಅನಿಲ್‌ಲಾಡ್ ಪ್ರಚಾರಕ್ಕೆ ಜನ ಸ್ಪಂದಿಸುತ್ತಿರುವುದರ ಕುರಿತೇ ಮಾತುಕತೆಗಳು ಕೇಳಿಬರಲಾರಂಭಿಸಿವೆ. ಇದೆಲ್ಲಾ ಗಣಿರೆಡ್ಡಿ ಸಹೋದರರ ಕಿವಿಗೆ ಬೀಳುತ್ತಿದ್ದಂತೆ ಅನಿಲ್‌ಲಾಡ್‌ಗೆ ಸ್ಪೀಡ್‌ಬ್ರೇಕರ್ ಹಾಕಲು ನಿರ್ಧಾರ ಮಾಡಿದ್ದಾರೆ.

ಆಗ ಮಾಜಿ ಸಚಿವ ಬಿ. ಶ್ರೀರಾಮುಲು ಪ್ರವೇಶವಾಗಿದೆ. ಚುನಾವಣಾ ಪ್ರಚಾರ ಮುಗಿಸಿ ಮಧ್ಯಾಹ್ನ ಗಣೇಶನಗರದ ಕುಮಾರಸ್ವಾಮಿ ಗುಡಿಯ ಮುಂದಿರುವ ತಮ್ಮ ನಿವಾಸದಲ್ಲಿ ಅನಿಲ್‌ಲಾಡ್ ವಿಶ್ರಾಂತಿ ಪಡೆಯುತ್ತಿದ್ದಾಗ ಶ್ರೀರಾಮುಲು ತಮ್ಮ ಪಟಾಲಂನೊಂದಿಗೆ ಅನಿಲ್‌ಲಾಡ್ ಮನೆಗೆ ನುಗ್ಗಿದ್ದಾರೆ. ವಿಶ್ರಾಂತಿ ಕೊಠಡಿಯಲ್ಲಿ ಮಲಗಿದ್ದ ಅನಿಲ್‌ಲಾಡ್‌ರನ್ನು ಕೆಳಗೆ ಕರೆಸಿಕೊಂಡು 'ನೀನು ಬಳ್ಳಾರಿಗೆ ಯಾಕೆ ಬಂದೆ? ಬಳ್ಳಾರೀಲಿ ಚುನಾವಣಾ ಪ್ರಚಾರ ಮಾಡಬಾರದು. ಅಭ್ಯರ್ಥಿಯಾಗಿ ನಿಲ್ಲಬಾರದು. ಒಂದು ವಾರದಲ್ಲಿ ಸಂಡೂರಿಗೆ ವಾಪಸು ಹೋಗಬೇಕು. ಇಲ್ಲಾದ್ರೆ....' ಅಂತಾ ಅವಾಜ್ ಹಾಕಿದ್ದಾರೆ. ಸುಮಾರು 10-12 ಜೀಪುಗಳ ಕಾಲ ತೆಲುಗು ಭಾಷೆಯಲ್ಲಿ [illegible]ರವಾಗಿ ಬೈದಿದ್ದಾರೆ. ಇದಾದನಂತರ ಹೊರಗಡೆ ಬಂದ ಶ್ರೀರಾಮುಲು ಅತ್ತ [illegible] ಇತ್ತ ಶ್ರೀರಾಮುಲು ಬೆಂಬಲಿಗರು ಅನಿಲ್‌ಲಾಡ್ ಮನೆಯ ಮುಂದೆ ನಿಂತಿದ್ದ ಒಂದು ಸ್ಕಾರ್ಪಿಯೋ, ಒಂದು ಇನೋವಾ, ಒಂದು BMW CRB ಕಾರಿಗೆ [illegible] ಸುರಿದು ಬೆಂಕಿ ಹಚ್ಚಿದ್ದಾರೆ. ಆ ಬೆಂಕಿಯ [illegible] ಎಷ್ಟಿತ್ತೆಂದರೆ ಲಾಡ್‌ರ ಮನೆಯಿಂದ ಕೇವಲ ಹತ್ತು ಮೀಟರ್ ದೂರದಲ್ಲಿದ್ದ ಅಗ್ನಿಶಾಮಕದಳದ ಕಚೇರಿಯಿಂದ ಸಿಬ್ಬಂದಿ ಬರುವ ಹೊತ್ತಿಗೆ ವಾಹನಗಳೆಲ್ಲಾ ಸುಟ್ಟು ಕರಕಲಾಗಿವೆ. ಬೆಂಕಿ ಹಚ್ಚಿದ್ದು ಸಾಲದೆಂಬಂತೆ ಲಾಡ್‌ರ ಮನೆ ಮುಂಭಾಗದಲ್ಲಿ ಕನ್‌ಸ್ಟ್ರಕ್ಷನ್ ವರ್ಕ್ ನಡೆಯುತ್ತಿದ್ದ ಮನೆಯೊಂದರ ಮುಂದೆ ಗುಡ್ಡೆ ಹಾಕಲಾಗಿದ್ದ ಕಲ್ಲುಗಳನ್ನು ತೆಗೆದುಕೊಂಡು ತೂರಿದ್ದಾರೆ.

ಕ್ಷಣಾರ್ಧದಲ್ಲಿ ಈ ಸುದ್ದಿ ನಗರದಾದ್ಯಂತ ಹಬ್ಬಿದೆ. ಸ್ಥಳಕ್ಕೆ ಭೇಟಿ ನೀಡಿದ ಮಾಧ್ಯಮದ ಪ್ರತಿನಿಧಿಗಳಿಗೆ ಅನಿಲ್‌ಲಾಡ್ ನಡೆದುದೆಲ್ಲವನ್ನೂ ವಿವರಿಸಿದ್ದಾರೆ. ಘಟನೆಗೆ ಶ್ರೀರಾಮುಲು ನೇರ ಕಾರಣ ಎಂದು ಆರೋಪಿಸಿದ್ದಾರೆ. ಶ್ರೀರಾಮುಲು ಈ ಆರೋಪವನ್ನು ನಿರಾಕರಿಸಿ 'ಇದು ಪ್ರಜಾಪ್ರಭುತ್ವ..... ಯಾರು ಎಲ್ಲಿ ಬೇಕಾದರೂ ಸ್ಪರ್ಧಿಸಬಹುದು. ಲೊಂಗು-ಲೊಟ್ಟೆ' ಎಂದೆಲ್ಲಾ ತಮ್ಮ ಸ್ವಭಾವಕ್ಕೆ ಒಗ್ಗದ ಭಾಷೆಯಲ್ಲಿ ಮಾತನಾಡಿದ್ದಾರೆ. ರೆಡ್ಡಿ ಸಹೋದರರು ಈ ಘಟನೆಗೆ 'ಕಾಂಗ್ರೆಸ್ಸಿಗರೇ ಕಾರಣ. ಅವರೇ ಬೆಂಕಿ ಹಚ್ಚಿಕೊಂಡು ರಾಜಕೀಯ ಲಾಭ ಪಡೆಯಲು ಹೊರಟಿದ್ದಾರೆ. ಬಿಜೆಪಿಗೆ ಕೆಟ್ಟ ಹೆಸರು ತರಲು ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಬಡಬಡಾಯಿಸಿದ್ದಾರೆ. ಮತ್ತೊಂದು ಕಡೆ ಈ ಘಟನೆಯಿಂದಾಗಿ ಅನಿಲ್‌ಲಾಡ್ ಪರ ಸಹಾನುಭೂತಿ ವ್ಯಕ್ತವಾಗಿದೆ.

ಮೊನ್ನೆ ತಾನೆ ಕಾಂಗ್ರೆಸ್‌ನಿಂದ ಜೆಡಿಎಸ್‌ಗೆ ಸೇರ್ಪಡೆಯಾದ ದಿವಾಕರಬಾಬು ತಮ್ಮ ಬೆಂಬಲಿಗರ ಜೊತೆ ಲಾಡ್ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿದ್ದಾರೆ. ಪತ್ರಿಕಾಗೋಷ್ಠಿಯೊಂದನ್ನು ನಡೆಸಿ 'ಭಾಜಪದ ಈ ದೌರ್ಜನ್ಯ ಸಹಿಸಲಾಗದು. ಇದನ್ನು ಸಮರ್ಥವಾಗಿ ಎದುರಿಸುತ್ತೇವೆ' ಎಂದು ತಿರುಗೇಟು ನೀಡಿದ್ದಾರೆ. ಕಾಂಗ್ರೆಸ್‌ನ ಹಿರಿಯ ಮುಖಂಡರು, ದಲಿತ ಮುಖಂಡರು, ಸಿಪಿಐ-ಸಿಪಿಐ(ಎಂ) ಮುಖಂಡರು, ಸಾರ್ವಜನಿಕರು ನಿರಂತರವಾಗಿ ಭೇಟಿ ನೀಡಿ ಮಾತನಾಡಿಸುತ್ತಿದ್ದಾರೆ.

ಈ ನಡುವೆ ಕಳೆದೆರಡು ಚುನಾವಣೆಗಳಲ್ಲಿ ಮುಂಡ್ಲೂರು ಫ್ಯಾಮಿಲಿಯ ಪ್ರಾಬಲ್ಯದ ವಿರುದ್ಧ ಅಸಮಾಧಾನಗೊಂಡು ರೆಡ್ಡಿ ಸಹೋದರರನ್ನು ಬೆಂಬಲಿಸಿದ್ದ ಬಳ್ಳಾರಿಗರು ಗಣಿರೆಡ್ಡಿ ಸಹೋದರರ ಈ ಪರಿಯ ದೌರ್ಜನ್ಯ-ದಬ್ಬಾಳಿಕೆಗಳನ್ನು ನೋಡಿ ಭ್ರಮನಿರಸನಗೊಂಡಿದ್ದಾರೆ. ಅನಿಲ್‌ಲಾಡ್ ಮನೆ ಮೇಲಿನ ದಾಳಿ ಪ್ರಕರಣ ಇನ್ನೂ ಯಾವ್ಯಾವ ಸ್ವರೂಪ ಪಡೆದುಕೊಳ್ಳಲಿದೆಯೋ? ಗಣಿರೆಡ್ಡಿ ಸಹೋದರರಿಗಂತೂ ಇದೊಂದು ರಾಜಕೀಯ ಹಿನ್ನಡೆಗೆ ಕಾರಣವಾಗಲಿದೆ. ಪೊಲೀಸರು ಶ್ರೀರಾಮುಲುರನ್ನು ಬಂಧಿಸಿ, ವೈಯಕ್ತಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಿ, ಅವರ ಇಪ್ಪತ್ತು ಬೆಂಬಲಿಗರ ಮೇಲೆ ಮೊಕದ್ದಮೆ ದಾಖಲಿಸಿದ್ದಾರೆ. ಇದೆಲ್ಲಾ ಏನಾದರಾಗಲೀ ಬಳ್ಳಾರಿಯ ಜನತೆ ಈ ಬೆಳವಣಿಗೆಗಳ ಬಗ್ಗೆ ಗಂಭೀರವಾಗಿ ಯೋಚಿಸಿ, ನಿರ್ಧಾರ ಕೈಗೊಳ್ಳಬೇಕಾಗಿದೆ. ಗಣಿರೆಡ್ಡಿ ಸಹೋದರರ ಫ್ಯಾಸಿಸ್ಟ್ ಶೈಲಿಯ ರಾಜಕಾರಣದ ಬಗ್ಗೆ ಸಾರ್ವಜನಿಕವಾಗಿಯೇ ಪ್ರತಿಭಟನೆಯ ದನಿ ಎತ್ತಬೇಕಿದೆ. ಕರ್ನಾಟಕ ರಕ್ಷಣಾ ವೇದಿಕೆ ಸೇರಿದಂತೆ ಬಹುತೇಕ ಸಂಘಟನೆಗಳು ಯಾವತ್ತೋ ಗಣಿರೆಡ್ಡಿಗಳಿಗೆ ಸರೆಂಡರ್ ಆಗಿಬಿಟ್ಟಿವೆ. ಕನ್ನಡ ಸಾಹಿತ್ಯ ಪರಿಷತ್‌ನ ನಿಷ್ಠಿ ರುದ್ರಪ್ಪನಂತೂ ಈ ಗಣಿರೆಡ್ಡಿ ಸಹೋದರರ ಭೇಲಾ ಆಗಿಬಿಟ್ಟಿದ್ದಾನೆ.

ಬಳ್ಳಾರಿಯ ಮಾಧ್ಯಮದ ಮಂದಿಯೂ ಇಂತಹ ಪ್ರಕರಣಗಳ ಬಗ್ಗೆ ವಾಸ್ತವಾಂಶಗಳನ್ನು ಬರೆಯಲಾರದಂತಹ ನಿರ್ಬಂಧದ ವಾತಾವರಣದಲ್ಲಿದ್ದಾರೆ. ಗಣಿರೆಡ್ಡಿ ಸಹೋದರರು ಮತ್ತವರ ಭಂಟ ಶ್ರೀರಾಮುಲು ಆಟಾಟೋಪಕ್ಕೆ ತಡೆಯೊಡ್ಡಲು ಬಳ್ಳಾರಿಗರಿಗೆ ಉಳಿದಿರುವ ಏಕೈಕ ಅಸ್ತ್ರವೆಂದರೆ ಚುನಾವಣೆ. ತಮ್ಮ ಹಣಬಲ-ತೋಳ್ಬಲದಿಂದ ಎಲ್ಲವನ್ನೂ ಕೊಂಡುಕೊಳ್ಳಬಹುದೆಂಬ ಭ್ರಮೆಯಲ್ಲಿರುವ ಗಣಿರೆಡ್ಡಿ ಸಹೋದರರಿಗೆ "ಬಳ್ಳಾರಿ ಜನರ ಸ್ವಾಭಿಮಾನ" ಕೊಂಡುಕೊಳ್ಳಲಾಗದೆಂಬ ಸಂದೇಶ ನೀಡಬೇಕಿದೆ

■ [illegible]

ಗಂಟುಮೂಟೆ ಕಟ್ಟಲಿರುವ ಸಿ.ಟಿ. ರವಿ

ಚಿಕ್ಕಮಗಳೂರು ಜಿಲ್ಲಾ ಬಿಜೆಪಿಗಳ ಮುಖದಲ್ಲೀಗ ಪೇತದ ಕಳೆ. ಜನಗಳ ಮೂಗಿಗೆ ದತ್ತಪೀಠ ಎಂಬ ತುಪ್ಪ ಸವರಿ ಕಳೆದ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾಗಿದ್ದ ಕಾರ್ಕಳದ ಸುನಿಲ್, ಶೃಂಗೇರಿಯ ಜೀವರಾಜ್, ಮೂಡಿಗೆರೆಯ ಎಂ.ಪಿ. ಕುಮಾರಸ್ವಾಮಿ ಮತ್ತು ಚಿಕ್ಕಮಗಳೂರು ಜಿಲ್ಲೆಯ ನಾಯಕ ಸಿ.ಟಿ. ರವಿ ಈ ಬಾರಿ ಮತದಾರ ಪ್ರಭುವಿನ ಮುಂದೆ ಹೋಗಿ ನಿಲ್ಲಲು ಯೋಚಿಸಬೇಕಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡಿದ್ದಾರೆ.

'ಮಂಗನ ಕೈಗೆ ಮಾಣಿಕ್ಯ ಸಿಕ್ಕಂತೆ' ಎಂಬ ಹಳೆಯ ಗಾದೆ ಮಾತಿನಂತೆ ಕೈಗೆ ಸಿಕ್ಕ ಅಧಿಕಾರವನ್ನು 'ಸ್ವಜನ ಪಕ್ಷಪಾತಕ್ಕೆ' ಸ್ವಹಿತಕ್ಕೆ ಬಳಸಿಕೊಂಡರೆ ಏನಾಗುತ್ತದೆ ಎಂಬುದಕ್ಕೆ ಇವರುಗಳೆಲ್ಲರೂ ಜೀವಂತ ನಿದರ್ಶನಗಳಾಗಿದ್ದಾರೆ.

ಚಿಕ್ಕಮಗಳೂರಿನ, ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರುಗಳಂತೂ, ಈ ಚುನಾವಣೆಯನ್ನು ಪ್ರತಿಷ್ಠೆಯನ್ನಾಗಿ ತೆಗೆದುಕೊಂಡಿದ್ದಾರೆ. ಅದರಲ್ಲೂ ಶೃಂಗೇರಿ, ಕಾರ್ಕಳ, ಮೂಡಿಗೆರೆ ಮತ್ತು ಚಿಕ್ಕಮಗಳೂರು ಕ್ಷೇತ್ರಗಳಿಗಂತೂ ಅತೀವ ಆದ್ಯತೆ ನೀಡುತ್ತಿದ್ದಾರೆ. ಬಿಜೆಪಿಯ ಮಾಜಿ ಶಾಸಕರುಗಳು ಸಿ.ಟಿ. ರವಿಯ ನಾಯಕತ್ವದಲ್ಲಿ ಮಾಡಿಕೊಂಡಿರುವ ಲಫಡಾಗಳಿಂದಾಗಿ ಅವರ ಕೈಗೆ 'ವಜ್ರಾಯುಧ' ಸಿಕ್ಕಿದಂತಾಗಿದೆ. ಡಿ.ಕೆ. ತಾರಾದೇವಿ ಮರಳಿ ಕಾಂಗ್ರೆಸ್ಸಿಗೆ ಬಂದಿರುವುದು, ಕಾಂಗ್ರೆಸ್ಸಿಗೆ ಲಾಭವಾಗುತ್ತದೋ, ಇಲ್ಲವೋ ಆದರೆ ಜೆಡಿಎಸ್‌ನ ದತ್ತ ಚಿಕ್ಕಮಗಳೂರು ರಾಜಕಾರಣಕ್ಕೆ ಬಂದು ಕುಳಿತಿರುವುದು ಆ ಪಕ್ಷಕ್ಕೆ ಲಾಭ ತಂದು ಕೊಡಲಿದೆ.

ಈತ ಸಿ.ಟಿ. ರವಿ.

ಸಿ.ಟಿ. ರವಿಯೆಂಬ ಮಹಾನಾಯಕನಿಗೆ ಆತನ ಕ್ಷೇತ್ರದ ಜನ ಪ್ರೀತಿಯಿಂದ ಇಟ್ಟಿರುವ ಹೆಸರು ಸಿಟಿ ರವಿ! ಕಳೆದ ಬಾರಿಯ ವಿಧಾನಸಭಾ ಚುನಾವಣೆಯ ನಂತರ, ಈತ ತನ್ನ ಕ್ಷೇತ್ರದ ಹಳ್ಳಿಗಳ ಕಡೆಗೆ ತಲೆ ಹಾಕಿ ಮಲಗಿದ ನಿದರ್ಶನಗಳು ಸಿಗುವುದಿಲ್ಲ, ಆ ಕ್ಷೇತ್ರದ ನೆನೆಗುದಿಗೆ ಬಿದ್ದಿದ್ದ ಕಾಮಗಾರಿಗಳನ್ನು ಗೆದ್ದು ಬಂದ ತಕ್ಷಣ ಮುಗಿಸುತ್ತೇನೆ ಎಂದು ಆಣೆ ಪ್ರಮಾಣ ಮಾಡಿದ್ದ ರವಿಯನ್ನು ಅವರು ನೋಡುತ್ತಿರುವುದು ಈಗ ಚುನಾವಣೆ ಘೋಷಣೆಯಾದ ನಂತರವೇ!

ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಸರ್ಕಾರ ರಚನೆಯಾಗುವವರೆಗೂ ತನ್ನ ಕ್ಷೇತ್ರದಲ್ಲಿ ಸಣ್ಣಪುಟ್ಟ ಕಾಮಗಾರಿಗಳನ್ನು ಮಾಡಿಸುತ್ತ ಕಮಿಷನ್ ಗಿರಾಕಿಯಂತಾಗಿದ್ದ ರವಿ, ಕೋ-ಜಾ ಸರ್ಕಾರ ರಚನೆಯಾದ ತಕ್ಷಣ ಬೆಂಗಳೂರಿಗೆ ಬಂದು ಸೆಟ್ಲಾಗಿ ಬಿಟ್ಟ. ಮಾಜಿ ಆರೋಗ್ಯ ಮಂತ್ರಿ ಆರ್. ಅಶೋಕ್‌ನೊಂದಿಗೆ ಸೇರಿಕೊಂಡು ರಿಯಲ್ ಎಸ್ಟೇಟ್ ದಂಧೆಗಿಳಿದ. ಭರ್ಜರಿ ಕಾಸು ಮಾಡಿಕೊಂಡ. ಚುನಾವಣಾ ಸಮಯದಲ್ಲಿ "ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ನನ್ನ ಮೊದಲ ಆದ್ಯತೆ" ಅನ್ನುತ್ತಿದ್ದ ರವಿ ತನ್ನ ಸಮಗ್ರಾಭಿವೃದ್ಧಿ ಕಡೆಗೆ ಮಾತ್ರ ಗಮನ ಕೊಟ್ಟ.

ಚಿಕ್ಕಮಗಳೂರಿನ, ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರುಗಳಂತೂ, ಈ ಚುನಾವಣೆಯನ್ನು ಪ್ರತಿಷ್ಠೆಯನ್ನಾಗಿ ತೆಗೆದುಕೊಂಡಿದ್ದಾರೆ. ಅದರಲ್ಲೂ ಶೃಂಗೇರಿ, ಕಾರ್ಕಳ, ಮೂಡಿಗೆರೆ ಮತ್ತು ಚಿಕ್ಕಮಗಳೂರು ಕ್ಷೇತ್ರಗಳಿಗಂತೂ ಅತೀವ ಆದ್ಯತೆ ನೀಡುತ್ತಿದ್ದಾರೆ. ಬಿಜೆಪಿಯ ಮಾಜಿ ಶಾಸಕರುಗಳು ಸಿ.ಟಿ. ರವಿಯ ನಾಯಕತ್ವದಲ್ಲಿ ಮಾಡಿಕೊಂಡಿರುವ ಲಫಡಾಗಳಂತೂ ಅವರ ಕೈಗೆ 'ವಜ್ರಾಯುಧ' ಸಿಕ್ಕಿದಂತಾಗಿದೆ.

ತನ್ನ ಹೆಂಡತಿಯ ಸಹೋದರ ಸುದರ್ಶನ್‌ನನ್ನು ಚಿಕ್ಕಮಗಳೂರು ನೋಡಿಕೊಳ್ಳಲು ಬಿಟ್ಟ. ಅವನಿಗೆ



ಎರಡು J.C.B. ಮತ್ತು ಲಾರಿಗಳನ್ನು ಕೊಡಿಸಿ ಎಲ್ಲಾ ಕಂಟ್ರಾಕ್ಟುದಾರರಿಗೂ ಅವುಗಳನ್ನು ಬಾಡಿಗೆಗೆ ಪಡೆಯುವಂತೆ ಫರ್ಮಾನು ಹೊರಡಿಸಿ, ಅಲ್ಲೂ ಭರ್ಜರಿ ಕಾಸು ಮಾಡಿಕೊಂಡ. ಕಾಮಗಾರಿಗಳನ್ನು ಅವರಿವರ ಹೆಸರಿನಲ್ಲಿ ತಾನೆ ಮಾಡಿಸತೊಡಗಿದ.

ಚಿಕ್ಕಮಗಳೂರಿನ ಎಂ.ಜಿ. ರಸ್ತೆಯ ಅಗಲೀಕರಣದ ಸಂದರ್ಭದಲ್ಲಿ ಉಗ್ರ(!) ಹೋರಾಟಕ್ಕಿಳಿದ ರವಿ, ಫುಟ್‌ಪಾತಿನ ಮೇಲೆ ಅಂಗಡಿಗಳನ್ನು ಕಟ್ಟಿಕೊಂಡು ವ್ಯಾಪಾರ ನಡೆಸುತ್ತಿದ್ದ 'ಮಾರ್ವಾಡಿಗಳಿಂದ' ಸಾಕಷ್ಟು ಕಾಸು ಪೀಕಿಕೊಂಡ. ಅವರ ಪರವಾಗಿ J.C.B. ಗಳ ಎದುರಿಗೆ ಮಲಗಿದ. ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಅಂದ. ಯಾವುದಕ್ಕೂ ಅಂದಿನ ಜಿಲ್ಲಾಧಿಕಾರಿ ಕಠಾರಿಯ ಕ್ಯಾರೆ ಅನ್ನಲಿಲ್ಲ, ಇವನ ಹೇಸಿಗೆಗಳನ್ನು ಗಮನಿಸಿದ ಜನ ಮಾತ್ರ ಮೂಗಿನ ಮೇಲೆ ಬೆರಳಿಟ್ಟುಕೊಂಡರು.

ಚಿಕ್ಕಮಗಳೂರು



ಮೋಟಮ್ಮ

ಶ್ರೀಗಂಧಚೋರರನ್ನು, ಮರಗಳ್ಳರನ್ನು ಶತಾಯಗತಾಯ ರಕ್ಷಿಸತೊಡಗಿದ ರವಿ ಅವರಿಂದಲೂ ಕಾಸು ಮಾಡಿಕೊಂಡ. ನಕ್ಸಲರ ಭಯದಿಂದ ಅವರೆಲ್ಲರೂ ಕಾಡು ಬಿಟ್ಟಾಗ ಬರುತ್ತಿದ್ದ ಆಮದನಿ ನಿಂತು ಹೋಯಿತು. ಇದರಿಂದ ಕೋಪಗೊಂಡ ಸಿ.ಟಿ. ರವಿ ಅದೊಂದು ದೊಡ್ಡ ಸಾಮಾಜಿಕ ಪಿಡುಗು ಎನ್ನುವಂತೆ ಬಿಂಬಿಸಿ ವದರತೊಡಗಿದ.

ಚುನಾವಣಾ ಸಮಯದಲ್ಲಿ ಚಿಕ್ಕಮಗಳೂರಿನಲ್ಲಿ ಗೋಹತ್ಯೆಯನ್ನು ನಿಷೇಧ ಮಾಡಿಸುತ್ತೇನೆ ಎಂದು ಉಗ್ರ ಭಾಷಣ ಬಿಗಿಯುತ್ತಿದ್ದ ರವಿ ಗೆದ್ದು ಬಂದ ಮೇಲೆ ಕಸಾಯಿಖಾನೆಗಳಿಂದಲೂ ಮಾಮೂಲಿ ಬರುವಂತೆ ಮಾಡಿಕೊಂಡ.

ಹೀಗೆ ಸಿಕ್ಕಸಿಕ್ಕಲ್ಲಿ ಗೆಬರಿಕೊಂಡ ರವಿ ತನ್ನ ಹೆಂಡತಿ, ಅತ್ತೆ, ಮಾವನ ಹೆಸರಿನಲ್ಲಿ ಬೆಂಗಳೂರಿನಲ್ಲಿ, ಚಿಕ್ಕಮಗಳೂರಿನಲ್ಲಿ ಭರ್ಜರಿ ಆಸ್ತಿ ಮಾಡಿಕೊಂಡ.

39 ಕೋಟಿ....!

ಕಳೆದ ಬಾರಿ ಚುನಾವಣೆಯಲ್ಲಿ ಈತ ಘೋಷಿಸಿಕೊಂಡ ಆಸ್ತಿ ನಾಲ್ಕೂವರೆ ಎಕರೆ ಕಾಫಿ ತೋಟ, ಒಂದು ಮನೆ, ಒಂದಷ್ಟು ಚಿನ್ನ ಇತ್ಯಾದಿ. ಆದರೆ ಈ ಬಾರಿ ಘೋಷಣೆ ಮಾಡಿರುವುದು ಬರೋಬ್ಬರಿ 39 ಕೋಟಿ ರೂಪಾಯಿಗಳ ಆಸ್ತಿಯನ್ನು! ಅಲ್ಲಿಗೆ ಊಹಿಸಿ, ಈತನ ಹಸಿವು ಎಂತಹದ್ದಿತೆಂದು.

ಕಳೆದ ಬಾರಿಯ ಚುನಾವಣೆಯಲ್ಲಿ ಮಳಲೂರು ಏತ ನೀರಾವರಿಯೆಂಬ ಮಹತ್ವದ ಯೋಜನೆಯನ್ನು ಚುನಾವಣಾ ದಾಳವನ್ನಾಗಿಟ್ಟುಕೊಂಡಿದ್ದ ರವಿ ಈ ಬಾರಿ ಚಿಕ್ಕಮಗಳೂರು ಕ್ಷೇತ್ರಕ್ಕೆ ಹೊಸದಾಗಿ ಸೇರ್ಪಡೆಯಾಗಿರುವ ಲಕ್ಯಾ ಹೋಬಳಿ ಮತ್ತು ದೇವನೂರು ಹೋಬಳಿಗಳ ಮಹತ್ವದ ಕರಗಡ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದು ತನ್ನ ಮುಂದಿನ ಗುರಿ ಎನ್ನುತ್ತಿದ್ದಾನೆ! ಆದರೆ ಈ ಹೋಬಳಿಗಳ ಜನ ದಡ್ಡರಲ್ಲ ಅನ್ನೋದು ರವಿಗೆ ತಿಳಿದಂತಿಲ್ಲ.

ಸಿ.ಟಿ. ರವಿಯ ಎದುರಾಳಿಗಾಗಿ ಜೆಡಿಎಸ್‌ನಿಂದ ಬೋಜೇಗೌಡ, ಕಾಂಗ್ರೆಸ್‌ನಿಂದ ಮಲ್ಲಿಕಾರ್ಜುನರವರು ಕಣಕ್ಕಿಳಿಯಲಿದ್ದಾರೆ. ಇಲ್ಲಿ ಬೋಜೇಗೌಡರು ತಂತ್ರಗಾರಿಕೆಗೆ ಹೆಸರಾದವರು; ಜನಸಂಪರ್ಕ ಕಡಿಮೆಯಿದ್ದರೂ, ಎದುರಾಳಿಯನ್ನು ಹೇಗೆ ಹಣಿಯಬೇಕೆಂಬುದನ್ನು ಅರ್ಥ ಮಾಡಿಕೊಂಡಿರುವವರು. ವೃತ್ತಿಯಿಂದ ವಕೀಲರಾಗಿರುವ ಈತನ ಭಾಷೆಯ ಬಗ್ಗೆ ಜನರಲ್ಲಿ ಅಸಮಾಧಾನವಿದೆ. ಈತನ ಜೊತೆಗಿರುವ ಪುಂಡು ಹುಡುಗರ ತಂಡದ ಬಗ್ಗೆ ಜನರಲ್ಲಿ ಅಸಮಾಧಾನವಿದೆ. ಆದರೆ ವೈ.ಎಸ್.ವಿ. ದತ್ತ ಜೊತೆಗಿದ್ದಾರೆ.

ಇನ್ನು ಮಲ್ಲಿಕಾರ್ಜುನ ಜೆಡಿಎಸ್‌ನಿಂದ ಬಿ.ಎಲ್. ಶಂಕರ್ ಜೊತೆಗೆ ಕಾಂಗ್ರೆಸ್‌ಗೆ ಬಂದವರು. ಜನೋಪಕಾರ ಕಡಿಮೆಯಾದರೂ ಜನೋಪದ್ರವಿ ಅಲ್ಲ

ಚುನಾವಣಾ ಜಿದ್ದಾ ಜಿದ್ದಿ!



ಚಾಮರಾಜನಗರ ಜಿಲ್ಲಾ ರಾಜಕಾರಣದಲ್ಲೀಗ ಹೊಸ ಗಾಳಿ ಬೀಸುತ್ತಿದೆ. ಈ ಬಾರಿ ಚುನಾವಣೆಯಲ್ಲಿ ವ್ಯಕ್ತಿ ಪ್ರತಿಷ್ಠೆಗಿಂತ ಪಕ್ಷದ ವರ್ಚಸ್ಸು ತನ್ನ ಪ್ರಭಾವ ಬೀರುವಂತೆ ತೋರುತ್ತಿದೆ. ಜೆಡಿಎಸ್‌ನಲ್ಲಿದ್ದ ಮಹಾದೇವ ಪ್ರಸಾದ್ ಕಾಂಗ್ರೆಸ್ಸಿಗೆ, ಕಾಂಗ್ರೆಸ್ಸಿನಲ್ಲಿದ್ದ ಬೆಂಕಿ ಮಹಾದೇವು ಬಿಜೆಪಿಗೆ ವಲಸೆ ಬಂದಿರುವುದು ಇಷ್ಟೆಲ್ಲಾ ಬದಲಾವಣೆಗಳಿಗೆ ಕಾರಣವಾಗಿದೆ.

ಇದೆಲ್ಲದರ ನಡುವೆ ಬಿಎಸ್‌ಪಿ ಕಳೆದ ಬಾರಿಯ ವಿಧಾನಸಭಾ ಚುನಾವಣೆಗಿಂತ ಹೆಚ್ಚಿನ ವರ್ಚಸ್ಸನ್ನು ಬೆಳೆಸಿಕೊಂಡಿದೆ. ಹನೂರು ಮತ್ತು ಕೊಳ್ಳೇಗಾಲಗಳಲ್ಲಂತೂ ಕಾಂಗ್ರೆಸ್ ಮತ್ತು ಬಿಎಸ್‌ಪಿ ನಡುವೆ ತೀವ್ರ ಪೈಪೋಟಿ ನಡೆಯಲಿದೆ. ಕೆಲವು ಪಕ್ಷಗಳು ರಿಯಲ್ ಎಸ್ಟೇಟ್ ಮತ್ತು ಗಣಿ ದಂಧೆ ನಡೆಸುವವರಿಗೆ ಮಣೆಹಾಕುವ ಸಾಧ್ಯತೆಗಳಿದ್ದು ಭರ್ಜರಿ ಹಣದ ಹೊಳೆ ಹರಿಯಲಿದೆ.

ಚಾಮರಾಜನಗರ

"ಚಾಮರಾಜನಗರದಲ್ಲಿ ನನ್ನನ್ನು ಯಾರೂ ಸೋಲಿಸಲಾಗಲ್ಲ"ಅಂತ ಹೂಂಕರಿಸುತ್ತಿದ್ದ ವಾಟಾಳ್ ನಾಗರಾಜರಿಗೆ ನಡುಕ ಶುರುವಾಗಿ ಹೋಗಿದೆ. ಕಳೆದ ಬಾರಿ ಚುನಾವಣೆಯಲ್ಲಿ ಆಯ್ಕೆಯಾಗಿ ಹೋದ ವಾಟಾಳ್‌ರು, ಕ್ಷೇತ್ರದ ಅಭಿವೃದ್ಧಿ ಕಡೆಗೆ ಗಮನಕೊಡದೆ ಬೆಂಗಳೂರಿನಲ್ಲಿ ಪತ್ರಿಕೆಗಳಿಗೆ ಪೋಸು ಕೊಡುವುದನ್ನು ವೃತ್ತಿ ಮಾಡಿಕೊಂಡಿದ್ದರು. ಇದರಿಂದ ಕ್ಷೇತ್ರದ ಮತದಾರರು ರೋಸಿ ಹೋಗಿದ್ದು, ಈ ಚುನಾವಣೆಯಲ್ಲಿ ಅದನ್ನು ಹೊರಹಾಕಲಿದ್ದಾರೆ.

ಇನ್ನು ಬಿಜೆಪಿಯಿಂದ ಬೆಂಕಿ ಮಹಾದೇವು ಸ್ಪರ್ಧಿಸುತ್ತಿದ್ದರೆ, ಕಾಂಗ್ರೆಸ್ಸಿಗರು ಹಲವಾರು ಲೆಕ್ಕಾಚಾರಗಳೊಂದಿಗೆ ಸಿ. ಪುಟ್ಟರಂಗಶೆಟ್ಟಿ ಯವರಿಗೆ ಟಿಕೆಟ್ ನೀಡಿದ್ದಾರೆ.


ಚಾಮರಾಜನಗರ

ಇಲ್ಲಿನ ಜೆಡಿಎಸ್‌ನಲ್ಲಿ ಟಿಕೆಟ್ ಆಕಾಂಕ್ಷಿಗಳ ದಂಡೇ ಕಾಣಿಸುತ್ತಿದೆ. ಜಿಲ್ಲಾಧ್ಯಕ್ಷ ನಟರಾಜು, ಜಿ.ಎಂ. ಗೌಡರ್, ಮಗಲ ಶಿವಕುಮಾರ್ ತಾ ಮುಂದು ನಾ ಮುಂದು ಎಂದು ಹೋರಾಟ ನಡೆಸುತ್ತಿದ್ದಾರೆ. ಕಾಂಗ್ರೆಸ್ಸಿಗರು ಪಟ್ಟಿ ಪ್ರಕಟಿಸಿದ್ದರಾದ್ದರಿಂದ ಇದನ್ನಾಧರಿಸಿ ಜೆಡಿಎಸ್ ಹೈಕಮಾಂಡ್ ಯಾರಿಗೆ ಟಿಕೆಟ್ ಕೊಡುವುದೆಂಬ ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆಗಳಿವೆ.


1 ಲಕ್ಷದ 71 ಸಾವಿರ ಮತದಾರರಿರುವ ಈ ಕ್ಷೇತ್ರದಲ್ಲಿ ಉಪ್ಪಾರ ಮತ್ತು ಲಿಂಗಾಯತರು ಪ್ರಭಾವಿಗಳಾಗಿದ್ದಾರೆ. ಬೆಂಕಿ ಮಹಾದೇವು ಲಿಂಗಾಯತ ಮತಗಳ ಮೇಲೆ ಕಣ್ಣುಹಾಕಿದ್ದಾರೆ. ಎಸ್.ಎಂ.ಕೃಷ್ಣರ ಕಾಲದಲ್ಲಿ ಉಪ್ಪಾರ ಸಮುದಾಯದ ಜಿ.ಎಂ. ಗೌಡರ್‌ರವರಿಗೆ ಬೆಂಕಿ ಮಹಾದೇವು ಟಿಕೆಟ್ ತಪ್ಪಿಸಿದ್ದರು ಎಂದು ಅಂದು ಮುನಿಸಿಕೊಂಡಿದ್ದ ಇದೀ ಸಮುದಾಯ ಆ ಸೇಡನ್ನು ತೀರಿಸಲು ಕಾದಿದೆ. ಹಿಂದೊಮ್ಮೆ ಡಿ.ಟಿ. ಜಯಕುಮಾರ್ ಎದುರಿಗೆ ಬೆಂಕಿ ಮಹಾದೇವು ಸೋಲಲು ಇದೇ ಪ್ರಮುಖ ಕಾರಣವಾಗಿತ್ತು.

ಕಾಂಗ್ರೆಸ್ಸಿಗರಂತೂ ಬೆಂಕಿ ಮಹಾದೇವರನ್ನು ಹಣಿಯಲೇಬೇಕೆಂಬ ತೀರ್ಮಾನಕ್ಕೆ ಬಂದಂತಿದೆ. ಜಾತೀವಾರು ಲೆಕ್ಕಾಚಾರಗಳ ಮೇಲೆ, ಶೆಟ್ಟಿ ಮತಗಳನ್ನು ಸೆಳೆಯಲು ಸಿ.ಪುಟ್ಟರಂಗ ಶೆಟ್ಟಿಗೆ ಟಿಕೆಟ್ ನೀಡಿದ್ದಾರೆ.

ಒಟ್ಟಾರೆ ವಾಟಾಳ್ ಲೆಕ್ಕಕ್ಕಿಲ್ಲದಂತಾಗಿದ್ದಾರೆ. ಬಿಜೆಪಿ, ಜೆಡಿಎಸ್, ಕಾಂಗ್ರೆಸ್ಸಿನ ನಡುವೆ ಇಲ್ಲಿ ತ್ರಿಕೋನ ಸ್ಪರ್ಧೆ ಏರ್ಪಡಲಿದೆ. ಜೊತೆಗೆ ಉಪ್ಪಾರ ಸಮುದಾಯ ಯಾರನ್ನು ಬೆಂಬಲಿಸುತ್ತದೋ ಅವರಿಗೆ ಗೆಲುವು ಸಿಗಲಿದೆ ಎಂಬ ಲೆಕ್ಕಾಚಾರಗಳಿವೆ.



ಮಹೇಂದರ್



ಬೆಂಕಿ ಮಹಾದೇವ್

ಕೊಳ್ಳೇಗಾಲ

ಮೀಸಲು ಕ್ಷೇತ್ರವಾದ ಕೊಳ್ಳೇಗಾಲದಲ್ಲಿ ಒಟ್ಟು 1,79,748 ಮತದಾರರಿದ್ದು ಪ್ರತಿ ಬಾರಿ ಇಲ್ಲಿ ಹೊಸದಾಗಿ ಟಿಕೆಟ್ ಗಿಟ್ಟಿಸಿದ ಅಭ್ಯರ್ಥಿಗಳು ಗೆದ್ದು ಬರುತ್ತಿದ್ದರು.

ಕ್ಷೇತ್ರ ಪುನರ್‌ವಿಂಗಡನೆಯ ಸಮಯದಲ್ಲಿ ಸಂತೆಮರಳ್ಳಿ ಕ್ಷೇತ್ರದ ಹಲವು ಭಾಗಗಳು ಕೊಳ್ಳೇಗಾಲ ಕ್ಷೇತ್ರಕ್ಕೆ ಸೇರ್ಪಡೆಯಾಗಿವೆ. ಇದು ಈ ಬಾರಿಯ ಚುನಾವಣೆಯಲ್ಲಿ ಅಭ್ಯರ್ಥಿಗಳ ಲೆಕ್ಕಾಚಾರಗಳನ್ನು ತಲೆಕೆಳಗಾಗಿಸುವ ಸಾಧ್ಯತೆಗಳಿವೆ.


ಕಾಂಗ್ರೆಸ್ಸಿನಿಂದ ಮಾಜಿ ಶಾಸಕರಾದ ಧ್ರುವ ನಾರಾಯಣರಿಗೆ ಟಿಕೆಟ್ ಸಿಕ್ಕಿದೆ. ಇದರಿಂದಾಗಿ ಜಿ.ಎನ್. ನಂಜುಂಡಸ್ವಾಮಿ ಮತ್ತು ಎಸ್ ಜಯಣ್ಣ ಟಿಕೆಟ್ ರೇಸಿನಲ್ಲಿ ಸೋತಿದ್ದಾರೆ.

ಕಳೆದ ಬಾರಿ ಸಂತೆಮರಳ್ಳಿ ಕ್ಷೇತ್ರದಲ್ಲಿ ಒಂದೇ ಒಂದು ಓಟಿನಿಂದ ಪರಾಭವಗೊಂಡಿದ್ದ ಎ.ಆರ್. ಕೃಷ್ಣ ಮೂರ್ತಿ ಜೆಡಿಎಸ್‌ನಿಂದ ಸ್ಪರ್ಧಿಸುವುದು ಬಹುತೇಕ ಖಚಿತವಾಗಿದೆ.

ಬಿಜೆಪಿಯ ಎಸ್. ಮಹೇಂದರ್‌ಗೆ ತಾರಾ ವರ್ಚಸ್ಸು ಯಾವ ರೀತಿ ಕೆಲಸಮಾಡುತ್ತದೆಂದು ಕಾದು ನೋಡಬೇಕಿದೆ.

ಎಂಬ ಮಾತಿದೆ. ರಾಜಕಾರಣದಲ್ಲಿ ಸಾಕಷ್ಟು ಪಳಗಿದವರು, ಜೊತೆಗೆ ಬಿ.ಎಲ್. ಶಂಕರ್‌ರವರ ತಂತ್ರಗಾರಿಕೆಯು ಸೇರಿಕೊಂಡರೆ ಗೆಲುವು ಸನಿಹದಾಗಲಿದೆ ಅನಿಸುತ್ತದೆ.

ಒಟ್ಟಾರೆ ಈ ಇಬ್ಬರೂ ಅಭ್ಯರ್ಥಿಗಳು ತಮ್ಮದೇ ತಂತ್ರಗಾರಿಕೆಗಳೊಂದಿಗೆ, ಮಾಜಿ ಶಾಸಕನ ಅಸಮರ್ಥತೆಯನ್ನು-ಭ್ರಷ್ಟಾಚಾರಗಳನ್ನು ದಾಳವಾಗಿಟ್ಟುಕೊಂಡು ಕಣಕ್ಕಿಳಿಯಲಿದ್ದಾರೆ.


ಡಿ.ಬಿ. ಚಂದ್ರೇಗೌಡ

ಮೂಡಿಗೆರೆ

ಮೂಡಿಗೆರೆಯ ಮಾಜಿ ಶಾಸಕ ಎಂ.ಪಿ. ಕುಮಾರಸ್ವಾಮಿಗೆ ಬಿಜೆಪಿಯಿಂದ ಟಿಕೆಟ್ ತಪ್ಪಿ ಹೋಗುವ ಪರಿಸ್ಥಿತಿಯಿತ್ತು. ಹೇಗೋ ಟಿಕೆಟ್ ಗಿಟ್ಟಿಸಿರುವ ಕುಮಾರಸ್ವಾಮಿ ಮತ್ತೆ ಅದೇ ಪೆಕರು, ಪೆಕರು ನಗುವಿನೊಂದಿಗೆ ಅಖಾಡಕ್ಕಿಳಿದಿದ್ದಾರೆ. ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಎಳ್ಳಷ್ಟೂ ಗಮನ ಕೊಡದ ಕುಮಾರಸ್ವಾಮಿ ತಾನು ಮಾತ್ರ ಹಣ ಮಾಡಿಕೊಂಡ. ಸಾರಗೋಡು ಮೀಸಲು ಅರಣ್ಯ ಒತ್ತುವರಿಯ ವಿಷಯದಲ್ಲೂ ಜನರಿಗೆ ಸ್ಪಂದಿಸಲಿಲ್ಲ, ತನ್ನ ಜೀವನದ ಉನ್ನತಿಯೇ ಜನರ, ಕ್ಷೇತ್ರದ ಅಭಿವೃದ್ಧಿ ಎಂದು ತಪ್ಪಾಗಿ ಅರ್ಥೈಸಿಕೊಂಡ ಕುಮಾರಸ್ವಾಮಿಗೆ ಪಾಠ ಕಲಿಸಲು ಕ್ಷೇತ್ರದ ಜನ ಸಜ್ಜಾಗಿದ್ದಾರೆ. ಅಲ್ಲದೆ ಮೂಡಿಗೆರೆ ತಾಲ್ಲೂಕು ಬಿಜೆಪಿಗಳಲ್ಲಿ ಕುಮಾರಸ್ವಾಮಿಯ ಮೇಲಿರುವ ಅಸಮಾಧಾನವೂ ಮಾರಕವಾಗಲಿದೆ.


ಸುನಿಲ್‌ಕುಮಾರ್

ಇನ್ನು ಕಾಂಗ್ರೆಸ್‌ನಿಂದ ಮೋಟಮ್ಮ ಸ್ಪರ್ಧಿಸುವುದು ಬಹುತೇಕ ಖಚಿತವಾಗಿದೆ. ಜೆಡಿಎಸ್‌ನಿಂದ ಮಾಜಿ ಸಚಿವ ಬಿ.ಬಿ. ನಿಂಗಯ್ಯ ಸ್ಪರ್ಧಿಸಲಿದ್ದಾರೆ. ಜನರಿಗೆ ನಿಂಗಯ್ಯ ಭ್ರಷ್ಟ ಎಂದು ತಿಳಿದಿದ್ದರೂ ಬದಲಾವಣೆಗಾಗಿ ಬೆಂಬಲ ಸಿಗಲಿದೆ ಎಂದರೂ ತಪ್ಪಾಗಲಾರದು.

ಶೃಂಗೇರಿ

ಶೃಂಗೇರಿ ಜೀವರಾಜ್‌ದಂತೂ ಹೀನಾಯ ಪರಿಸ್ಥಿತಿ. ಭಜರಂಗಿಗಳ ಪುಂಡಾಟಿಕೆ ಕಂಡು ಕಳೆದ ಬಾರಿ ಮತ ನೀಡಿದ್ದ ಜನ ಯಾಕಾದರೂ ತಪ್ಪು ಮಾಡಿದೆವೋ ಅಂತ ಯೋಚಿಸತೊಡಗಿದ್ದರು. ತಪ್ಪನ್ನು ತಿದ್ದಿಕೊಳ್ಳಲು ಜನರಿಗೀಗ ಅವಕಾಶ ಒದಗಿಬಂದಿದೆ.


ನಿಂಗಯ್ಯ

ಈತನ ಅಧಿಕಾರಾವಧಿಯಲ್ಲಂತೂ ದಲಿತರ ಮೇಲೆ ನಿರಂತರ ದೌರ್ಜನ್ಯಗಳು ನಡೆದವು. ಭಜರಂಗಿಗಳಿಂದ ಭಯಾನಕ ಆರ್ಭಟಗಳು ನಡೆದವು. ಕಳೆದ ಬಾರಿ ಜೀವರಾಜ್‌ರನ್ನು ಬೆಂಬಲಿಸಿದ್ದ ಬ್ರಾಹ್ಮಣ ಸಮುದಾಯದವರೂ ಅದನ್ನು ಕಂಡು ಹೌಹಾರಿದ್ದರು.

ಮರಗಳ್ಳರಿಗೆ, ಶ್ರೀಗಂಧಗಳ್ಳರಿಗೆ ಬೆನ್ನೆಲುಬಾಗಿ ನಿಂತು ಜೀವರಾಜ್ ಹಣ ಮಾಡಿಕೊಂಡ. ರಸ್ತೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಒತ್ತು ಕೊಡಲಿಲ್ಲ, ಬರೀ ಭಜರಂಗಿ ಗಳನ್ನು ಪೊಲೀಸ್ ಠಾಣೆಗಳಿಂದ ಬಿಡಿಸಿಕೊಂಡು ಬರುವುದನ್ನೇ ಕಾಯಕ ಮಾಡಿಕೊಂಡ.

ಇವೆಲ್ಲದರ ಜೊತೆಗೆ ಜೆಡಿಎಸ್ ಮತ್ತು ಕಾಂಗ್ರೆಸ್‌ನಿಂದ ಪ್ರಬಲ ಅಭ್ಯರ್ಥಿಗಳೇ ಕಣಕ್ಕಿಳಿಯುತ್ತಿದ್ದಾರೆ. ಮಾಜಿ ಕಾನೂನು ಸಚಿವ ಡಿ.ಬಿ. ಚಂದ್ರೇಗೌಡ ಮತ್ತು ಜೆಡಿಎಸ್‌ನಿಂದ ಜಿಲ್ಲಾಧ್ಯಕ್ಷ ಎಚ್.ಟಿ. ರಾಜೇಂದ್ರ ಮತ್ತು ಬಿಎಸ್‌ಪಿಯಿಂದ ಬ್ರಾಹ್ಮಣ ಸಮುದಾಯದ ರವಿಶಂಕರ್. ಬಿಎಸ್‌ಪಿ ಬ್ರಾಹ್ಮಣರನ್ನು ಕಣಕ್ಕಿಳಿಸಿರುವುದರಿಂದ ಈ ಚುನಾವಣೆ ವಿಶೇಷವಾಗಿದೆ. ಸುಮಾರು 30 ಸಾವಿರ ಮತಗಳಿರುವ ಬ್ರಾಹ್ಮಣ ಸಮುದಾಯ ಯಾರೆಡೆಗೆ ಒಲಿಯುತ್ತದೋ ಅವರದ್ದೇ ಗೆಲುವಾಗಲಿದೆ. ಆದರೆ ಜೀವರಾಜ್‌ರನ್ನು ಹೊರತುಪಡಿಸಿ.

ಕಾರ್ಕಳ

ಕಾರ್ಕಳದಲ್ಲಿ ಕಾಂಗ್ರೆಸ್‌ನಿಂದ ಸುನಿಲ್ ಪ್ರಬಲ ಸ್ಪರ್ಧೆ ಎದುರಿಸಲಿದ್ದಾರೆ. ಮಾಜಿ ಶಾಸಕ ಗೋಪಾಲ ಭಂಡಾರಿಯವರು ಜನರ ಗಮನವನ್ನು ತಮ್ಮ ಒಳ್ಳೆತನದಿಂದ ಸೆಳೆಯುವಲ್ಲಿ ಯಶಸ್ವಿ ಆಗಿದ್ದಾರೆ. ಕಳೆದ ಬಾರಿ ಕೋಮುದ್ವೇಷದ ದಳ್ಳುರಿ ಹೊತ್ತಿಸಿ, ತನ್ನ ಸ್ವಜಾತಿ ಬಿಲ್ಲವರಲ್ಲಿ ಜಾತಿ ಭಾವನೆ ಮೂಡಿಸಿ ಗೆದ್ದುಬಂದಿದ್ದ ಸುನಿಲ್‌ಗೆ ಈ ಬಾರಿಯ ಚುನಾವಣೆ ಅಷ್ಟೊಂದು ಸುಲಭವಾಗಿಲ್ಲ.

ಕೈಯಲ್ಲಿ ಖರ್ಚಿಗೂ ಕಾಸಿಲ್ಲದೆ ಹತ್ತಿಪ್ಪತ್ತು ಎತ್ತಿಕೊಂಡು ತಿರುಗುತ್ತಿದ್ದ ಅಂದಿನ ಸುನಿಲನೆಲ್ಲಿ? ಕಂಡಕಂಡಲ್ಲಿ ಗೆಬರಿ ಕೋಟ್ಯಾಧಿಪತಿಯಾದ ಇಂದಿನ ಸುನೀಲನೆಲ್ಲಿ? ಜನ ಈತನ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಇದು ಭಾರೀ ಪರಿಣಾಮ ಬೀರಲಿದೆ.

ಒಟ್ಟಾರೆ ಸಿ.ಟಿ. ರವಿಯ ಸ್ಪೀಡಿನಲ್ಲಿ ತಾವೂ ಬೆಳೆಯಲು ಹೊರಟ ಈ ಮೂವರು ಶಾಸಕರು, ತಮ್ಮ ಅಂತ್ಯಕ್ಕೆ ತಾವೇ ಹಳ್ಳ ತೋಡಿಕೊಂಡಿದ್ದಾರೆ. ಒಂದು ಕೋಮಿನ ಮೇಲೆ ಮತ್ತೊಂದು ಕೋಮಿನವರನ್ನು ಎತ್ತಿಕಟ್ಟಿ ಬೇಳೆ ಬೇಯಿಸಿಕೊಳ್ಳುವ ಕಾಲ ಮುಗಿದುಹೋಗಿದೆ. ಇದಕ್ಕೆ ಸಾಕ್ಷಿ ಕಳೆದ ಸಾರಿಯ ಬಾಬಾಬುಡನ್‌ಗಿರಿಗೆ ಭಜರಂಗಿಗಳು ನಡೆಸಿದ ದತ್ತಮಾಲೆ ಅಭಿಯಾನಕ್ಕೆ ವ್ಯಕ್ತವಾದ ನೀರಸ ಪ್ರತಿಕ್ರಿಯೆ. ತಾವು ಮಾಡಿದ ತಪ್ಪಿನ, ಢೋಂಗಿ ಜಾತಿವಾದದ, ಭ್ರಷ್ಟಾಚಾರದ ಪಾಪವನ್ನು ತೀರಿಸುವ ಕಾಲ ಈ ನಾಲ್ಕು ಜನರಿಗೆ ಸನಿಹವಾಗಿದೆ. ಜನ ಇವರನ್ನು ತೀರ್ಥಯಾತ್ರೆಗೆ ಕಳುಹಿಸಲಿದ್ದಾರೆಯೇ ಕಾದು ನೋಡಬೇಕು. ■

ಬಿ.ಎಸ್ಪಿಯಿಂದ ಸ್ಪರ್ಧಿಸಿರುವ ಎನ್. ಮಹೇಶ್ ಒಳ್ಳೆ ಹೆಸರು ಮಾಡಿದ್ದಾರೆ. ಚುನಾವಣಾ ಪ್ರಚಾರಕ್ಕೆಂದು ಮಾಯಾವತಿ ಬರುತ್ತಿರುವುದರಿಂದ ಎಲ್ಲ ಪಕ್ಷಗಳಿಂದ ಮತಗಳನ್ನು ಕಿತ್ತುಕೊಳ್ಳುವ ಸಾಧ್ಯತೆಗಳಿವೆ.

ಕಳೆದ ಬಾರಿ ಚುನಾವಣೆಯಲ್ಲಿ ಪಕ್ಷೇತರವಾಗಿ ಸ್ಪರ್ಧಿಸಿ ಗೆಲುವು ಪಡೆದಿದ್ದ ಬಾಲರಾಜ್‌ಗಂತೂ ಈ ಬಾರಿಯ ಚುನಾವಣೆಯಲ್ಲಿ ಠೇವಣಿ ಕಳೆದುಕೊಳ್ಳುವ ಭೀತಿ ಎದುರಾಗಿದೆ.

ಕಾಂಗ್ರೆಸ್-ಬಿಎಸ್ಪಿ-ಜೆಡಿಎಸ್‌ಗಳ ನಡುವೆ ತ್ರಿಕೋನ ಸ್ಪರ್ಧೆ ಎದುರಾಗುವ ಸಾಧ್ಯತೆಗಳಿವೆ.

ಹನೂರು

ವಿಭಿನ್ನ ರಾಜಕಾರಣಕ್ಕೆ ಹೆಸರಾಗಿರುವ ಹನೂರಿನಲ್ಲಿ 1,70,000ದಷ್ಟು ಮತದಾರರಿದ್ದಾರೆ. ಲಿಂಗಾಯತ, ಕುರುಬ, ಉಪ್ಪಾರರು, ಒಕ್ಕಲಿಗರು, ಹಿಂದುಳಿದವರು. ಹೀಗೆ ಎಲ್ಲ ಜಾತಿಗಳಿಂದಲೂ ಸಮಾನವಾಗಿ ಹಂಚಿಹೋಗಿರುವ ಕ್ಷೇತ್ರವಾಗಿದ್ದು ಉಪ್ಪಾರ ಜನಾಂಗದ ಮತಗಳು ಅಭ್ಯರ್ಥಿಯ ಗೆಲುವಿನಲ್ಲಿ ನಿರ್ಣಾಯಕ ಪಾತ್ರವಹಿಸಲಿವೆ.

ಕಾಂಗ್ರೆಸ್ ಟಿಕೆಟ್ ರಾಜುಗೌಡರ ಮಗ ಆರ್. ನರೇಂದ್ರನ ಪಾಲಾಗಿದೆ. ಬಿಜೆಪಿಯಿಂದ ಬಿ. ಶಿವಕುಮಾರ್ ಕಣಕ್ಕಿಳಿದಿದ್ದಾರೆ. ಕಳೆದಬಾರಿ ಜಾತ್ಯತೀತ ಜನತಾದಳದಿಂದ ಅನುಕಂಪದ ಅಲೆಯಲ್ಲಿ ಗೆದ್ದು ಬಂದಿದ್ದ ಪರಿಮಳಾ ನಾಗಪ್ಪನವರಿಗೆ ಜೆಡಿಎಸ್ ಕೈಕೊಟ್ಟಿದೆ.


ಪರಿಮಳಾ ನಾಗಪ್ಪ

ಈಗ ಬಿಎಸ್‌ಪಿ ಸೇರಿಕೊಂಡಿರುವ ಅವರು ಹನೂರಿನ ಬಿಎಸ್‌ಪಿ ಅಭ್ಯರ್ಥಿಯಾಗಿದ್ದಾರೆ.

ಪರಿಮಳಾ ನಾಗಪ್ಪನವರಿಗೆ ಟಿಕೆಟ್ ಇಲ್ಲ ಎಂದ ಜೆಡಿಎಸ್ ತಮಿಳು ಮೂಲದ ಗಣಿ ಧಣಿಯೊಬ್ಬರಿಗೆ ಟಿಕೆಟ್ ನೀಡುವ ಸಾಧ್ಯತೆಗಳಿವೆ.

ಕ್ಷೇತ್ರ ಪುನರ್‌ವಿಂಗಡನಾ ಸಮಯದಲ್ಲಿ ಕೊಳ್ಳೇಗಾಲದ ಹಲವು ಗ್ರಾಮಗಳು ಹನೂರಿಗೆ ಸೇರಿಕೊಂಡು ಅಲ್ಲಿನ ಸುಮಾರು 25 ಸಾವಿರ ಮತಗಳು ಬಿಎಸ್‌ಪಿಗೆ ಒಲಿಯುವ ಸಾಧ್ಯತೆಗಳಿವೆ. ಹಾಗೇನಾದರೂ ಆದ ಪಕ್ಷದಲ್ಲಿ ಬಿಎಸ್‌ಪಿ ಮತ್ತು ಕಾಂಗ್ರೆಸ್ ಪಕ್ಷಗಳ ಮಧ್ಯೆ ತೀವ್ರ ಪೈಪೋಟಿ ಏರ್ಪಡಲಿದೆ. ಜೆಡಿಎಸ್‌ನಿಂದ ಗಣಿಯ ಹಣವೂ ಹರಿಯಲಿದೆ.



ಗುಂಡ್ಲುಪೇಟೆ

ಈ ಕ್ಷೇತ್ರದಿಂದ ಮೂರು ಬಾರಿ ಎಂಎಲ್‌ಎ ಆಗಿ ಆಯ್ಕೆಯಾಗಿದ್ದ ಮಹಾದೇವ ಪ್ರಸಾದರನ್ನು ಸೋಲಿಸಲು ಕಾಂಗ್ರೆಸ್ಸಿಗರೇ ಟೊಂಕ ಕಟ್ಟಿ ನಿಂತಿರುವುದು ಇಲ್ಲಿನ ವಿಶೇಷ. ಜೆಡಿಎಸ್‌ನಿಂದ ಮಹದೇವ ಪ್ರಸಾದ್ ಕಾಂಗ್ರೆಸ್ಸಿಗೆ ಬರುವುದನ್ನು ವಿರೋಧಿಸುತ್ತಿದ್ದ ಕೆಲವರು ಪಕ್ಷವನ್ನೇ ತೊರೆದು ಹೋಗಿದ್ದರೆ, ಉಳಿದವರು ಕಾಂಗ್ರೆಸ್ಸಿನಲ್ಲಿದ್ದುಕೊಂಡೇ ಪಕ್ಷಬಾಹಿರ ಚಟುವಟಿಕೆ ನಡೆಸಲಿದ್ದಾರೆ. ಕಾಂಗ್ರೆಸ್ಸಿನ ಪ್ರಮುಖ ನಾಯಕ, ಟಿಕೆಟ್ ವಂಚಿತ ಹೆಚ್.ಎಸ್. ನಂಜಪ್ಪ ಮತ್ತು ಜೆಡಿಎಸ್‌ನಲ್ಲಿ ಪ್ರಸಾದ್‌ರೊಂದಿಗಿದ್ದ ಸಿ.ಎಂ. ಶಿವಮಲ್ಲಪ್ಪ ಏನು ಮಾಡುತ್ತಾರೋ ಅದರ ಮೇಲೆ ಪ್ರಸಾದರ ಭವಿಷ್ಯ ನಿಂತಿದೆ ಎಂದರೂ ತಪ್ಪಾಗಲಾರದು.


ಇನ್ನು ಪ್ರಸಾದ್ ಕಾಂಗ್ರೆಸ್ಸಿಗೆ ಬಂದ ನಂತರ ಹತಾಶೆಗೊಂಡು ಪಕ್ಷ ತೊರೆದ ಜಿಲ್ಲಾ ಪಂಚಾಯತ್ ಸದಸ್ಯ ಸಿ.ಎಸ್. ನಿರಂಜನಕುಮಾರ್ ತನ್ನ ಬೆಂಬಲಿಗರೊಂದಿಗೆ ಬಿಜೆಪಿ ಸೇರಿದ್ದು ಇತಿಹಾಸ.

ಬಿಜೆಪಿಯಿಂದ ಸ್ಪರ್ಧೆಗಿಳಿದಿರುವ ನಿರಂಜನ್ ಮಹಾದೇವ ಪ್ರಸಾದರಿಗೆ ತೀವ್ರ ಪೈಪೋಟಿ ನೀಡಲಿದ್ದಾರೆ. ಇಲ್ಲಿ ಲಿಂಗಾಯತ ಮತ್ತು ಕುರುಬ ಸಮುದಾಯದವರು ಹೆಚ್ಚಾಗಿದ್ದು ಒಕ್ಕಲಿಗ ಮತಗಳು ನಿರ್ಣಾಯಕ ಪಾತ್ರವಹಿಸಲಿವೆ.

ಈ ಬಾರಿಯ ಚಾಮರಾಜನಗರ ಜಿಲ್ಲಾ ಚುನಾವಣೆ ಮೊದಲಿನ ಚುನಾವಣೆಗಳಂತೆ ಇರುವುದಿಲ್ಲ ಎಂಬುದಂತೂ ಇದರಿಂದ ಸ್ಪಷ್ಟಗೊಳ್ಳುತ್ತದೆ. ■

ಶಿರಸಿ

ಕಾಗೇರಿ ಬರುತ್ತಿದ್ದಾನೆ ಎಚ್ಚರಿಕೆ!



ಅಂಕೋಲಾ ವಿಧಾನಸಭಾ ಕ್ಷೇತ್ರದಿಂದ ಮೂರುಬಾರಿ ಆಯ್ಕೆಯಾದ ಚೆಡ್ಡಿ ಬಿಜೆಪಿ ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿ ಕ್ಷೇತ್ರ ವಿಂಗಡಣೆಯಿಂದಾಗಿ ಸ್ವ-ಕ್ಷೇತ್ರದಿಂದ ಪಲಾಯನ ಮಾಡಿದ್ದಾನೆ. ಇದ್ದಷ್ಟು ಕಾಲ ಇಲ್ಲಿಯ ಚೆಡ್ಡಿ ಪಡೆಯವರನ್ನು ಬೇಕಾಬಿಟ್ಟ ಮೇಯಿಸಿ, ತಾನೂ ಮೇಯ್ದು ಈಗ ಎಲ್ಲರಿಗೂ ಲತ್ತೆ ಹಾಕಿ ಶಿರಸಿ ಕ್ಷೇತ್ರದ ಟಿಕೆಟ್ ಪಡೆದು ಸೇಫ್ ಆಗಿದ್ದಾನೆ.


ಅಂಕೋಲಾ ಕ್ಷೇತ್ರದಿಂದ ಕಾಗೇರಿ ಮೂರು ಬಾರಿ ಆಯ್ಕೆಯಾಗಿದ್ದನಾದರೂ ಆತ ಇಲ್ಲಿ ಕಡಿದದ್ದು ಅಷ್ಟಕ್ಕಷ್ಟೆ. ಅವರಿವರಿಗೆ ಚಾಡಿ ಹೇಳುತ್ತಾ, ಓಸಿ, ಜುಗಾರಿ, ದೊಂಬಿ ಜಗಳ ಮಾಡುವವರ ಕೂಟ ಕಟ್ಟಿಕೊಂಡು ತಿರುಗಾಡಿದ್ದೇ ಆಯಿತು. ಈತನ ಆಶ್ರಯ ಮತ್ತು ಹೆಸರಿನಲ್ಲೇ ಹಾಲಿ ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಭಾಸ್ಕರ ನಾರ್ವೇಕರ್ ಕಂಡಕಂಡಲ್ಲಿ ಹಫ್ತಾ ಎತ್ತಿ ಗುಂಡಗಾಗಿದ್ದಾನೆ. ಇನ್ನು ಕೆಲವರಂತೂ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಕಾಮಗಾರಿ ಗುತ್ತಿಗೆ ಹಿಡಿದು ಕಾಗೇರಿಗೆ ಒಂದಿಷ್ಟು ಕಮೀಷನ್ ಅರ್ಪಿಸಿ ದಪ್ಪಗಾಗಿದ್ದಾರೆ. ಇನ್ನೊಂದಿಷ್ಟು ಇವನ ಹಿಂಬಾಲಕರು ಅಂಕೋಲಾ ಹಾಗೂ ಕುಮಟಾ ತಾಲೂಕಿನ ಹೇರಳ ಅರಣ್ಯ ಕಡಿದು, ಅನಧಿಕೃತ ಕಲ್ಲುಗಣಿ ಮಾಡಿ ಅರಣ್ಯ ನಾಶ ಮಾಡಿದ್ದಾರೆ.

ಕ್ಷೇತ್ರ ಪುನರ್ವಿಂಗಡಣೆಯ ಪರಿಣಾಮವಾಗಿ ಅಂಕೋಲಾ ತಾಲೂಕು ಕಾರವಾರ ಕ್ಷೇತ್ರಕ್ಕೆ ಸೇರ್ಪಡೆಗೊಂಡ ಹಿನ್ನೆಲೆಯಲ್ಲಿ ತಾನು ಈ ಕ್ಷೇತ್ರದಿಂದ ಸ್ಪರ್ಧಿಸಿದರೆ ಈ ಬಾರಿ ಠೇವಣಿ ಕಳೆದುಕೊಳ್ಳುವುದು ಖಚಿತ ಎಂದುಕೊಂಡ ಕಾಗೇರಿ ಈಗ ಶಿರಸಿ ಕ್ಷೇತ್ರಕ್ಕೆ ಹಾರಿದ್ದಾನೆ. ಶಿರಸಿಯಲ್ಲಿ ದಲಿತ ಸಮುದಾಯದಿಂದ ಹಿಂದೆ ಆಯ್ಕೆಯಾಗಿದ್ದ ವಿವೇಕಾನಂದ ವೈದ್ಯನಿಗೆ ಟಿಕೆಟ್ ತಪ್ಪಿಸಿ ತಾನು ಅವರ ಸ್ಥಾನಕ್ಕೆ ಅಭ್ಯರ್ಥಿಯಾಗಿದ್ದಾನೆ. ಬಿಜೆಪಿ ಪ್ರಧಾನ ಕಾರ್ಯದರ್ಶಿ ಹಾಗೂ ವಿಧಾನಸಭಾ ಅಭ್ಯರ್ಥಿ ಆಯ್ಕೆ ಸಮಿತಿಯ ಸದಸ್ಯನೂ ಆಗಿರುವ ಕಾಗೇರಿ ಅಂಕೋಲಾ ತಾಲ್ಲೂಕಿನ ಯಾವುದೇ ಒಬ್ಬ ವ್ಯಕ್ತಿಗೂ ಟಿಕೆಟ್ ನೀಡುವಂತೆ ಹೈಕಮಾಂಡ್ ಬಳಿ ಪ್ರಸ್ತಾವನೆ ಮಾಡಿಲ್ಲ, ಅಷ್ಟೇ ಏಕೆ, ಕುಮಟಾ ಕ್ಷೇತ್ರಕ್ಕೆ ಸ್ಪರ್ಧಾಕಾಂಕ್ಷಿಯಾಗಿದ್ದ ಜಿಲ್ಲಾ ಬಿಜೆಪಿ ಅಧ್ಯಕ್ಷ ವಿನೋದ ಪ್ರಭುಗೆ ತಂತ್ರಗಾರಿಕೆಯಿಂದ ಟಿಕೆಟ್ ತಪ್ಪಿಸಿದವನೇ ಕಾಗೇರಿ. ಈ ಕೆಲಸ ಮಾಡುವುದಕ್ಕಾಗಿ ಮಾಜಿ ಸಚಿವ ಕಾಂಗ್ರೆಸ್‌ನ ಆರ್.ವಿ.ದೇಶಪಾಂಡೆಯ ಮೂಟೆಗಟ್ಟಲೆ ಹಣ ಕಾಗೇರಿಯ ಖಜಾನೆ ಸೇರಿದ್ದು ಈಗ ಗುಟ್ಟಾಗಿ ಉಳಿದಿಲ್ಲ. ಏಕೆಂದರೆ ಬಿಜೆಪಿಯಿಂದ ತನ್ನದೇ ಜಾತಿಯವನಾದ ವಿನೋದ ಪ್ರಭುಗೆ ಟಿಕೆಟ್ ದೊರೆತರೆ ಆರ್.ವಿ.ದೇಶಪಾಂಡೆಗೆ ಅದು ಮುಳುವಾಗುತ್ತಿತ್ತು. ಕಾರವಾರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಲು ಅಂಕೋಲಾದಿಂದ ಕಾಗೇರಿಯ ಬಲಗೈ ಬಂಟನೆಂದೇ ಗುರುತಿಸಿಕೊಂಡಿರುವ ಭಾಸ್ಕರ್ ನಾರ್ವೇಕರ್, ಜಿಲ್ಲಾ ಯುವ ಮೋರ್ಚಾದ ಅಧ್ಯಕ್ಷ ಅರುಣಕುಮಾರ ನಾಯ್ಕ, ಅರುಣ ನಾಡಕರ್ಣಿ ಮುಂತಾದವರು ಟಿಕೆಟಗಾಗಿ ಶತಪ್ರಯತ್ನಿಸಿದರು. ಆದರೆ ಸ್ವತಃ ಕಾಗೇರಿಯೇ ಇವರೆಲ್ಲರಿಗೂ ಟಿಕೆಟ್ ವಂಚಿಸಿ ಕಾರವಾರದ ಮೀನುಗಾರ ಸಮುದಾಯದ ಪ್ರಸಾದ ಕಾರವಾರಕರ ಎಂಬುವವರಿಗೆ ಕೊಡಿಸಿದ್ದಾನೆ. ಕಾಗೇರಿಯ ಈ ನರಿಬುದ್ಧಿಯ ವಿರುದ್ಧ ಈಗ ಬಿಜೆಪಿಯೊಳಗೇ ಪ್ರತಿರೋಧ ಏಳುತ್ತಿದೆ.

ಸ್ವಾತಂತ್ರ್ಯ ನಂತರದಲ್ಲಿ ಅಂಕೋಲಾ ವಿಧಾನಸಭಾ ಕ್ಷೇತ್ರದಿಂದ ಈವರೆಗೆ ಇಬ್ಬರನ್ನು ಹೊರತುಪಡಿಸಿದರೆ ಬ್ರಾಹ್ಮಣೇತರರು ಆಯ್ಕೆಯಾದದ್ದೇ ಇಲ್ಲ. ಆದರೆ ವಿಶ್ವೇಶ್ವರ ಹೆಗಡೆ ಕಾಗೇರಿ ಸಂಭಾವಿತನಂತೆ ವರ್ತಿಸುತ್ತಾ, ಅಧಿಕಾರದಲ್ಲಿದ್ದ ಸರ್ಕಾರಗಳನ್ನು ಆರೋಪಿಸುತ್ತಾ, ತನ್ನ ನಯ ಮಾತುಗಾರಿಕೆಯಿಂದ ಜನರನ್ನು ಮೋಡಿಗೊಳಿಸಿ ಅವರ ನೈಜ ಸಮಸ್ಯೆಗಳನ್ನು ಮರೆಮಾಚುತ್ತಾ ಮೂರು ಬಾರಿ ಆಯ್ಕೆಯಾಗಿದ್ದ. ಈಗ ಶಿರಸಿ ಕ್ಷೇತ್ರಕ್ಕೆ ಹಾರಿದ್ದಾನೆ. ಯಾವುದಕ್ಕೂ ಶಿರಸಿ ಕ್ಷೇತ್ರದ ಜನ ಕಾಗೇರಿಯ ಬಗ್ಗೆ ಒಂದಿಷ್ಟು ಎಚ್ಚರದಿಂದಿರುವುದು ಒಳ್ಳೆಯದು.

■ ರಮೇಶ್ ಅಂಕೋಲ

ಶಾಂತರಸ ಮತ್ತು ಗಜಲ್



ಹಿರಿಯ ಸಾಹಿತಿ ಶಾಂತರಸರು ಏಪ್ರಿಲ್ 13ರಂದು ನಿಧನ ಹೊಂದಿದರು. ಉರ್ದು ಮಾಸ್ತರ್ ಆಗಿದ್ದ ಅವರು ಹಲವಾರು ಗಜಲ್‌ಗಳನ್ನು ಕನ್ನಡಕ್ಕೆ ಅನುವಾದಿಸಿದ್ದರಲ್ಲದೇ ಕನ್ನಡದಲ್ಲೂ ಗಜಲ್‌ಗಳನ್ನು ಬರೆದಿದ್ದರು.

ಅವರ ನೆನಪಿನಲ್ಲಿ ಅವರು ಬರೆದಿದ್ದ ಉರ್ದು 'ಕಾವ್ಯದಲ್ಲಿ ಮದಿರೆ ಮತ್ತು "ಯೌವನ' ಎಂಬ ಪುಸ್ತಕದಿಂದ ಹಲವು ಅನುವಾದಿತ ಗಜಲ್‌ಗಳನ್ನು ಇಲ್ಲಿ ನಮ್ಮ ಓದುಗರಿಗೆ ನೀಡಿದ್ದೇವೆ.

ಯಾರು ಎಬ್ಬಿಸಬೇಕು ಉದ್ಯಾನದಂಗಳದ ಮೊಗ್ಗುಗಳನು
ಮಲಗಿಹುದು ನಿನ್ನ ಕೇಶಗಳ ನೆರಳಲ್ಲಿ ಮುಂಜಾವಿನೆಲರು
-'ಕೈಫ್' ಅಹಮದ್ ಸಿದ್ದೀಖಿ

ಏನಾದರೂ ಸಿಗಲಿ ಈ ಮಧುರ ತುಟಿಯಿಂದ
ವಿಷ ಕುಡಿವ ಆದೇಶವಾದರೂ ಸರಿಯೆ
-'ಆರ್ಜೂ' ಲಖ್ನವಿ

ಆ ಸುಂದರ ಮೊಗವ ನೋಡಿ ಕನ್ನಡಿಯು
ತನ್ನನ್ನೇ ತಾ ಮರೆತಿಹುದು ಕನ್ನಡಿಯು
-'ಮಜನೂನ್'

ಬೆಡಗು ಬಂತು ಚೇಷ್ಟೆ ಬಂತು ಗರ್ವ ಬಂತು ಲಜ್ಜೆ ಬಂತು
ಸಾವಿರಾರು ಹಿಂಸೆಯೊಡನೆ ಚೆಲುವೆಯರಿಗೆ ಹರೆಯ ಬಂತು
-'ನೋಹ್' ನಾರವಿ



ನೆಲೆಸಿಹುದು ನಿನ್ನ ಸುಂದರ ಉಡುಗೆ
ಸಾವಿರ ಹೂಗಳ ಮೂಸಿದರೂ ಗಂಧವಿಲ್ಲ
-'ಶಾದ್' ಅಜೀಮಾಬಾದಿ

ನೋಡುತಿರು ಓ ಜೌಕ್ ಇಂದು ಲಕ್ಷ ಜನರ ಕೊಲೆ
ಹಚ್ಚಿಹಳು ಹವಳದ ತುಟಿಗೆ ಎಲೆಯ ಕೆಂಬಣ್ಣ
-'ಜೌಕ್'

ಪೀಡೆಯಿದೆ ಕ್ರೋಧವಿದೆ ಕಷ್ಟವಿದೆ ಪ್ರಳಯವಿದೆ ಹಿಂಸೆಯಿದೆ
ಯಾರು ಹೇಳುವರು ಚೆಲುವೆಯರ ಯೌವನಕೆ ಯೌವನವೆಂದು
-'ಅರ್ಷ್' ಮಲ್ಸಿಯಾನಿ

ತುಂಬಿ ತುಳುಕಿತ್ತು ಲಾವಣ್ಯದ ಪಾತ್ರೆ ನನಗಾಗಿ
ಚಂದ್ರ ಚುಕ್ಕೆಗಳೂ ಕೊಂಚ ಆನಂದ ಪಡೆದವು
-'ಅಂಜುಮ್'

ಸೌಂದರ್ಯದ ಚರ್ಚೆ ಎಲ್ಲೆಲ್ಲಿ ನಡೆಯಿತೋ
ಅದು ನಿನ್ನದೇ ಎಂದು ನಾ ತಿಳಿದುಕೊಂಡೆ
-ಪನ್ನಾಲಾಲ್ 'ನೂರ್'

ಹಿಡಿದುಕೊಳ್ಳಿರಿ ಓ ನೋಟಕರೇ ಹಿಡಿದುಕೊಳ್ಳಿರಿ ಹೃದಯ ಗಟ್ಟಿಯಾಗಿ
ಇಂದವಳು ಬರಲಿದ್ದಾಳೆ ಸೌಂದರ್ಯ ಸಭೆಗೆ ಅವಗುಂಠನವಿಲ್ಲದಯೆ
-'ವಫಾ' ಮೀರಠಿ

ಮುಡಿದಿಹಳು ಆ ಚೆಲುವೆ ಹೂಹಾರ ಜಡೆಯಲ್ಲಿ
ಕಟ್ಟಿಹಾಕಿಹಳು ವಸಂತನನು ಹೆಣಿಗೆಯಲ್ಲಿ
- 'ಶೌಖ' ಲಖ್ನವಿ

ಕನ್ನಡಿಯೂ ಇದೆ ಮುಂದೆ ಅವಗುಂಠನವು ಮುಖದಲ್ಲಿ
ಲಾವಣ್ಯ ಬಿಂಬವೇ ನಿನಗೆ ನೀನೆ ಬುರ್ಖಾ ಹಾಕಬೇಡ
-ಪನ್ನಾಲಾಲ್ 'ನೂರ್'

ಏನು ವಿಚಾರವೋ ಅರಿದು ಲಜ್ಜೆಗೊಂಡಳು ಆಗ
ಮುಗುಳುನಗುತ್ತ ಆ ಕಡೆಗೆ ನೋಡುತ್ತಿದ್ದಳು ಈಗ
-'ಅರ್ಷ್' ಸಹಬಾಯಿ

ಅವಳ ತುಟಿಗಳ ಮೇಲೆ ಮುಗುಳುನಗೆ ಬೆಳಗು
ಮೊಗ್ಗೆಗಲ ಮೊಗವ ಜೊನ್ನ ಚುಂಬಿಸಿದಂತೆ
-'ಖಮರ್' ಸಂಭುಲಿ

■

ಪ್ರಜಾತಂತ್ರ: ನೇಪಾಳದ ಮಾದರಿ ಮತ್ತು ಭಾರತದ ಮಾ'ದರಿ'

(2ನೇ ಪುಟದಿಂದ)

ಮಾವೋವಾದಿಗಳೊಂದಿಗೆ ಸ್ನೇಹ ಬೆಳೆಸುವ ಪ್ರಯತ್ನದಲ್ಲಿರುವುದನ್ನು ಮನಗಂಡ ಅಮೆರಿಕ, ಆತನ ಸಂಬಂಧಿ ಗ್ಯಾನೇಂದ್ರನ ಮೂಲಕ ಷಡ್ಯಂತ್ರವೊಂದನ್ನು ರೂಪಿಸಿ 2001ರ ಜೂನ್‌ನಲ್ಲಿ ರಾಜ ಬೀರೇಂದ್ರನ ಇಡೀ ಕುಟುಂಬವನ್ನೇ ಹತ್ಯೆ ಮಾಡಿಸಿ ಗ್ಯಾನೇಂದ್ರನಿಗೆ ರಾಜನ ಪಟ್ಟವನ್ನು ಕಟ್ಟಿತು. ನಂತರದಲ್ಲಿ ನೇಪಾಳ ಕಾಂಗ್ರೆಸ್ ಮತ್ತು ಯುಎಂಎಲ್‌ನಂತಹ ಪಕ್ಷಗಳು ಇದೇ ರಾಜನಡಿಯಲ್ಲೇ ಪ್ರಜಾತಂತ್ರದ ನಾಟಕವಾಡುತ್ತಾ ಜನತೆಯನ್ನು ಮೋಸಗೊಳಿಸುವುದನ್ನು ಮುಂದುವರೆಸಿದರಾದರೂ ಮಾವೋವಾದಿಗಳು ಮುಂದುವರೆಸಿದ ವಿಭಿನ್ನ ಬಗೆಯ ಹೋರಾಟದಲ್ಲಿ ಅವರ ಎಲ್ಲಾ ಷಡ್ಯಂತ್ರಗಳು ಬಯಲಾಗಲಾರಂಭಿಸಿದವು.

ಇರಾಕ್ ಮತ್ತು ಅಫ್ಘಾನಿಸ್ತಾನದಲ್ಲಿ ಪ್ರಜಾತಂತ್ರದ ಸ್ಥಾಪನೆಯ ಹೆಸರಲ್ಲಿ ಯುದ್ಧ ನಡೆಸುತ್ತಿರುವ ಅಮೆರಿಕ ನೇಪಾಳದ ಮಾವೋವಾದಿಗಳ ಹೋರಾಟವನ್ನು ಭಯೋತ್ಪಾದನಾ ಚಟುವಟಿಕೆಯೆಂದೇ ಕರೆದು ಆ ಪಕ್ಷವನ್ನು ಅಂತರರಾಷ್ಟ್ರೀಯ ಭಯೋತ್ಪಾದಕರ ಪಟ್ಟಿಯಲ್ಲಿರಿಸಿತು. ಮಾವೋವಾದಿಗಳನ್ನು ನಾಶಮಾಡಲು ತನ್ನ ಸೇನಾ ಪರಿಣಿತರನ್ನು ಕಳಿಸಿತು ಮತ್ತು ಶಸ್ತ್ರಾಸ್ತ್ರ ಮತ್ತು ಧನಸಹಾಯವನ್ನು ಮಾಡುತ್ತಾ ರಾಜಸತ್ತೆಯ ರಕ್ಷಣೆಗೆ ನಿಂತಿತು. ಆಗ ಮಾವೋವಾದಿಗಳು ತಮ್ಮ ಹೋರಾಟದ ನಿಜವಾದ ಉದ್ದೇಶವಾಗಿರುವ ಪ್ರಜಾತಂತ್ರದ ಸ್ಥಾಪನೆಯ ಗುರಿಯನ್ನು ಇಡೀ ಜಗತ್ತಿಗೆ ಮನವರಿಕೆ ಮಾಡಿಕೊಡಲು ಮುಂದಾದರು. ಗ್ರಾಮೀಣ ನೇಪಾಳದಲ್ಲಿ ರಾಜಸತ್ತೆಯ ಬೇರುಗಳನ್ನು ಕಡಿದು ಪ್ರಜಾತಂತ್ರದ ಸ್ಥಾಪನೆ ಮಾಡಿದ್ದು ಸುಲಭವಾದರೂ ಈ ಪ್ರಜಾಸತ್ತಾತ್ಮಕ ಕ್ರಾಂತಿ ಸಂಪೂರ್ಣವಾಗಬೇಕಿತ್ತು. ಅಮೆರಿಕದ ಸೇನಾವ್ಯೂಹವನ್ನು ಮುರಿದು ರಾಜಧಾನಿ ಜನರ ಅಧಿಕಾರವು ಕಠ್‌ಮಂಡುವನ್ನು ಪ್ರವೇಶಿಸಬೇಕೆಂದರೆ ವ್ಯಾಪಕ ಜನಾಂದೋಲನದ ಅಗತ್ಯವಿದೆಯೆಂದೂ, ರಾಜಸತ್ತೆಯನ್ನು ಮಾತ್ರ ಗುರಿಯಾಗಿಟ್ಟುಕೊಂಡು ಇತರರೊಂದಿಗೆ ತಾತ್ಕಾಲಿಕ ರಾಜಿ ಮಾಡಿಕೊಳ್ಳುವ ಅಗತ್ಯವಿದೆಯೆಂದೂ ಮನಗಂಡರು.



ಹೀಗಾಗಿ ಇತರ ಏಳು ಪಕ್ಷಗಳು - ಅದರಲ್ಲೂ ಮುಖ್ಯವಾಗಿ ನೇಪಾಳಿ ಕಾಂಗ್ರೆಸ್ ಮತ್ತು ಯುಎಂಎಲ್‌ಗಳು ಅರಮನೆಯ ಹಂಗಿನಲ್ಲಿರುವ ಅಮೆರಿಕ ಮತ್ತು ಭಾರತದ ಕೃಪಾಪೋಷಿತ ಶಕ್ತಿಗಳೆಂದು ತಿಳಿದಿದ್ದರೂ - ರಾಜಸತ್ತೆಯ ವಿರುದ್ಧ ಹೋರಾಟದಲ್ಲಿ ಅವರೊಂದಿಗೆ ಮೈತ್ರಿ ಮಾಡಿಕೊಳ್ಳಲು ಮಾವೋವಾದಿಗಳು ಮುಂದಾದರು. ಅದರ ಪರಿಣಾಮವಾಗಿಯೇ 2006ರ ಫೆಬ್ರವರಿಯಲ್ಲಿ 19 ದಿನಗಳ ಕಾಲ ನೇಪಾಳದ ಜನತೆ ಮಾವೋವಾದಿಗಳ ನಾಯಕತ್ವದಲ್ಲಿ ರಾಜಸತ್ತೆಯನ್ನು ಕೊನೆಗೊಳಿಸಿ ಪ್ರಜಾಸತ್ತೆ ಸ್ಥಾಪಿಸಬೇಕೆಂದು ಬೃಹತ್ ಜನಾಂದೋಲನ ನಡೆಸಿದರು. ಆ ಮೂಲಕ ಮಾವೋವಾದಿ ಪಕ್ಷ ಪ್ರಜಾಸತ್ತೆಯ ಸ್ಥಾಪನೆಗಾಗಿ ತನ್ನ ಬದ್ಧತೆಯನ್ನು ಸ್ಪಷ್ಟವಾಗಿ ಜಗತ್ತಿನ ಮುಂದಿಟ್ಟಿತು.

ನೇಪಾಳದ ಜನರ ಈ ಬೃಹತ್ ಮತ್ತು ರಾಜಿ ಇಲ್ಲದ ಜನಾಂದೋಲನಕ್ಕೆ ಮಣಿಯಲೇಬೇಕಾದ ರಾಜ ಗ್ಯಾನೇಂದ್ರ ಮಧ್ಯಂತರ ಸರ್ಕಾರ ರಚನೆಗೆ ಒಪ್ಪಿಕೊಳ್ಳಬೇಕಾಯಿತಲ್ಲದೆ ಅದಕ್ಕೆ ಸಾರ್ವಭೌಮ ಅಧಿಕಾರವನ್ನು ವರ್ಗಾಯಿಸಬೇಕಾಯಿತು. ಪ್ರಜಾಸತ್ತೆಯನ್ನು ಸ್ಥಾಪಿಸಲು ಮುಂದಿನ ಹೆಜ್ಜೆಗಳನ್ನು ಇಡಬೇಕೆಂದರೆ ಮಧ್ಯಂತರ ಸರ್ಕಾರದಲ್ಲಿ ತಾವು ಪಾಲ್ಗೊಳ್ಳಬೇಕಾಗಿರುವುದು ಅನಿವಾರ್ಯ ಎಂದು ಅರಿತ ಮಾವೋವಾದಿಗಳು ತಮ್ಮ ಸಶಸ್ತ್ರ ಹೋರಾಟವನ್ನು ನಿಲ್ಲಿಸಿ ಏಳು ಪಕ್ಷಗಳೊಂದಿಗೆ ಶರತ್ತು ಬದ್ಧ ಮೈತ್ರಿ ಮಾಡಿಕೊಂಡು ಸರ್ಕಾರದಲ್ಲಿ ಪ್ರವೇಶಿಸಿದರು.

ಈ ಮಧ್ಯಂತರ ಸರ್ಕಾರಕ್ಕೆ ಮಾವೋವಾದಿಗಳು ಇಟ್ಟ ಪ್ರಮುಖ ಶರತ್ತೆಂದರೆ ರಾಜಸತ್ತೆಯ ರದ್ಧತಿ ಮತ್ತು ಕೂಡಲೇ ಸಾರ್ವತ್ರಿಕ ಚುನಾವಣೆಯನ್ನು ಆಧರಿಸಿದ ಮತ್ತು ಎಲ್ಲಾ ಪಕ್ಷ ಮತ್ತು ಸಮುದಾಯಗಳ ಪ್ರಾತಿನಿಧ್ಯವಿರುವ ಸಂವಿಧಾನ ಸಭೆಯ ರಚನೆ. ಎಲ್ಲಾ ಜನರಿಂದ ಕೂಡಿದ ಸಂವಿಧಾನ ಸಭೆ ಅಂದರೆ ಜನತೆಯೇ ತಮ್ಮ ಮುಂದಿನ ನೇಪಾಳ ಹೇಗಿರಬೇಕೆಂದು ತೀರ್ಮಾನಿಸಬೇಕೆಂಬುದೇ ಆ ಶರತ್ತಿನ ತಿರುಳಾಗಿತ್ತು.

ಒಂದೆಡೆ ಮಾವೋವಾದಿಗಳ ಈ ಪ್ರಸ್ತಾಪಕ್ಕೆ ನೇಪಾಳದ ಮತ್ತು ಜಗತ್ತಿನ ಎಲ್ಲಾ ಪ್ರಜಾತಂತ್ರವಾದಿಗಳ ಅದ್ಭುತ ಬೆಂಬಲ ದೊರೆಯಿತು. ಆದರೆ ಈ ಪ್ರಕ್ರಿಯೆಯಿಂದಾಗಿ ತಮ್ಮ ಅಧಿಕಾರ ಶಾಶ್ವತವಾಗಿ ಕೈಜಾರಿ ಹೋಗುವುದೆಂದು ಬೆದರಿದ ಅಮೆರಿಕ, ರಾಜಸತ್ತೆ, ನೇಪಾಳಿ ಕಾಂಗ್ರೆಸ್ ಮತ್ತು ಯುಎಂಎಲ್‌ಗಳು ರಾಜಸತ್ತೆಯನ್ನು ಉಳಿಸಿಕೊಳ್ಳಲು ಮತ್ತು ಮಾವೋವಾದಿಗಳನ್ನು ಹಿಮ್ಮೆಟ್ಟಿಸಲು ಹಲವಾರು ಷಡ್ಯಂತ್ರಗಳನ್ನು ಹೂಡಿದವು. ಆದರೆ ಅವೆಲ್ಲವನ್ನು ಯಶಸ್ವಿಯಾಗಿ ಬಯಲುಗೊಳಿಸಿದ ಮಾವೋವಾದಿಗಳು ಸಂವಿಧಾನ ಸಭೆಯ ಚುನಾವಣೆ ಮುಕ್ತವಾಗಿ ನಡೆಯುವಂತೆ ಮಾಡಿದರು. ನೇಪಾಳದ ಇತಿಹಾಸದಲ್ಲೇ ಪ್ರಥಮ ಬಾರಿಗೆ ಜನತೆ ತಮ್ಮ ಹಕ್ಕನ್ನು ಚಲಾಯಿಸುವಂತೆ ನೋಡಿಕೊಂಡರು. ಪರಿಣಾಮ ಕಣ್ಣೆದುರಿಗೆ ಇದೆ.

ಇಂದು ನೇಪಾಳದಲ್ಲಿ ಪ್ರಜಾತಂತ್ರಕ್ಕೆ ವಿರುದ್ಧವಾಗಿದ್ದ ಶಕ್ತಿಗಳು ಹೆಚ್ಚು ಕಡಿಮೆ ಧೂಳೀಪಟವಾಗಿವೆ. ಮಾವೋವಾದಿಗಳ ಕೈಯಲ್ಲಿ ದೇಶದ ಚುಕ್ಕಾಣಿ ಇದೆ. ಹಾಗೆಂದು ಮುಂದಿನ ಹಾದಿ ಸುಗಮವೇನಲ್ಲ. ಬರಲಿರುವ ದಿನಗಳಲ್ಲಿ ಅಳಿದುಳಿದ ರಾಜಸತ್ತೆಯ ಶಕ್ತಿಗಳು ಅಮೆರಿಕದ ಬೆಂಬಲದೊಂದಿಗೆ ಪ್ರಜಾತಂತ್ರದ ವಿರುದ್ಧ ಸಕಲ ಷಡ್ಯಂತ್ರಗಳನ್ನು ನಡೆಸಲಿವೆ. ಮಾವೋವಾದಿಗಳು ಜನತೆಯ ಬೆಂಬಲದೊಂದಿಗೆ ಅದೆಲ್ಲವನ್ನೂ ಹಿಮ್ಮೆಟ್ಟಿಸಿ ಹೇಗೆ ದೇಶವನ್ನು ಪ್ರಜಾತಂತ್ರದೆಡೆಗೆ ಕೊಂಡೊಯ್ಯುತ್ತಾರೆ ಎಂಬುದನ್ನು ಕಾದು ನೋಡಬೇಕು. ಆದರೆ ಈವರೆಗೆ ನೇಪಾಳದ ಮಾವೋವಾದಿಗಳ ಮುನ್ನಡೆಯನ್ನು ಅರ್ಥ ಮಾಡಿಕೊಂಡಿರುವವರಿಗೆ ಅದರ ಬಗ್ಗೆ ಸಂಶಯವೇನೂ ಇರುವುದಿಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ ನೇಪಾಳದಲ್ಲಿ ನಡೆದ ಈ ಸಂವಿಧಾನ ಸಭೆಯ ಚುನಾವಣೆ ಮತ್ತು ಇತರ ಪ್ರಜಾತಾಂತ್ರಿಕ ಪ್ರಕ್ರಿಯೆಗಳು ನಮ್ಮ ದೇಶದಲ್ಲಿರುವ ಪ್ರಜಾತಂತ್ರದ ನಿಜವಾದ ಚಹರೆಗಳೇನು ಎಂಬ ಪ್ರಶ್ನೆಯನ್ನು ಹುಟ್ಟಿಸುತ್ತದೆ. ಅದರ ಬಗ್ಗೆ ಮುಂದಿನ ವಾರ ಚರ್ಚಿಸೋಣ!

■

ಯಡ್ಡಿ ಬಚ್ಚಿಟ್ಟ ಸತ್ಯಗಳು!

ಬ್ರಹ್ಮಕುಮಾರಿಯರ ಮಧ್ಯೆ

ಇದಾದನಂತರ ಮೈತ್ರಾದೇವಿ ಮಾನಸಿಕವಾಗಿ ಅದೆಷ್ಟು ಕುಗ್ಗಿಹೋದರೆಂದರೆ ಪಾರಗಟ್ಟಲೇ ಯಾರೊಂದಿಗೂ ಮಾತಾಡದೇ ಇದ್ದುಬಿಡುತ್ತಿದ್ದರು. ಕ್ರಮೇಣ ಹೊನ್ನಾಳಿ ರಸ್ತೆಯ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯವೇ ಆಕೆಯ ಪಾಲಿಗೆ ಮನೆಯಾಯಿತು. ಐದೂ ಮಕ್ಕಳ ಮದುವೆ ಮುಗಿಸಿದ ನಂತರವೂ ಮನೆಯೊಡೆಯನ ಚಪಲಗಳು ತಣಿಯಲಿಲ್ಲ. ಯಾವತ್ತು ಬ್ರಹ್ಮಕುಮಾರಿಯರ ಸಹವಾಸ ವಿಪರೀತವಾಯಿತೋ ಯಡ್ಡಿ ತಮ್ಮ ಪತ್ನಿಗೂ ಹುಚ್ಚು ಹಿಡಿದಿದೆಯೆಂದು ಕತೆ ಕಟ್ಟಿದರು. ಶಿಕಾರಿಪುರದಿಂದ ಮೈತ್ರಾದೇವಿಯವರನ್ನು ಶಿವಮೊಗ್ಗದ ಮನೆಗೆ ಸ್ಥಳಾಂತರಿಸಿದರು. ಆ ಮನೆಯಲ್ಲಿರುವವಳು ಯಡ್ಡಿ ಹಿರಿಮಗಳು ಅರುಣ. ಅಲ್ಲಿಗೆ ಬಂದ ಮೇಲಂತೂ ಮೈತ್ರಾದೇವಿಗೆ ಬದುಕೇ ನರಕ ಸದೃಶವಾಗಿದೆ. ಬಹುಶಃ ಆ ಒಂದು ರಾತ್ರಿಯ ಮಟ್ಟಿಗಾದರೂ ಮೈತ್ರಾದೇವಿ ತೆಪ್ಪಗಿದ್ದಿದ್ದರೆ ಈ ಹೊತ್ತಿಗಾಕೆ ಬದುಕಿರುತ್ತಿದ್ದರೋ ಏನೋ!

ಅದು 2004ರ ಅಕ್ಟೋಬರ್ 15 ರಾತ್ರಿ. ಆವತ್ತು ದಾವಣಗೆರೆಯ ಬಿಜೆಪಿ ಸಂಸದ ಸಿದ್ದೇಶ್ ತಮ್ಮ ಗೆಸ್ಟ್‌ಹೌಸಿನಲ್ಲೊಂದು ಪಾರ್ಟಿ ಇಟ್ಟುಕೊಂಡಿದ್ದರು. ಅದಕ್ಕೊಂದು ಯಡ್ಡಿ ತನ್ನ ಆಪ್ತೆಯೊಂದಿಗೆ ಬಂದಿದ್ದರು. ರಾತ್ರಿ ಹನ್ನೊಂದೂವರೆಯ ತನಕ ದಾವಣಗೆರೆಯಲ್ಲೇ ಇದ್ದ ಯಡ್ಡಿ ಆನಂತರ ತಮ್ಮ ಶಿವಮೊಗ್ಗದ ಮನೆಗೆ ಬಂದಿದ್ದಾರೆ. ಅದೂ ಮಹಿಳೆಯೊರ್ವಳ ಜೊತೆಗೆ!

ಮೈತ್ರಾದೇವಿಯಂಥ ನೊಂದ ಹೆಣ್ಣುಮಗಳಿಗೆ ರೋಷ ಕೆರಳಿದೆ. ಪೊರಕೆ ಕೈಗೆತ್ತಿಕೊಂಡಿದ್ದೇ ಮೇಲೆ ಬಿದ್ದಿದ್ದಾರೆ. ಇನ್ನು ಯಡ್ಡಿ ತನ್ನ ಪೌರುಷ ತೋರದೇ ಇದ್ದರೆ ಹೇಗೆ?

ಅಷ್ಟೆ.....

ಅದರ ಮಾರನೆ ದಿನವೇ ಮೈತ್ರಾದೇವಿಯ ಆಕಸ್ಮಿಕ ಸಾವಿನ ಸುದ್ದಿ ಹೊರಗೆ ಬಂತು.

ಸಿಬಿಐ' ತನಿಖೆಯಾದರೆ....?

ಮೈತ್ರಾದೇವಿ ಸತ್ತಿದ್ದು ಹೇಗೆ ಎಂಬುದರ ಬಗ್ಗೆ ಕತೆ ಕಟ್ಟಬೇಕಲ್ಲ, ಅದಕ್ಕೆಂದೇ ರಾತ್ರೋರಾತ್ರಿ ಯಡ್ಡಿ ಶಿಕಾರಿಪುರಕ್ಕೆ ಧಾವಿಸಿದರು. ಬೆಳಗ್ಗೆ ವಿಷಯ ತಿಳಿದು ಶಿಕಾರಿಪುರದಿಂದ ಧಾವಿಸಿ ಬಂದಂತೆ ಯಡ್ಡಿ ನಟಿಸಿದರು. ಹಾಗೊಮ್ಮೆ ಬೆಳಿಗ್ಗೆ ಏಳೂವರೆಗೇ ಮೈತ್ರಾದೇವಿಯ ಸಾವು ಸಂಭವಿಸಿದ್ದರೆ ಯಡ್ಡಿ ಏಕೆ ಬೆಳಿಗ್ಗೆ ಆರೂವರೆಗೇ ಶಿಕಾರಿಪುರವನ್ನು ಬಿಡುತ್ತಾರೆ? ದಿನದ ಇಪ್ಪತ್ನಾಲ್ಕು ಗಂಟೆಯೂ ಮನೆಯಲ್ಲೇ ಇರುತ್ತಿದ್ದ ಕೆಲಸದವಳು ಆವತ್ತು ಮಾತ್ರ ಏಕೆ ನಾಪತ್ತೆಯಾಗುತ್ತಾಳೆ? ತಾಯಿ ಒಬ್ಬಳನ್ನು ಮನೆಯಲ್ಲಿ ಬಿಟ್ಟು ಹಿರಿಮಗಳು ಅರುಣಾ ಆವತ್ತೇ ಕೆ.ಆರ್. ಪೇಟೆಗೆ ಹೋಗಿದ್ದೇಕೆ? ಮರುದಿನ ಅರುಣಳ ಮಗಳಿಗೆ ಶಾಲೆಯಿತ್ತು, ಅರುಣಳ ಗಂಡನೂ ಅದೇ ಮನೆಯಲ್ಲಿರುತ್ತಿದ್ದ. ಮೈತ್ರಾದೇವಿ ಸಾಯುವಾಗ ಮನೆಯಲ್ಲಿ ಯಾರೊಬ್ಬರೂ ಇರಲಿಲ್ಲ ಎಂಬುದನ್ನು ಯಾರಾದರೂ ನಂಬಲು ಸಾಧ್ಯವೆ?

ಇದೊಂದು ಅನುಮಾನಾಸ್ಪದ ಸಾವು ಎಂಬುದಕ್ಕೆ ಒಂದಲ್ಲ ಇಪ್ಪತ್ತು ಸಾಕ್ಷಿಗಳು ಸಿಗುತ್ತವೆ. ಆದರೆ ಶಿವಮೊಗ್ಗದ ದೊಡ್ಡಪೇಟೆಯ ಇನ್ಸ್‌ಪೆಕ್ಟರ್ ಶಿವಕುಮಾರ್ ಮತ್ತು ಆಗ ಎಸ್ಪಿಯಾಗಿದ್ದ ಅರುಣ್ ಚಕ್ರವರ್ತಿ ಸೇರಿಕೊಂಡೇ ಈ ಆಕಸ್ಮಿಕ ಸಾವಿನ ತನಿಖೆ ನಡೆಸದೆ ಪ್ರಕರಣ ಮುಚ್ಚಿಹಾಕಿದ್ದಾರೆ. ಆಗ ಮುಖ್ಯಮಂತ್ರಿಯಾಗಿದ್ದ ಧರ್ಮಸಿಂಗ್ ಕೂಡ ಈ ಪ್ರಕರಣವನ್ನು ಮುಚ್ಚಿ ಹಾಕುವಲ್ಲಿ ಪಾಲು ಪಡೆದಿದ್ದಾರೆ. ಈಗಲೂ ಕಾಲ ಮಿಂಚಿಲ್ಲ, ಮೈತ್ರಾದೇವಿಯ ಕೊಲೆ ಪ್ರಕರಣವನ್ನು ರಾಜ್ಯಪಾಲರು ಸಿಬಿಐ ತನಿಖೆಗೆ ಆದೇಶಿಸಬೇಕು. ಈ ನಿಟ್ಟಿನಲ್ಲಿ ಮಹಿಳಾ ಸಂಘಟನೆಗಳು ಬೀದಿಗಿಳಿಯಲಿ. ವೀರಭದ್ರಶಾಸ್ತ್ರಿಗಳ ಕುಟುಂಬವೇನೋ ನಿರ್ನಾಮವಾಯಿತು. ಕನಿಷ್ಠ ಮೈತ್ರಾದೇವಿಗಾದರೂ ನ್ಯಾಯ ದಕ್ಕುವಂತಾಗಲಿ.

ಶಿಕಾರಿಪುರದಲ್ಲಿ ಮೈತ್ರಾದೇವಿಯ ಪ್ರೇತಾತ್ಮ ಕಾಣಿಸಿಕೊಳ್ಳುತ್ತಿದೆ ಅಂತ ಜನ ಮಾಡುತ್ತಿರುವುದು ಒಂದು ಮೂಢ ನಂಬಿಕೆಯೇ ಆಗಿರಬಹುದು.

ಆದರೂ ಮೈತ್ರಾದೇವಿಯವರದ್ದು ಒಂದು ಆಕಸ್ಮಿಕ ಮತ್ತು ಅನುಮಾನಸ್ಪದ ಸಾವು ಎಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ. ಶಿವಮೊಗ್ಗ ಪೊಲೀಸರಿಗೆ ಕಾನೂನಿನ ಬಗ್ಗೆ ಗೌರವ ಇರುವುದೇ ನಿಜವಾದರೆ ತನಿಖೆ ಪುನರಾರಂಭಿಸಲು ಈಗಲೂ ಕಾಲ ಮಿಂಚಿಲ್ಲ.

■

ಚುನಾವಣೆ 2008 ಜನತೆಯ ಪ್ರಣಾಳಿಕೆ

ಕರ್ನಾಟಕದಲ್ಲಿ ಮುಂಬರಲಿರುವ ವಿಧಾನಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ಬೆಂಗಳೂರಿನ ಪ್ರಗತಿಪರ ಮಹಿಳಾ ಸಂಘಟನೆಗಳು ಸೇರಿ ನಮ್ಮ ಹಕ್ಕೊತ್ತಾಯಗಳನ್ನು ನಾಡಿನ ಜನತೆಯ ಅವಗಾಹನೆಗಾಗಿ ಹಾಗೂ ರಾಜಕೀಯ ಪಕ್ಷಗಳ ಪ್ರತಿಕ್ರಿಯೆಗಾಗಿ ಮುಂದಿಡುವ ಯೋಜನೆ ಹಮ್ಮಿಕೊಂಡಿದ್ದೇವೆ. ಪ್ರಸ್ತುತ ಸನ್ನಿವೇಶದಲ್ಲಿ ಕರ್ನಾಟಕದ ಮಹಿಳೆಯರ ಸ್ಥಿತಿಗತಿಯನ್ನು ಎಲ್ಲರ ಗಮನಕ್ಕೆ ತರುತ್ತಾ, ಇಲ್ಲಿಯುವರೆಗೆ ಯಾವ ಪಕ್ಷವೂ ಗಂಭೀರವಾಗಿ ಪರಿಗಣಿಸಿರದ ಮಹಿಳೆಯರ ರಾಜಕೀಯ-ಆರ್ಥಿಕ ಬೇಡಿಕೆಗಳನ್ನು ಸ್ಪಷ್ಟವಾಗಿ ಒತ್ತಿಹೇಳುವ ಸಾಂದರ್ಭಿಕವಾದ ಪ್ರಯತ್ನವಿದು.

ನಮ್ಮ ಸಂವಿಧಾನವು ಆರು ದಶಕಗಳ ಹಿಂದೆಯೇ ಸ್ತ್ರೀ-ಪುರುಷ ಸಮಾನತೆಯನ್ನು ಘೋಷಿಸಿದ್ದರೂ, ವಾಸ್ತವ ಅದಕ್ಕಿಂತ ಬಹಳ ಭಿನ್ನವಾಗಿದೆ. ಸಾಮಾಜಿಕ-ಆರ್ಥಿಕ-ರಾಜಕೀಯ ಕ್ಷೇತ್ರಗಳಲ್ಲಿ ಸಮಾನ ಅವಕಾಶಗಳಿಗಾಗಿ, ಸಮಾನ ಹಕ್ಕುಗಳಿಗಾಗಿ ಮಹಿಳೆಯರು ಈಗಲೂ ಗುದ್ದಾಡಬೇಕಾಗಿದೆ. ಮಾತ್ರವಲ್ಲ ಲಿಂಗತಾರತಮ್ಯದ ವಿಚಾರ ಬಂದಾಗಲೆಲ್ಲ ಮಹಿಳೆಯರ ಮೇಲೆ ಹೊರಿಸಲಾಗುವ ಅನರ್ಹತೆಯ ಆರೋಪಕ್ಕೆ ವಿರುದ್ಧವಾಗಿ ಪದೇ ಪದೇ ತಮ್ಮನ್ನು ಸಾಬೀತುಪಡಿಸಿಕೊಳ್ಳಬೇಕಾಗಿದೆ. ತಮ್ಮ ಮೇಲೆ



ನಾವು ಕೇವಲ ತೀರ್ಮಾನ ಪಾಲಕರಲ್ಲ, ಅದರ ರೂಪಕರೂ ಕೂಡ ಆಗಬೇಕು!

ನಿರಂತರವಾಗಿ ನಡೆಯುತ್ತಿರುವ ಮತ್ತು ಹೊಸ ರೂಪಗಳಲ್ಲಿ ಹೆಚ್ಚುತ್ತಿರುವ ಹಿಂಸೆ-ಅನ್ಯಾಯಗಳ ವಿರುದ್ಧ ಹೋರಾಡಬೇಕಾಗಿದೆ. ತಮ್ಮ ಪ್ರತಿಭಟನೆಯ ದನಿಯನ್ನು ಹತ್ತಿಕ್ಕುವ ಹಿತಾಸಕ್ತಿಗಳನ್ನು ದಿಟ್ಟತನದಿಂದ ಎದುರಿಸಬೇಕಾಗಿದೆ. ಇಂತಹ ಒತ್ತಡದ ಸನ್ನಿವೇಶದಲ್ಲೂ ಮಹಿಳೆಯರು ಎದೆಗುಂದದೆ ಇವೆಲ್ಲವನ್ನೂ ಒಂದಲ್ಲಾ ಒಂದು ಮಟ್ಟದಲ್ಲಿ ಕೆಲವೊಮ್ಮೆ ಏಕಾಂಗಿಗಳಾಗಿ, ಕೆಲವೊಮ್ಮೆ ಸಂಘಟಿತರಾಗಿ ನಿಭಾಯಿಸುತ್ತಿದ್ದಾರೆಂಬುದು ಮುಖ್ಯವಾದ ವಿಷಯ. ಇಂತಹ ಪ್ರಯತ್ನಗಳು ತಕ್ಷಣದಲ್ಲಿ ಪ್ರತಿಫಲ ನೀಡದಿರಬಹುದು. ಆದರೆ ಪ್ರಜಾತಂತ್ರದ ಜಾರಿಯಲ್ಲಿ ನಮ್ಮ ಸಂಪೂರ್ಣ ಭಾಗೀದಾರಿಕೆಗಾಗಿ, ನಮ್ಮ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸುವುದು, ನಮ್ಮ ಹಕ್ಕುಗಳನ್ನು ಪಡೆಯುವ ಹೋರಾಟದ ಬಹುಮುಖ್ಯ ಭಾಗವಾಗಿದೆ. ಇಂತಹ ನಿರಾಶರಾಗದ ನಿರಂತರ ಪ್ರಯತ್ನದ ಭಾಗವಾಗಿಯೇ ರಾಜ್ಯ ಚುನಾವಣೆಯಂತಹ ಮುಖ್ಯವಾದ ಸಂದರ್ಭದಲ್ಲಿ ನಮ್ಮ ಹಕ್ಕೊತ್ತಾಯಗಳನ್ನು ರಾಜಕೀಯ ಹೇಳಿಕೆಯ ರೂಪದಲ್ಲಿ ಮುಂದಿಡುವುದು ಪ್ರಜ್ಞಾವಂತರಾದ ನಮ್ಮ ಕರ್ತವ್ಯ ಮತ್ತು ಜವಾಬ್ದಾರಿಯೆಂದು ತಿಳಿದಿದ್ದೇವೆ.

ಗ್ರಾಮೀಣ ಕರ್ನಾಟಕದಲ್ಲಿ ಮಹಿಳೆಯರು:

ಕರ್ನಾಟಕದ ಮೂರನೇ ಎರಡು ಭಾಗದಷ್ಟು ಮಹಿಳೆಯರು ಗ್ರಾಮೀಣ ಭಾಗಗಳಲ್ಲಿದ್ದಾರೆ. ಒಂದು ಅಧ್ಯಯನದ ಪ್ರಕಾರ ಹಳ್ಳಿಗಳ ಶ್ರಮಶಕ್ತಿಯ ಶೇ.65ಕ್ಕಿಂತ ಹೆಚ್ಚು ಭಾಗವನ್ನು ಮಹಿಳೆಯರೇ ಪೂರೈಸುತ್ತಿದ್ದಾರೆ. ಶೇ.56 ಮಂದಿ ಮಹಿಳೆಯರು ತಮ್ಮ ಮನೆಕೆಲಸದ ಜೊತೆಗೆ ಕುಟುಂಬ ಒಡೆತನದ ಜಮೀನಿನಲ್ಲಿ ವ್ಯವಸಾಯ ಕೆಲಸದಲ್ಲೂ ಸೇರುತ್ತಾರೆ. ಈ ದುಡಿಮೆಯ ಫಲವಾದ ಲಾಭಾಂಶವೆಲ್ಲ ಕುಟುಂಬದ ಗಂಡಸರ ಕೈಯ್ಯಲ್ಲಿರುವುದರಿಂದ ಮಹಿಳೆಯರಿಗೆ ಯಾವ ಸ್ವಂತ ಆದಾಯವೂ ಇರುವುದಿಲ್ಲ, ಶೇ. 49 ಮಂದಿ ಮಹಿಳೆಯರು ಇದರೊಂದಿಗೆ ಇತರರ ಜಮೀನಿನಲ್ಲಿ ಕೂಲಿಗೂ ಹೋಗುತ್ತಾರೆ. (ಈ ಪ್ರಮಾಣ ಗಂಡಸರಲ್ಲಿ ಶೇ.30). ಆದರೆ ಈ ಶ್ರಮಕ್ಕೆ ಅವರಿಗೆ ದೊರೆಯುವುದು ಗಂಡಸರಿಗೆ ಸಿಗುವುದರಲ್ಲಿ ಅರ್ಧದಷ್ಟು ಕೂಲಿ ಮಾತ್ರ. ಜೊತೆಗೆ ಕೃಷಿ ಸಂಬಂಧಿತ ಹೈನುಗಾರಿಕೆಯಂತಹ ಕೆಲಸಗಳನ್ನು ಬಿಟ್ಟರೆ, ಗ್ರಾಮೀಣ ಯುವಜನತೆಗೆ ಬೇಕಾದ ಉದ್ಯೋಗಾವಕಾಶಗಳನ್ನು ಸ್ಥಳೀಯವಾಗಿ ಒದಗಿಸಲು ಯಾವ ಸರ್ಕಾರಗಳೂ ಆಸಕ್ತಿ ತೋರಿಲ್ಲ, ಆದ್ದರಿಂದ ಹಳ್ಳಿಗಳ ಯುವತಿಯರು ದೂರದೂರುಗಳಿಗೆ ಹೋಗಲಾಗದೆ ನಿರುದ್ಯೋಗಿಗಳಾಗಿದ್ದಾರೆ.

ಇಂದಿಗೂ ಕರ್ನಾಟಕದ ಹಳ್ಳಿಗಳ ಬಹುಪಾಲು ಹೆಣ್ಣುಮಕ್ಕಳಿಗೆ ಜಮೀನಿನ ಮೇಲೆ ಯಾವ ಅಧಿಕಾರವೂ ಇಲ್ಲ, ಕಾರಣ, ಮೊದಲನೆಯದಾಗಿ ಸುಮಾರು ಶೇ.30 ಮಹಿಳೆಯರ ಕುಟುಂಬಗಳಿಗೆ ಕೃಷಿಭೂಮಿಯೇ ಇಲ್ಲ ಅಥವಾ ಇದ್ದರೂ ಸರಾಸರಿ 0.09 ಎಕರೆಗಳಿಗಿಂತ ಕಡಿಮೆ ಇದೆ (ಹೆಚ್ಚಾಗಿ ದಲಿತ ಕುಟುಂಬಗಳಲ್ಲಿ). ಹೀಗಾಗಿ ಒಡೆತನದ ಪ್ರಶ್ನೆಯೇ ಇಲ್ಲ, ಎರಡನೆಯದಾಗಿ, ಸರ್ಕಾರದ ಕೆಲವು ಯೋಜನೆಗಳಲ್ಲಿ (ಉಳುವವನಿಗೆ ಭೂಮಿ, ಒತ್ತುವರಿ ಸಕ್ರಮ ಇತ್ಯಾದಿ) ಜಮೀನು ವಿತರಣೆಯಾಗಿದ್ದರೆ, ಎಲ್ಲಾ ಕಡೆ ಅದನ್ನು ಕುಟುಂಬದ ಗಂಡಸರ ಹೆಸರಿಗೆ ದಾಖಲು ಮಾಡಿಸಲಾಗಿದೆಯೇ ಹೊರತು ಮಹಿಳೆಯರನ್ನು ಪರಿಗಣಿಸಿಯೇ ಇಲ್ಲ, ಮೂರನೆಯದಾಗಿ, ಕೆಲವೊಮ್ಮೆ ಕಾನೂನುಪ್ರಕಾರ ಗಂಡನ ಮನೆಯ ಅಥವಾ ತವರು ಮನೆಯ ಆಸ್ತಿಯಲ್ಲಿ ಪಾಲು ಪಡೆಯುವ ಅಧಿಕಾರ ಇದ್ದಾಗಲೂ, ಆ ಕುರಿತಾದ ಸರಿಯಾದ ಮಾಹಿತಿ ಇಲ್ಲದೆ ಅಥವಾ ಸಾಕಷ್ಟು ಬೆಂಬಲವಿಲ್ಲದೆ ಮಹಿಳೆಯರು ಆಸ್ತಿ ಹಕ್ಕಿನಿಂದ ವಂಚಿತರಾಗುತ್ತಾರೆ. ಹೀಗಾಗಿ ಗ್ರಾಮೀಣ ಹೆಣ್ಣುಮಕ್ಕಳ ಸ್ಥಿತಿ ಅತಂತ್ರವಾಗಿಯೇ ಇರುತ್ತದೆ.

ಇದರೊಂದಿಗೆ ಹಲವಾರು ರೀತಿಯ ತೀವ್ರವಾದ ಸಮಸ್ಯೆಗಳನ್ನು ಹಳ್ಳಿಗಳ ಮಹಿಳೆಯರು ಎದುರಿಸುತ್ತಿದ್ದಾರೆ. ಒಂದೆಡೆ ಹಳ್ಳಿಗಳಲ್ಲಿ ಹಿಂದಿನಿಂದ ಚಾಲ್ತಿಯಲ್ಲಿರುವ ಕುಟುಂಬದೊಳಗಿನ ಅಸಮಾನ ಸಂಬಂಧಗಳು- ಕಟ್ಟುಪಾಡುಗಳನ್ನು ಈಗಿನ ಮಹಿಳೆಯರು ಒಪ್ಪಲು ಸಿದ್ಧರಿಲ್ಲ, ಈ ರೀತಿಯ ಮಾರ್ಪಾಡುಗಳಿಗೆ ಒಗ್ಗಿಕೊಳ್ಳಲಾರದ ಕುಟುಂಬದ ಸದಸ್ಯರಿಂದ ಬಹಳಷ್ಟು ಮಹಿಳೆಯರು ಹಿಂಸೆಗೊಳಗಾಗುತ್ತಿದ್ದಾರೆ. ಬಹಳ ಮುಖ್ಯವಾಗಿ ದಲಿತ ಮಹಿಳೆಯರು ಕುಟುಂಬದ ಒಳಗೂ ಹೊರಗೂ ಇಬ್ಬಗೆಯ ಶೋಷಣೆಗೆ ತುತ್ತಾಗುತ್ತಿದ್ದಾರೆ. ಮನೆಯೊಳಗಿನ ಹಲವು ಸಮಸ್ಯೆಗಳೊಂದಿಗೆ ಅವರು ಮೇಲ್ಜಾತಿಗಳ ಪುರುಷರ ದಬ್ಬಾಳಿಕೆಗೆ ಗುರಿಯಾಗುತ್ತಿದ್ದಾರೆ. ಅದರಲ್ಲೂ ಕೆಲವು ದಶಕಗಳಿಂದ ಸಂಘಟಿತರಾಗಿ ದನಿಯೆತ್ತುತ್ತಿರುವ ದಲಿತರ ಸ್ವಾಭಿಮಾನವನ್ನು ಸಹಿಸಲಾರದ ಪಟ್ಟಭದ್ರರ ಹಿಂಸಾಚಾರಕ್ಕೆ ಬಹುತೇಕ ಸಂದರ್ಭಗಳಲ್ಲಿ ದಲಿತ ಮಹಿಳೆಯರೇ ತುತ್ತಾಗಿರುತ್ತಾರೆ. 2004ರಲ್ಲಿ ಬಳ್ಳಾರಿಯ ವಣೇನೂರಿನಲ್ಲಿ ದಲಿತ ಮಹಿಳೆ ಎರ್ರಮ್ಮಳನ್ನು ಬೆತ್ತಲೆ ಮೆರವಣಿಗೆ ಮಾಡಿದ ಅಮಾನುಷವಾದ ದೌರ್ಜನ್ಯದಂತಹ ಸಾವಿರಾರು ಘಟನೆಗಳು ನಡೆಯುತ್ತಲೇ ಬಂದಿವೆ. ಕಿರುಕುಳ, ಬಹಿಷ್ಕಾರ, ಅತ್ಯಾಚಾರ ಮತ್ತು ಮಾಟಮಂತ್ರದ ಸುಳ್ಳು ಆರೋಪದ ಮೇಲೆ ಕೊಲೆಗಳು ದಲಿತ ಮಹಿಳೆಯರ ಮೇಲೆ ಈಗಲೂ ರಾಜಾರೋಷವಾಗಿ ನಡೆಯುತ್ತವೆ.

ಪಟ್ಟಣಗಳು ಮತ್ತು ನಗರಗಳಲ್ಲಿ ಮಹಿಳೆಯರ ಪರಿಸ್ಥಿತಿ

ಕರ್ನಾಟಕದ ನಗರ ಪ್ರದೇಶಗಳಲ್ಲಿರುವ ಮಹಿಳೆಯರಲ್ಲಿ ಶೇ.40 ಮಂದಿ ಸಂಪೂರ್ಣ ಉದ್ಯೋಗಸ್ಥೆಯರೂ, ಇನ್ನೂ ಶೇ.35 ಮಂದಿ ಅರೆ ಉದ್ಯೋಗಸ್ಥೆಯರೂ ಆಗಿದ್ದಾರೆ. ಇವರಲ್ಲಿ ಸಂಘಟಿತ ಕ್ಷೇತ್ರದಲ್ಲಿರುವ ಮಹಿಳೆಯರು ಶೇ.18 ಮಾತ್ರ. ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿರುವವರಲ್ಲಿ ಶೇ.80ಕ್ಕಿಂತ ಹೆಚ್ಚು ಮಹಿಳೆಯರೇ ಆಗಿದ್ದಾರೆ.

ಹೀಗೆ ಸಂಘಟಿತ-ಅಸಂಘಟಿತ ಕ್ಷೇತ್ರಗಳೆರಡರಲ್ಲಿ ದುಡಿಯುವ ಮಹಿಳೆಯರೂ ಕೆಲಸದ ಸ್ಥಳಗಳಲ್ಲಿ ತೀವ್ರವಾದ ಮಾನಸಿಕ-ದೈಹಿಕ ಕಿರುಕುಳಕ್ಕೆ ಒಳಗಾಗುತ್ತಾರೆ. ಬದುಕಿನ ಅಭದ್ರತೆಯ ಕಾರಣಕ್ಕೆ ಅದನ್ನು ವಿರೋಧಿಸುವುದೂ ಹಲವರಿಗೆ ಸಾಧ್ಯವಿರುವುದಿಲ್ಲ, ಮೂರು ತಿಂಗಳ ಹಿಂದಷ್ಟೇ ಬೆಂಗಳೂರಿನ ಗಾರ್ಮೆಂಟ್ ಫ್ಯಾಕ್ಟರಿಗಳಲ್ಲಿ ದುಡಿಯುತ್ತಿದ್ದ ಮೂರು ಯುವತಿಯರ ಆತ್ಮಹತ್ಯೆ ಪ್ರಕರಣಗಳು ಒಂದರ ಮೇಲೊಂದರಂತೆ ವರದಿಯಾದವು. ಮೇಲಿನವರ ಲೈಂಗಿಕ ಕಿರುಕುಳದಿಂದಲೇ ಈ ಆತ್ಮಹತ್ಯೆಗಳು ಸಂಭವಿಸಿದ್ದವು ಎಂಬುದರಲ್ಲಿ ಅನುಮಾನವೇನಿಲ್ಲ, ಕೆಲಸದ ಭದ್ರತೆಯೂ ಇಲ್ಲದೆ, ಯಾವುದೇ ಕಾರ್ಮಿಕ ಸೌಲಭ್ಯಗಳೂ ಇಲ್ಲದೆ, ತಾವು ಗಳಿಸುವ ಹಣಕ್ಕಿಂತ ಮೂರು ಪಟ್ಟು ಹೆಚ್ಚು ಕೆಲಸದ ಒತ್ತಡ ಈ ಕಾರ್ಮಿಕ ಮಹಿಳೆಯರ ಮೇಲಿರುತ್ತದೆ. ಫ್ಯಾಕ್ಟರಿಗಳಲ್ಲಿ ಅಥವಾ ಕೆಲಸದ ಸ್ಥಳದಲ್ಲಿ ಸಂಘಟಿತರಾಗುವ, ಯೂನಿಯನ್ ರಚಿಸಿಕೊಳ್ಳುವ ಅವಕಾಶವಂತೂ ಇರುವುದೇ ಇಲ್ಲ,

ಇದಿಷ್ಟೇ ಅಲ್ಲದೆ, ಕೌಟುಂಬಿಕ ಹಿಂಸೆ ಮತ್ತು ಇತರೆ ದೌರ್ಜನ್ಯಗಳು ದಿನದಿನಕ್ಕೆ ಹೆಚ್ಚುತ್ತಲೇ ಇವೆ. ಕುಟುಂಬದ ಹೊರಗೂ, ಹೆಚ್ಚುತ್ತಿರುವ ವಿಕೃತ ಉಪಭೋಗಿ ಸಂಸ್ಕೃತಿಯ ಪರಿಣಾಮವಾಗಿ ಎಳೆಯ ಬಾಲಕಿಯರನ್ನೂ ಬಿಡದೆ ಅತ್ಯಾಚಾರ ನಡೆಸುತ್ತಿರುವುದು, ಕ್ರೂರವಾಗಿ ಆಸಿಡ್ ಎರಚುತ್ತಿರುವುದು ಆಘಾತಕಾರಿಯಾಗಿ ಹೆಚ್ಚುತ್ತಿದೆ. ಹಳ್ಳಿಗಳಿಂದ ಹೊಟ್ಟೆಪಾಡಿಗಾಗಿ ನಗರಗಳಿಗೆ ಬರುವ ಅಥವಾ ಸಾಗಾಣಿಕೆಯ ಜಾಲಗಳ ಮೂಲಕ ಎಳೆದುತಂದ ಹೆಣ್ಣುಮಕ್ಕಳನ್ನು ವೇಶ್ಯಾವೃತ್ತಿಗಿಳಿಸಿ ಶೋಷಿಸುವ ವ್ಯವಸ್ಥಿತವಾದ ತಂಡಗಳ ಬಲಿಷ್ಠವಾಗುತ್ತಿವೆ. ಅವರಿಗೆ ಪೊಲೀಸರು, ರಾಜಕಾರಣಿಗಳು ಹಾಗೂ ಪ್ರಭಾವಿ ವ್ಯಕ್ತಿಗಳ ಕೃಪಾಕಟಾಕ್ಷವೂ ಇರುತ್ತದೆ.

ರಾಜಕೀಯ ಮತ್ತು ಕರ್ನಾಟಕದ ಮಹಿಳೆಯರು

ಮುಖ್ಯಧಾರೆಯ ರಾಜಕೀಯದಲ್ಲಿ ಕರ್ನಾಟಕದ ಮಹಿಳೆಯರು ಮೊದಲಿಗಿಂತ ಹೆಚ್ಚು ಪಾಲ್ಗೊಳ್ಳುತ್ತಿರುವುದನ್ನು ಗಮನಿಸಬಹುದು. ಅದರಲ್ಲೂ ಪಂಚಾಯತ್ ರಾಜ್ ತಿದ್ದುಪಡಿಯ ನಂತರ ಕೆಳಹಂತದ ಸ್ಥಾನಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಗಮನಾರ್ಹವಾಗಿ ಹೆಚ್ಚಾಗಿದೆ. ಕರ್ನಾಟಕದ ಒಟ್ಟು ಗ್ರಾಮ ಪಂಚಾಯತಿ ಸ್ಥಾನಗಳಲ್ಲಿ 35,922, ತಾಲ್ಲೂಕ್ ಪಂಚಾಯತ್‌ನಲ್ಲಿ 1,375 ಹಾಗೂ ಜಿಲ್ಲಾ ಪಂಚಾಯತ್‌ನಲ್ಲಿ 339 ಸ್ಥಾನಗಳು ಮಹಿಳೆಯರಿಗೆ ಮೀಸಲಾಗಿವೆ. ಇದರರ್ಥ ಚುನಾವಣಾ ರಾಜಕೀಯ ಪಕ್ಷಗಳು ಮಹಿಳೆಯರ ಕಷ್ಟಗಳಿಗೆ ಸ್ಪಂದಿಸುತ್ತಿವೆಯೆಂದಾಗಲೀ ಅಥವಾ ಮಹಿಳೆಯರ ಬೇಡಿಕೆಗಳೊಂದಿಗೆ ಸಹಮತ ಹೊಂದಿವೆಯೆಂದಾಗಲೀ ಅಥವಾ ಅವರನ್ನು ನಾಯಕತ್ವದ ಸ್ಥಾನಗಳಿಗೆ ತರುತ್ತಿವೆಯೆಂದಾಗಲೀ ಅಲ್ಲ, ಏಕೆಂದರೆ ಮೇಲಿನ ಹಂತಗಳಿಗೆ ಹೋದಂತೆ ಮಹಿಳೆಯರ ಪ್ರಾತಿನಿಧ್ಯ ಮುಖಕ್ಕೆ ರಾಚುವಂತೆ ಕಡಿಮೆಯಾಗುತ್ತದೆ. ಹಿಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ರಾಜ್ಯದಿಂದ ವಿಧಾನಸಭೆಗೆ ಆಯ್ಕೆಯಾದ 223 ಜನರಲ್ಲಿ ಕೇವಲ 6 ಮಂದಿ ಮಹಿಳೆಯರು ಹಾಗೆಯೇ ವಿಧಾನ ಪರಿಷತ್ತಿಗೆ ಆಯ್ಕೆಯಾದ 72ರಲ್ಲಿ 8 ಮಂದಿ ಮಾತ್ರ ಮಹಿಳೆಯರು!! ಇಂದಿಗೂ ರಾಜಕಾರಣಿಗಳು ಪುರುಷಾಧಿಪತ್ಯದ ಪೂರ್ವಾಗ್ರಹದಿಂದಲೇ ಮಹಿಳೆಯರನ್ನು ಪರಿಗಣಿಸುತ್ತಿದ್ದಾರೆ.

ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್‌ಗಳಲ್ಲಿ ಮಹಿಳಾ ಮೀಸಲು ಕ್ಷೇತ್ರಗಳು ಹೆಚ್ಚಿರುವುದರಿಂದ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾಗಿರಬಹುದು. ಆದರೆ ಶೇ.50ರಷ್ಟು ಮಹಿಳೆಯರನ್ನು ಅವರ ಕುಟುಂಬದ ಗಂಡಸರು ಚುನಾವಣೆಗೆ ನಿಲ್ಲಿಸಿ, ಗೆದ್ದರೆ ತಾವು ಆಳ್ವಿಕೆ ನಡೆಸುತ್ತಾರೆಂಬುದು ಬಹಿರಂಗ ಸತ್ಯ. ಎಷ್ಟೋ ಪ್ರಕರಣಗಳಲ್ಲಿ ಬಲಿಷ್ಠ ಪುರುಷ ಸದಸ್ಯರ ಆಜ್ಞೆಯನ್ನು ವಿರೋಧಿಸಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಿದ್ದ ದಲಿತ ಮಹಿಳಾ ಅಧ್ಯಕ್ಷರುಗಳನ್ನು ಸಾರಾಸಗಟಾಗಿ ಕೊಲೆ ಮಾಡಿ ಪಾರಾಗಿರುವುದುಂಟು. ಇವೆಲ್ಲವೂ ಈಗಲೂ ಮಹಿಳಾ ಪ್ರತಿನಿಧಿಗಳ ಮುಂದಿರುವ ಸವಾಲುಗಳಾಗಿವೆ.

ಇನ್ನು ಬಿಜೆಪಿ ಪಕ್ಷವಂತೂ ತನ್ನ ಮೂಲ ಸಿದ್ಧಾಂತದಲ್ಲೇ ಮಹಿಳೆಯರನ್ನು ಪುರೋಹಿತಶಾಹಿ ಮೌಢ್ಯಕ್ಕೆ ಕಟ್ಟಿಹಾಕಬಯಸುವ, ಅವರ ಬಿಡುಗಡೆಯ ಎಲ್ಲ ಪ್ರಯತ್ನಗಳನ್ನೂ ತೀವ್ರವಾಗಿ ವಿರೋಧಿಸುವ ಪಕ್ಷವಾಗಿದೆ. ಅವರ ಪ್ರಕಾರ ಮಹಿಳೆಯರು 'ಒಳ್ಳೆಯ ಹೆಂಡತಿ, ತಾಯಿ, ಸೇವಕಿ' ಇತ್ಯಾದಿಯಾಗಿದ್ದರೆ ಸಾಕು. ಇದು ಬಿಜೆಪಿಯ ಮಾತೃಸಂಸ್ಥೆಯಾದ ಆರೆಸ್ಸೆಸ್‌ನ ಮುಖಂಡ ಡಾ. ಸುದರ್ಶನ್‌ರ ಮಾತುಗಳು. ಅವರ ಮಹಿಳಾ ಘಟಕದ ಸಂಚಾಲಕಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, 'ಹೆಂಗಸರನ್ನು ನಿಯಂತ್ರಣದಲ್ಲಿಡಲು ಆಗಾಗ ಹೊಡೆಯುವುದರಲ್ಲಿ ತಪ್ಪೇನಿಲ್ಲ' ಎನ್ನುತ್ತಾರೆ. ರಾಜಸ್ತಾನದ ಬನ್ವಾರಿದೇವಿ ಪ್ರಕರಣದಲ್ಲಿ ಅತ್ಯಾಚಾರಿಗಳಾದ ಮೇಲ್ಜಾತಿ ಭೂಮಾಲಿಕರನ್ನು ಬಿಜೆಪಿ ಸನ್ಮಾನಿಸಿತ್ತು, 2002ರಲ್ಲಿ ಗುಜರಾತ್‌ನಲ್ಲಿ ಅಲ್ಪಸಂಖ್ಯಾತ ಮಹಿಳೆಯರ ಮೇಲೆ ನಡೆದ ಹಿಂಸಾಚಾರಕ್ಕೆ ನೇರವಾಗಿ ಬಿಜೆಪಿಯೇ ಹೊಣೆ. ಕರ್ನಾಟಕದಲ್ಲಿಯೇ ಉಡುಪಿಯ ಬಿಸಿಯೂಟ ಕಾರ್ಮಿಕರಾದ ದಲಿತ ಮಹಿಳೆಯೊಬ್ಬರನ್ನು ಜಾತಿಯ ಕಾರಣಕ್ಕಾಗಿ ಕಿರುಕುಳ ನೀಡಿ ಬಹಿಷ್ಕಾರ ಹಾಕಲು ಹೊರಟದ್ದು ಬಿಜೆಪಿ ಬೆಂಬಲಿತ ಭಜರಂಗದಳದ ಗೂಂಡಾಗಳು. ಆ ಅರ್ಥದಲ್ಲಿ ಬಿಜೆಪಿ ಅಪ್ಪಟ ಮಹಿಳಾ ವಿರೋಧಿ ಪಕ್ಷ.

ಈ ಎಲ್ಲಾ ಅಂಶಗಳೂ ರಾಜಕೀಯ ಪಕ್ಷಗಳ ನೇರ ಮತ್ತು ಪರೋಕ್ಷ ಮಹಿಳಾ ವಿರೋಧಿತನವನ್ನು ತೋರುತ್ತವೆ. ಆದ್ದರಿಂದ ಚುನಾವಣೆಗಳ ಸಂದರ್ಭದಲ್ಲಾದರೂ ಪ್ರಜೆಗಳೆದುರು ಬರುವ ಇವರುಗಳನ್ನು ಮಹಿಳೆಯರೂ ಪ್ರಜ್ಞಾಪೂರ್ವಕವಾಗಿ ಪ್ರಶ್ನಿಸಬೇಕಾದ ಅಗತ್ಯವಿದೆ. ಕೇವಲ ರಾಜಕಾರಣಿಗಳ ವೋಟ್‌ಬ್ಯಾಂಕ್‌ಗಳಾಗಿ ಮಾತ್ರ, ಅವರುಗಳು ಬಳಸುತ್ತಿರುವ ಮಹಿಳಾ ಸಮುದಾಯ ತಮ್ಮ ರಾಜಕೀಯ ಹಕ್ಕುಗಳನ್ನೂ, ದಿನನಿತ್ಯದ ಅಗತ್ಯಗಳನ್ನೂ ಆಗ್ರಹಿಸುವುದು ಅತ್ಯಗತ್ಯವಾದುದು. ಇದಕ್ಕಾಗಿ ಸ್ಪಷ್ಟ ನೇರವಾದ ಹಕ್ಕೊತ್ತಾಯಗಳನ್ನು ಮುಂದಿಡಬೇಕಾಗಿದೆ.

ನಮ್ಮ ಹಕ್ಕೊತ್ತಾಯಗಳು

- ಮಹಿಳೆಯರ ರಾಜಕೀಯ ಹಕ್ಕುಗಳನ್ನು ಖಾತ್ರಿಗೊಳಿಸಬೇಕು. ಪ್ರಜಾತಂತ್ರದ ಯಂತ್ರಾಂಗದಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾಗಬೇಕು. ಅವರನ್ನು ಕೇವಲ ಫಲಾನುಭವಿಗಳನ್ನಾಗಿಸುವ ಬದಲು, ಯೋಜನೆ ಮತ್ತು ಕಾನೂನುಗಳ ರೂಪಣೆಯಲ್ಲಿ ಮತ್ತು ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಸಾಕಷ್ಟಿರುವಂತೆ ನೋಡಿಕೊಳ್ಳಬೇಕು.
- ಮಹಿಳಾ ಮೀಸಲಾತಿ ಎಲ್ಲಾ ಕ್ಷೇತ್ರಗಳಲ್ಲೂ ಜಾರಿಗೆ ಬರಬೇಕು. ವೈಜ್ಞಾನಿಕವಾಗಿ ಮೀಸಲಾತಿಯನ್ನು ಜನಸಂಖ್ಯಾಧಾರಿತವಾಗಿ ನೀಡಬೇಕು. ಆದರೆ ತಕ್ಷಣಕ್ಕೆ ಸರ್ಕಾರಗಳು ಒಪ್ಪಿಕೊಂಡಿರುವ ಶೇ.33ಆದರೂ ಜಾರಿಯಾಗಬೇಕು.
- ವಾರ್ಷಿಕ ಬಜೆಟ್‌ನಲ್ಲಿ ಎಲ್ಲಾ ಇಲಾಖೆಗಳಲ್ಲೂ ಶೇ.10 ರಷ್ಟು ಹಣವನ್ನು ಮಹಿಳೆಯರಿಗೆ ಸಂಬಂಧಿಸಿದ ಯೋಜನೆಗಳಿಗಾಗಿ ಮೀಸಲಿರಿಸಬೇಕು. ಮಹಿಳಾ ಅಭಿವೃದ್ಧಿ ಇಲಾಖೆಯಂತಹ ಪ್ರತ್ಯೇಕ ಇಲಾಖೆಗಳಿಗೂ ('ಎ' ವಿಭಾಗದ ಇಲಾಖೆಗಳು) ಈಗ ನೀಡಲಾಗುತ್ತಿರುವ ಶೇಕಡಾವಾರು ಅನುದಾನವನ್ನು ಹೆಚ್ಚಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಈ ಹಣ ಸಂಪೂರ್ಣವಾಗಿ ವಿನಿಯೋಗವಾಗುವುದನ್ನು ಖಾತ್ರಿಗೊಳಿಸಬೇಕು.
- ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಗಾಗಿ ವಿಶೇಷವಾಗಿ ರಚಿತವಾದ ಮಹಿಳಾ ಆಯೋಗವನ್ನು ಸಶಕ್ತಗೊಳಿಸಬೇಕು. ಈ ಪ್ರಕ್ರಿಯೆಯಲ್ಲಿ ಮಹಿಳಾ ಸಂಘಟನೆಗಳನ್ನು ಹಾಗೂ ಕಾರ್ಯಕರ್ತರನ್ನು ಒಳಗೊಳ್ಳಬೇಕು. ಇದ್ದೂ ಇಲ್ಲದಂತಿರುವ ಬದಲು ಅದಕ್ಕೆ ಅಗತ್ಯವಾದ ಅಧಿಕಾರಗಳನ್ನು, ಹಣಕಾಸನ್ನು ಹಾಗೂ ಸಿಬ್ಬಂದಿಯನ್ನು ಒದಗಿಸಬೇಕು. ಜಿಲ್ಲಾ ಮಟ್ಟದಲ್ಲೂ ಆಯೋಗದ ಸರಿಯಾದ ಕಾರ್ಯ ನಿರ್ವಹಣೆಯನ್ನು ಖಾತ್ರಿಗೊಳಿಸಬೇಕು.
- ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ಅಸಂಘಟಿತ ಮಹಿಳಾ ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ನೀತಿಯೊಂದನ್ನು ಆಯಾ ಸಮುದಾಯದ ಹಾಗೂ ಮಹಿಳಾ ಸಂಘಟನೆಗಳ ಪಾಲುಗೊಳ್ಳುವಿಕೆಯೊಂದಿಗೆ ರೂಪಿಸಬೇಕು. ಕೆಲಸದ ಸ್ಥಳದಲ್ಲಿ ಕಿರುಕುಳ ಮುಕ್ತವಾದ ವಾತಾವರಣ, ಕೆಲಸದ ಭದ್ರತೆ ಹಾಗೂ ಕನಿಷ್ಠ ಕೂಲಿ ಕಾಯ್ದೆಗನುಗುಣವಾಗಿ ಆಯಾ ಕ್ಷೇತ್ರಗಳಿಗೆ ಸಲ್ಲಬೇಕಾದ ವೇತನ ನೀಡಬೇಕು.
- ಸಮಾನ ಕೆಲಸಕ್ಕೆ ಸಮಾನ ವೇತನ ಮಹಿಳೆಯರು ದುಡಿಯುವ ಎಲ್ಲಾ ಕ್ಷೇತ್ರಗಳಲ್ಲೂ ಕಡ್ಡಾಯವಾಗಿ ಜಾರಿಯಾಗುವಂತೆ ಕಾರ್ಯಕ್ರಮಗಳನ್ನು ರೂಪಿಸಬೇಕು.
- ಮಹಿಳೆಯರು ದಶಕಗಟ್ಟಲೆ ಹೋರಾಡಿ ಜಾರಿಯಾಗುವಂತೆ ಮಾಡಿದ ಮಹಿಳಾಪರ ಕಾನೂನುಗಳು ಕಾರ್ಯಗತವಾಗಬೇಕು. ಈ ವಿಚಾರದಲ್ಲಿ ಮೊದಲು ಸರ್ಕಾರಿ ಯಂತ್ರಾಂಗವನ್ನು ಸಂವೇದನಾಶೀಲಗೊಳಿಸಬೇಕು. ಅದಕ್ಕಾಗಿ ಅಗತ್ಯವಾದ ಸಂರಚನೆಗಳನ್ನು ರೂಪಿಸಬೇಕು ಹಾಗೂ ಅಗತ್ಯ ಹಣಕಾಸನ್ನು ಬಿಡುಗಡೆ ಮಾಡಬೇಕು. ಇಂತಹ ಕ್ರಿಯಾಶೀಲತೆಯ ಕೊರತೆಯಿಂದಲೇ ಕೆಲಸದ ಸ್ಥಳದಲ್ಲಿ ಕಿರುಕುಳ ತಡೆ ಕಾಯ್ದೆ, ಕೌಟುಂಬಿಕ ಹಿಂಸೆ ತಡೆ ಕಾಯ್ದೆ ಮೊದಲಾದ ಉತ್ತಮ ಕಾನೂನುಗಳು ಜಾರಿಯಾಗುತ್ತಿಲ್ಲ.
- ಸ್ತ್ರೀಶಕ್ತಿ ಸಂಘಗಳನ್ನು ರಾಜಕೀಯ ಬಾಲಂಗೋಚಿಗಳಂತೆ, ಸರ್ಕಾರಿ ಕಾರ್ಯಕ್ರಮಗಳಿಗೆ ಅಥವಾ ರಾಜಕಾರಣಿಗಳ ಪ್ರಚಾರಗಳಿಗೆ ಕಡ್ಡಾಯ ಪ್ರೇಕ್ಷಕರಂತೆ ಬಳಸುವುದನ್ನು ಕೂಡಲೇ ತಪ್ಪಿಸಲು ಕ್ರಮ ಕೈಗೊಳ್ಳಬೇಕು.
- ಸಾರಾಯಿ ನಿಷೇಧ ಮಾತ್ರವಲ್ಲ, ಮಹಿಳೆಯರ ಬಹುಕಾಲದ ಬೇಡಿಕೆಯಾದ ಸಂಪೂರ್ಣ ಮದ್ಯಪಾನ ನಿಷೇಧವನ್ನು ಜಾರಿ ಮಾಡಬೇಕು.

■ ಮಲ್ಲಿಗೆ

ಸಮಾನತಾ ಮಹಿಳಾ ವೇದಿಕೆ, ಬೆಂಗಳೂರು

ಸೀರೆಗೂ ರೇಣುಕಾಚಾರಿಗೂ ಯಾಕೋ ಆಯ್ತಾಯಿಲ್ಲ ಕಂಡ್ರೊ

"ಎಲ್ಲಿಗೆ ಬಂತ್ಲ ಯಲಕ್ಸನ್ ಗಲಾಟ?" ಎಂದ ಕಾಳಮಾವ.

"ಗಲಾಟಿಯಲ್ಲ ಕಣಮಾವ ಇದೂ. ದೆವ್ವ ದಾನ್ಲಿ ಮಾಜಿಗಳಿಬ್ರು ಹಳ್ಳಿಗಳ ಮ್ಯಾಲೆ ದಾಳಿ ಮಾಡ್ತ ಅವುರೆ."

"ದಾಳಿ ಅಂದ್ರೇನು? ಎತ್ತಿನ್ಯಾಪಾರ ಮಾಡಿದಂಗೆ ಲೀಡ್ರುಗಳ ಖರೀದಿ ಮಾಡ್ತ ಕುಂತವುರೆ ಕಂಡ್ಯ" ಎಂದ

ಬಯಲುಸೀಮೆಯ ಕಟ್ಟೆಪುರಾಣ
■ ಬಿ. ಚಂದ್ರೇಗೌಡ

ಸೀರ.

"ಸ್ತ್ರೀ ಸಗತಿಯೋರು ನಮಿಗಿಷ್ಟು ದುಡ್ಡು ಕೊಡಿ, ನಾವ್ಯಲ್ಲ ನಿಮಿಗೆ ಮಾಡ್ತಿವಿ ಅಂದಿದ್ದರಂತೆ" ಎಂದಳು ಜುಮ್ಮಿ.

ಇದನ್ನೆಲ್ಲ ಕೇಳಿದ ಕಾಳಮಾವ ಲೊಚಗರಿದು "ಎಲ್ಲಿಗೆ ಬಂತಯ್ಯ ಯವಾರ?" ಎಂದ.

"ಯವಾರೇನು ಸರಿಯಾದ ಯವಾರನೆಯ. ನೋಡಾಗ್ಲೆ ಆ ಬಿಜೆಪಿಗಳು ಸೀರೆ ಸಮೇತ ಸಿಗಾಯ್ಕಂಡವುರೆ."

"ಎಲ್ಲೀ?"

"ದಾವಣಗ್ಯರೆತವ ಕಣಮಾವ. ಚಿನಬಸಪ್ಪ ಅಂತ ವಳ್ಳೆ ಸೀರೆ ಯಾಪಾರಿ ಅವುನಲ್ಲಿ."

"ಊ ಕಣೇಳ ನನಿಗೂ ಗೊತ್ತು ಕನ. ತಿಪಟೂರು ಕೊಪರಿ ಯಾಪಾರಿಗಳ್ಯಲ್ಲ ಅವುನ್‌ತಕ್ಕೆ ಅಲವೆ ಹೋಗದು" ಎಂದು ಸೀರ ಚಿನ್ನಬಸಪ್ಪನೂ ತನಗೆ ಪರಿಚಿತನೆಂಬಂತೆ ಮಾತನಾಡಿದ.

"ಆ ಚಿನಬಸಪ್ಪನಂಗಡಿಲಿ ಸೀರೆ ತಗಂಡು ಲಾರಿಗೆ ತುಂಬಿಕಂಡು ವಂಟದ್ರಂತೆ."

"ಯಾರೂ?"

"ವನ್ನಾಳಿ ಯಮ್ಮೆಲ್ಲೆ ಕಡಿಯೋರು."

"ವನ್ನಾಳಿ ಯಮ್ಮೆಲ್ಲೆ ಅಂದ್ರೆ ಜಯಲಕುಸ್ಮಿ ಪೊಂಡೇನ್ನ?" ಎಂದು ಜುಮ್ಮಿ ನಕ್ಕಳು.

"ಊ ಕಣೆ. ಅವುನ ಕಡಿಯೋರ್ಯಲ್ಲ ವ್ಯಾನು, ಲಾರಿಲಿ ತುಂಬಿಕಂಡು ಹೋಯತ್ತಾಯಿರುವಾಗ ಎಸ್ಪಿ ಸೋನಿಯಾ ನಾರಂಗ್ ಹೋಗಿ ಹಿಡದಾಕ್ಯವುಳೆ."

"ಅವುಳ ಕಣಯ್ಯ ಗಂಡು" ಎಂದ ಕಾಳಮಾವ.

"ಗಂಡೆಯ ಕಣ ಮಾವ. ಅವುಳೆಸುರು ಕೇಳಿದ್ರೆ ರೇಣುಕಾಚಾರಿ ನಿದ್ದೆಲ್ಲೂ ಎದ್ದು ಕೂತಗಂಡು 'ನಾನಲ್ಲ ಮೇಡಂ' ಅಂತನಂತೆ."

"ಅದ್ಯಾಕಂಗಂದನ್ನ?" ಎಂದಳು ಜುಮ್ಮಿ.

"ಸೋನಿಯಾ ನಾರಂಗ್ ಅನ್ನೋಳು ಮದ್ಲು ದಾವಣಗ್ಯರೆ ಪೊಲೀಸ್ ಅಧಿಕಾರಿಯಾಗಿದ್ಲು ಕಣೆ. ಹಿಂದೆ ಹಾಸನದಲ್ಲಿ ಸವಿತಾ ಹಂಡೆ ಅಂತ ಇದ್ದಲ್ಲಾ, ಅವುಳಿಗೋಲಿಸಿದ್ರೆ ಇವುಳು ಕ್ಯಳಗ ಯಾರ್ನು ಮುಲಾಜು ನೋಡದಿಲ್ಲ, ತಗದು ಬುಡತಳಂತೆ. ಅಂಗೆ ಒಂದು ಸತಿಯ ಈ ರೇಣುಕಾಚಾರಿಗೆ ಪಟೀರಂತ ಕನ್ನಿಗೆ ಬುಟ್ಟಿದ್ಲಂತೆ. ಈಗ ಸೀರೆ ಸಮೇತ ತಿರಗ ಅವುಳ ಕೈಗೆ ಸಿಗಬೇಕೆ ಇವುನು?"

"ಸೀರಿಗೂ ರೇಣುಕಾಚಾರಿಗೂ ಆಗದಿಲ್ಲ ಕಣೊ ಉಗ್ರಿ" ಎಂದುಕೊಂಡು ವಾಟಿಸ್ಸೆ ಬಂದ.

"ಯಾಕೆ ಸೀರೆ ಯಾಪಾರದಲ್ಲಿ ಲಾಸಾಗಿದ್ನೆ?" ಎಂದ



ಸೀರ.

"ಅಂಗಲ್ಲ ಚಿಗಪ್ಪ, ಜಗಮಗ ಅನ್ನೋ ಸೀರೆ ಉಟಗಂಡು, ತುಟಿಗೆ ಲಿಪ್‌ಸ್ಟಿಕ್ ಹಚಿಗಂಡು, ವಳ್ಳೆ ಸಿಲ್ಕ್‌ಸ್ಮಿತನಂಗೆ ಕಾಣೊ ಜಯಲಕ್ಷ್ಮಿ ಸವಾಸಿಗೋಗಿ ಸರಿಯಾದವುಮಾನ ಮಾಡಿಸಿಗಂಡ."

"ಅದವು ಮಾನ ಅಂತ ಇವತ್ತಿಗೂ ತಿಳಕಂಡಿಲ್ಲ ಕಣೊ ಅವುನು. ಪ್ರೇಮ ಪ್ರಕರಣ ಅನ್ನಕಂಡವುನೆ, ಇದಕೇನೇಳ್ತಿ?

"ಲ್ಯಕ್ಕ ಹಾಕೊ ಉಗ್ರಿ, ಇನ್ನಂತ ಭಂಡಿದ್ದನವುನು. ಅಮ್ಯಾಲೆ ಸೋನಿಯಾ ನಾರಂಗ್ ಸೀರೆ ಉಡೊ ಹೆಂಗುಸು, ಅವುಳ ಕೈಲೇನಾದತು ಅಂತ ಕ್ಯಟ್ಟ ಮಾತು ಬೋದ. ಅವುಳು ಕರಂಟ್ ಶಾಕ್ ಹ್ವಡದಂಗೆ ಹ್ವಡುದ್ಲು. ಈಗ ಪಾಪ ಸೀರೆ ಹಂಚಕ್ಕೋಗಿ ಸಿಗಾಯ್ಕಂಡವುನೆ" ಎಂದ ವಾಟಿಸ್ಸೆ.

"ಅವುನು ಸೀರೆ ಹಂಚಕ್ಕೋಗಿ ಸಿಗಾಯ್ಕಂಡಿರದು ಅಂತ ಅವುಮಾನಲ್ಲ ಕಣೊ ವಾಟಿಸ್ಸೆ. ಅಂತ ವಾಜಪೇಯಿನೆ ಚುನಾವಣೆಲಿ ಸೀರೆ ಕೊಡಿಸಿದ್ದ. ಜುಜುಬಿ ಐವತ್ತು ರೂಪಾಯಿನ ಸೀರೆ ಈಸಗಳೊ ನೂಕ್ಯಾಟದಲ್ಲಿ ಹತ್ತದನ್ಯೆದು ಜನ ಹೆಂಗುಸ್ರು ಸತ್ತಿದ್ರು. ಜುಜುಬಿ ಐವತ್ತು ರುಪಾಯಿ ಸೀರೆಗೆ ಜೀವನನೆ ಕಳಕೊಂಡ್ರು. ಆಗ ಈ ವಾಜಪೇಯಿ ಏನಂದನಪ್ಪಾ ಅಂದ್ರೇ, 'ಸೀರೆ ಹಂಚಿದ್ದು ತಪ್ಪಲ್ಲ, ಹಂಚೊ ಕ್ರಮದಿಂದ ಜನ ಸತ್ತರು. ಸಾಯಬಾರದಿತ್ತು' ಅಂದ. ಅಗೋ ನೋಡವತ್ತಿನಿಂದ ಅಂತ ವಾಜಪೇಯಿನೆ ಸೀರೆ ಹಂಚಿದ ಅಂದಮ್ಯಾಲೆ ನಾವೂ ಹಂಚಬೇಕು ಅಂತ ಬಿಜೆಪಿಗಳು ಸೀರೆ ಕೊಡ್ತ ಅವುರೆ. ಸೀರೆ ಈಸಗಂಡ ಹೆಣ್ಣಮಗಳು ಓಟಾಕದೆ ಇದ್ದಳೆ?"

ಗಾಣಿಗಗಿತ್ತಿ ಅಯ್ಯೋ ಅಂದರೆ.....

ಒಂದು ರಾಜ್ಯ. ಅಲ್ಲಿ ಒಬ್ಬ ಭಟ್ಟಂಗಿ. ಕಾಕಾಪುಡಿ ಹಿಡಿದೇ ಪಕ್ಷದ ಟಿಕೇಟು ಪಡೆದುಕೊಂಡ. ಚುನಾವಣೇಲಿ ಗೆದ್ದೂ ಬಿಟ್ಟ, ಮಂತ್ರಿಯೂ ಆಗಿಹೋದ. ಈ ಕಾಲದ ರಾಜಕೀಯದ ರೀತಿರಿವಾಜುಗಳನ್ನು ಅರೆದು ಕುಡಿದಿದ್ದ. ಸಮಯಕ್ಕೆ ಬೇಕಾಗುತ್ತೆ ಅಂತ ವಿರೋಧಿಗಳ ಜೊತೇನೂ ಸರಸ ಸಲ್ಲಾಪ ಮಾಡುತ್ತಿದ್ದ. ಇದು ಮುಖ್ಯಮಂತ್ರಿಗೆ ತಿಳೀತು. ಅವನ್ನ ಮಂತ್ರಿಮಂಡಲದಿಂದ ಕಿತ್ತು ಬಿಸಾಕಬೇಕು ಅಂದುಕೊಂಡ. ತನ್ನಿಷ್ಟದಂತೆ ನಡೆಯೋಕೆ ಹೈಕಮಾಂಡು ಅಂತ ಒಂದಿತ್ತಲ್ಲ, ಅದರ ಅಪ್ಪಣೆ ಪಡೀಬೇಕು. ಮಂತ್ರಿ ಮಾಡುತ್ತಿದ್ದ ಕುತಂತ್ರಗಳನ್ನೆಲ್ಲ ವರದಿ ಒಪ್ಪಿಸಿದ. ಹೈಕಮಾಂಡ್‌ನ ಒಪ್ಪಿಗೆಯೂ ಸಿಕ್ಕಿತು. ತನ್ನನ್ನು ಕಿತ್ತೊಗೀತಾರೆ ಅನ್ನೋದರ ಸುಳಿವು ಸಿಕ್ಕಿದ ತಕ್ಷಣ ಈ ಮಂತ್ರಿ ದೆಹಲಿಗೆ ಹಾರಿದ. ರಾಜೀವ್ ಗಾಂಧಿಯವರ ಹತ್ತಿರ ತನ್ನ ಅಹವಾಲು ಒಪ್ಪಿಸಲು ಸಮಯ ಪಡೆದುಕೊಂಡ. ವೇಳೆಗೆ ಸರಿಯಾಗಿ ಅವರ ಆಂಟಿಚೇಂಬರಿನಲ್ಲಿ ಕಾಯುತ್ತಾ ಕುಳಿತ. ಅವನ ಹಾಗೇ ರಾಜೀವ್‌ಗಾಗಿ ಕಾಯುತ್ತಾ ಹಲವಾರು ಜನರು ಇದ್ದರು. ಸ್ವಲ್ಪ ವೇಳೆ ಕಳೆಯಿತು. ರಾಜೀವ್ ಗಾಂಧಿ ಬಂದರು. ಅವರು ಒಳಕ್ಕೆ ಕಾಲಿಡುತ್ತಿದ್ದ ಹಾಗೆ ಮಾಜಿ ಆಗುವ ಮಂತ್ರಿ ದಢಕ್ಕನೆ ಎದ್ದು ಅವರ ಮುಂದಕ್ಕೆ ಹಾರಿಹೋದ. ಅವರ ಎದುರೇ ತನ್ನ ಮುಂಗೈಯನ್ನು ಬ್ಲೇಡಿನಲ್ಲಿ ಕುಯ್ಕೊಂಡ.... ತನ್ನ ದೇಹದಿಂದ ಹೊರಬಂದ ರಕ್ತಾನ ಹೆಬ್ಬೆರಳಿಗೆ ಹಚ್ಚಿಕೊಂಡು, ರಾಜೀವ್ ಗಾಂಧಿಯವರ ಹಣೆಗೆ ರಕ್ತದ ಬೊಟ್ಟು ಇಟ್ಟು-'ನಾನು ಪಕ್ಷಕ್ಕೆ ನಿಷ್ಠನಾಗಿದ್ದೇನೆ ಎಂಬುದಕ್ಕೆ ಇದೇ ಸಾಕ್ಷಿ' ಅಂತ ಸಾರಿದ. ಆ ನಿಷ್ಠಾವಂತನ ಕುರಿತು ರಾಜೀವ್ ಏನು ಅಭಿಪ್ರಾಯ ಮೂಡಿಸಿಕೊಂಡರೋ ಗೊತ್ತಿಲ್ಲ. ಆದರೆ... ಅವತ್ತೇ ಮಧ್ಯಾಹ್ನ ಈ ನಿಷ್ಠಾವಂತ ಪಕ್ಷ ಬದಲಾಯಿಸಿದ್ದ!



ಖುಷ್ವಂತ್ ಸಿಂಗ್ ಅವರು 'ನಿಷ್ಠಾ ವಂತ'ರ ಬಗ್ಗೆ ನೀಡಿರುವ ಉದಾಹರಣೆಯಿದು. ಈಗ ಇದನ್ನು ಯಾಕೆ ಇಲ್ಲಿ ಹೇಳಬೇಕಾಯಿತು ಅಂದರೆ ಘಟಾನುಘಟಿ ಮುದಿ ನಾಯಕರುಗಳಲ್ಲಿ 'ರಾಹುಲ್ ಗಾಂಧಿ ಮುಂದಿನ ಪ್ರಧಾನಿ' ಅಂತ ಕೂಗಾಡುತ್ತಾ ನೆಹರೂ ಮನೆತನದ ಚೇಲಾಗಳಾಗಲು ಮುಗಿ ಬೀಳ್ತಿದ್ದಾರಲ್ಲಾ... ಅವರೂ ಏನಾದರೂ ನಮ್ಮ 'ನಿಷ್ಠಾವಂತ ಮಂತ್ರಿ' ತರಹ ಪಕ್ಷ ಬದಲಾಯಿಸುವ ತರಾತುರಿಯಲ್ಲಿದ್ದಾರಾ ಅಂತ!

ಈ ವಲಸಿಗರೂ ಅಷ್ಟೇನೆ. ಬೇರೆ ಪಕ್ಷಗಳಿಂದ ತಮ್ಮ ಪಕ್ಷದತ್ತ ಹಾರಿ ಬರುವ ನಾಯಕಮಣಿಗಳನ್ನೆಲ್ಲ, ಅವರ ಕಲ್ಯಾಣಗುಣಗಳನ್ನೆಲ್ಲ ಹಾಡಿಹೊಗಳಿ ಬರಮಾಡಿ ಕೊಳ್ತಿದಾರಲ್ಲಾ... ಇಂತಹವರೊಡನೆ ನಿಂತು ಪಕ್ಷದ ವರಿಷ್ಠರು ಒಟ್ಟಿಗೇ ಒಂದೇ ಹಾರ ಹಾಕಿಕೊಂಡು ಬೀಗ್ತಿದಾರಲ್ಲ... ಈ ಸ್ನೇಹದ ಆಯಸ್ಸೂ 'ನಿಷ್ಠಾವಂತ ಮಂತ್ರಿ'ಯ 'ನಿಷ್ಠೆ'ಯಷ್ಟೇನಾ ಅಂತ!

****

ಚುನಾವಣಾ ಅಭ್ಯರ್ಥಿಗಳ ಪಟ್ಟಿ ಪ್ರಕಟ ಆಗಿದೆ.

ಸೀಟು ಸಿಗದವರಿಂದ ಬಂಡಾಯ. ವರಿಷ್ಠರ ಮೇಲೆ ಆಕ್ರೋಶ, ದೂರುಗಳ ಸುರಿಮಳೆ.

'ಹೊರಗಿನವರನ್ನು ಹೇರಲಾಗಿದೆ'

'ಸ್ಥಳೀಯರನ್ನು ಕಡೆಗಣಿಸಲಾಗಿದೆ'

'ನಿಷ್ಠಾವಂತರಿಗೆ ಸ್ಥಾನ ನೀಡಿಲ್ಲ'

'ವಲಸಿಗರಿಗೆ ಪ್ರಾತಿನಿಧ್ಯ ನೀಡಲಾಗಿದೆ'

'ಹಣ ಪಡೆದು ಟಿಕೆಟು ಹಂಚಲಾಗಿದೆ'

ಹೀಗೆ ನೂರೆಂಟು.

ಇದರಲ್ಲಿ ಯಾವುದು ಸತ್ಯ? ಯಾವುದು ಸುಳ್ಳು?

ಸುಷ್ಮಾ ಸ್ವರಾಜ್ ಸ್ಪಷ್ಟವಾಗಿ ಹೇಳಿದ್ದಾರೆ-'ಅಭ್ಯರ್ಥಿಗಳ ಆಯ್ಕೆ ಪಾರದರ್ಶಕವಾಗಿದೆ. ಹಣದ ವ್ಯವಹಾರ ನಡೆದಿಲ್ಲ.'

ಶಂಖದಿಂದ ಬಂದ ತೀರ್ಥ. ಆಯ್ತಲ್ಲ.

ಉಹುಂ, ಇದರಲ್ಲಿ ಹಲವರಿಗೆ ನಂಬಿಕೆ ಬರುತ್ತಿಲ್ಲ.'ಇಲ್ಲಿ ಹಣ ಪಡೆದದ್ದು ಅವರಿಗೆ ಹೇಗೆ ತಿಳಿಯುತ್ತೆ' ಎಂಬ ಮರುಪ್ರಶ್ನೆ.

ಅರೆ ಇದು ಎಂತಹ ಸಂಶಯ ಪ್ರವೃತ್ತಿ? ರಾಜಕೀಯ ಪಕ್ಷಗಳ ಆಂತರಿಕ ವ್ಯವಹಾರದ ಗುಟ್ಟು ಗೊತ್ತಿಲ್ಲದವರ ಹೇಳಿಕೆ ಇದು. ಕೆಳಹಂತದಲ್ಲಿ ಪಡೆದ ಹಣ ಮೇಲಿನ ಹಂತದವರಿಗೂ ಹೋಗಿ ತಲುಪಬೇಕು. ಇದು ಪಕ್ಷಗಳ ಅಲಿಖಿತ ನಿಯಮ. ಸುಷ್ಮಾಗೆ ಹಣ ತಲುಪಿಲ್ಲ ಅಂದರೆ ಕೆಳಹಂತದ ನಾಯಕರು ಲಂಚ ಪಡೆದಿಲ್ಲ!

ಈ ವಾದವನ್ನು ಟಿಕೆಟು ಪಡೆಯದವರು ಒಪ್ಪಲು ಸಿದ್ಧರಿಲ್ಲ.'ಹಣ ತೆಗೆದುಕೊಂಡಿರುವುದು ಸತ್ಯ. ಮೇಲಿನವರಿಗೆ ತಲುಪಿಲ್ಲ ಅಂದರೆ ಅವರಿಗೂ ಮೋಸ ಮಾಡಿದ್ದಾರೆ. ನಾಯಕ ನಿಷ್ಠೆಯೂ ಇಲ್ಲ' ಎನ್ನುತ್ತಾರೆ.

ಇದು ಹಾಳಾಗಲಿ. ಹಣ ನೀಡೇ ಪಕ್ಷದ ಟಿಕೆಟು ಪಡೆದರು ಅಂದೇ ತಿಳಿಯೋಣ.. ಲಕ್ಷ, ಕೋಟಿಗಟ್ಟಲೆ ಹಣ ಸುರಿದು ಟಿಕೆಟು ಪಡೆದು ಚುನಾವಣೆಯಲ್ಲಿ ಬೆವರು ಸುರಿಸಿದರು ಅಂದುಕೊಳ್ಳೋಣ. ಅಂತಹವರು ಗೆಲ್ಲುತ್ತಾರೆ ಅನ್ನುವ ಖಾತರಿ ಏನು? ಇದರ ಬದಲಿಗೆ ಇದೇ ಹಣ ನೀಡಿ ಗೆದ್ದ ಅಭ್ಯರ್ಥಿಯನ್ನೇ ಸಾರಾಸಗಟಾಗಿ ಕೊಂಡುಕೊಂಡರಾಗದೆ?

ಇದಕ್ಕೆ ಬರುವ ಉತ್ತರ ಗೊತ್ತೆ?

ಚುನಾವಣೆಯಲ್ಲಿಯೇ ಹಣ ಮಾಡುತ್ತಾರಂತೆ!

ಅದು ಹೇಗೆ ಅಂದರೆ....

ಚುನಾವಣೆಯಲ್ಲಿ ಮೂರು ಪ್ರಮುಖ ಪಕ್ಷಗಳಿವೆ ಎಂದು ಭಾವಿಸುವ. ಒಂದು ಪಕ್ಷದ ಅಭ್ಯರ್ಥಿ ಹಣದ ಗಿರಾಕಿ. ಇನ್ನೆರಡು ಪಕ್ಷಗಳ ನಡುವೆ ತೀವ್ರ ಹೋರಾಟ, ಫಲಿತಾಂಶ ಹಣದ ಗಿರಾಕಿಯ ಮೇಲೆ! ಇವನು ತೀವ್ರವಾಗಿ ಪ್ರಚಾರ ನಡೆಸಿದರೆ ಒಂದು ಪಕ್ಷಕ್ಕೆ ಲಾಭ! ಮಾಡದೇ ಇದ್ದರೆ ಇನ್ನೊಂದು ಪಕ್ಷಕ್ಕೆ ಮೇಲುಗೈ!

ಈ ಹಣದ ಗಿರಾಕಿ ಏನು ಮಾಡ್ತಾನೆ?

ಒಂದು ಪಕ್ಷದ ಅಭ್ಯರ್ಥಿಯ ಬಳಿಗೆ ಹೋಗುತ್ತಾನೆ. ಆದರದ ಸ್ವಾಗತ ಸಿಗುತ್ತೆ. ಒಂದು ಕೋಣೆಯಲ್ಲಿ ಇಬ್ಬರೂ ಸೇರುತ್ತಾರೆ. ಮಾತುಕತೆ ನಡೆಯುತ್ತಾ ಕೊನೆಯಲ್ಲಿ ಇವ ಹೇಳ್ತಾನೆ 'ನಾನು ಹೆಸರಿಗೆ ಮಾತ್ರ ಸ್ಪರ್ಧೆಯಲ್ಲಿರುತ್ತೇನೆ.', 'ಅಷ್ಟು ಮಾಡಿ ಪುಣ್ಯ ಕಟ್ಟಿಕೋ, ಸಾಯೋತನಕ 'ನಿನ್ನ ಉಪಕಾರ ಮರೆಯಲ್ಲ' ಅಂತಾನೆ ಅವ. 'ಹಂಗೆ ಮಾಡಬೇಕಾದರೆ ಇಷ್ಟು ಕೊಡಬೇಕು' ಅಂತಾನೆ ಇವ. ಎಷ್ಟು ಅನ್ನುವುದು ಇವನು ಟಿಕೆಟು ಪಡೆಯಲು ನೀಡಿರುವ ಹಣ ಆಧರಿಸಿರುತ್ತೆ. ಚೌಕಾಸಿಗೀವ್ಯಾಸಿ ನಡೆಯುತ್ತೆ. ವ್ಯವಹಾರ ಕುದುರುತ್ತೆ. 'ನಮ್ಮಿಬ್ಬರಲ್ಲೇ ಇರಲಿ' ಅಂತಾನೆ ಇವ.'ಆಗಲಿ' ಅಂತಾನೆ ಅವ.

ಇನ್ನು ಟ್ರಾನ್ಸ್‌ಪರ್ ಸೀನರಿ.

ಇನ್ನೊಂದು ಪಕ್ಷದ ಅಭ್ಯರ್ಥಿಯ ಸಂಗಡ ಇದೇ ರೀತಿಯ ವ್ಯವಹಾರ. 'ತೀವ್ರವಾಗಿ ಪ್ರಚಾರ ಮಾಡಿ ಅವನ ಓಟು ಕೀಳ್ತೀನಿ' ಅಂತಾನೆ ಇವ. 'ಅಷ್ಟು ಮಾಡು' ಅಂತಾನೆ ಅವ! ಅಲ್ಲಿಯೂ ವ್ಯವಹಾರ ಕುದುರುತ್ತೆ. 'ನಮ್ಮಿಬ್ಬರಲ್ಲೇ ಇರಲಿ' ಅಂತಾನೆ ಇವ. 'ಹೂಂ' ಅಂತಾನೆ ಅವ!

ಫಲಿತಾಂಶ-ಹಣದ ಗಿರಾಕಿಗೆ ಲಾಭ!

ಪೇಮೆಂಟ್ ಸೀಟಿನ ವಿಚಾರ ಇದಾಯಿತಲ್ಲ... ಮಹಿಳಾ ಮೀಸಲಾತಿಗೆ ಬರೋಣವಂತೆ. ಶೇಕಡಾ 33ರಷ್ಟು ಮಹಿಳಾ ಅಭ್ಯರ್ಥಿಗಳಿಗೆ ಸೀಟು ನೀಡಲಾಗಿಲ್ಲವಲ್ಲ ಅಂತ ಸುಷ್ಮಾ ಸ್ವರಾಜ್ ಬಹಳವಾಗಿ ನೊಂದು ಕೊಂಡಿದ್ದಾರೆ. ಗಾಣಿಗಗಿತ್ತಿ ಅಯ್ಯೋ ಅಂದರೆ ನೆತ್ತಿ ತಣ್ಣಗಾಗುತ್ತಾ ಅನ್ನುವ ಗಾದೆ ಮಾತು ನೆನಪಾಗಬಹುದು ಇರಲಿ.

'ಆಯ್ಕೆ ಪಾರದರ್ಶಕವಾಗಿದೆ' ಎಂದರು ಸದಾನಂದಗೌಡರು.

ಇರಬೇಕು. ಆದರೆ 'ಪಾರದರ್ಶಕ' ಅಂದರೇನು? ಅವರ ಗುಂಪಿನ ನಡುವೆ ನಡೆದ ಸಮಾಲೋಚನೆಗೆ ಈ

ಅಣಕ
■ ಎಚ್. ಎಲ್. ಕೇಶವಮೂರ್ತಿ

ಪದ ಬಳಸಿರಬಹುದು! ಈ ಪಾರದರ್ಶಕತೆಯೇ ಶಕುಂತಲಾಶೆಟ್ಟಿ ಟಿಕೆಟು ವಂಚಿತರಾಗಲು ಕಾರಣ ಆಗಿರಬಹುದು! ಯಡಿಯೂರಪ್ಪ ಹಾಗಲ್ಲ ಬಿಡಿ. ಎಲ್ಲೋ ಇದ್ದ ಶೋಭಾ ಕರಂದ್ಲಾಜೆ ತಂದು ಬೆಂಗಳೂರಿನ ಕ್ಷೇತ್ರದಲ್ಲಿ ಕುಳ್ಳಿರಿಸಿದ್ದಾರೆ. ಯಾಕೆ ಹಾಗೆ ಮಾಡಿದರು ಯಡ್ಡಿ? ಮಹಿಳೆಯರಿಗೆ ಆದ್ಯತೆ ನೀಡಲು! ಅಷ್ಟು ಮಾತ್ರ ಅಲ್ಲ, ಅವರೇ ಹೇಳಿದ್ದಾರೆ- 'ನೂರಕ್ಕೆ ನೂರು ಗೆಲ್ಲುವ ಅಭ್ಯರ್ಥಿ ಆಕೆ!'

ಹಾಗಾದರೆ ಶಕುಂತಲಾ ಶೆಟ್ಟಿ ಏನು?

ಸೋಲುವ ಅಭ್ಯರ್ಥಿ!

ಇದನ್ನು ಅರ್ಥ ಮಾಡಿಕೊಳ್ಳಲಾಗದ ಕೆಲವು ಮೂರ್ಖರು ಬಿಜೆಪಿ ಅಧಿಕಾರಕ್ಕೆ ಬಂದೇಬಿಟ್ಟರೆ(!) ಇವರು ಇಬ್ಬರು ಮಹಿಳಾ ಅಭ್ಯರ್ಥಿಗಳು ಗೆದ್ದೇಬಿಟ್ಟರೇ(!) ಮಂತ್ರಿ ಸ್ಥಾನ ಯಾರಿಗೆ ನೀಡಬೇಕು... ಹಿರಿತನದ ಆಧಾರದ ಮೇಲೆ ಶಕುಂತಲಾ ಶೆಟ್ಟಿಗೆ ತಾನೆ.., ಆಗ ಯಡಿಯೂರಪ್ಪನವರ ಸ್ಥಿತಿ ಚಿಂತಾಜನಕ ಆಗೋಗುತ್ತೆ.. ಶೋಭಾನ ಕೈಬಿಡೋದು ಅಂದರೆ ಸಂಕಟ ಆಗುತ್ತೆ. ಅದಕ್ಕೆ ಇವೆಲ್ಲ ಅಂತ ಎಲುಬಿಲ್ಲದ ನಾಲಗೇಲಿ ಏನೇನೋ ಒದರ್ತಾರೆ!

"ಅಂತೂ ನಮ್ಮ ಹೆಂಗುಸರನ ಹಕ್ಕಿಪಿಕ್ಕರ ಹೆಂಗುಸರ ತರ ಮಾಡಿಬುಟ್ರು ಈ ಸೂಳೆಮಕ್ಕಳು" ಎಂದ ಉಗ್ರಿ.

"ಹಕ್ಕಿಪಿಕ್ಕರೇನೂ ಬುಡುಬುಡುಕ್ಕೊರೇನು ಸೀರಿಲ್ಲೋಳ್ಕಲ್ಲ ಕೈಯೊಡ್ಡತರ ...ತ್ವೆ" ಎಂದಳು ಜುಮ್ಮಿ.

"ಏ ಇದ್ದೋಳು ಕೈಯೊಡ್ಡತಳೆ ಗೊತ್ತೆ, ಆ ಬಳ್ಳಾರಿಲಿ ದುಡ್ಡು ಕಾಸು ...ೂ ಶ್ರೀಮಂತರೆ ಯಲಕ್ಷನ್ನಿಗೆ ನಿಂತು ಓಟು ಕೇಳಕ್ಕೆ ಬರೋರು ಕೊಡೊ ...ದ ಲೈಟುಬಲ್ಬು ಕಟ್ಕಕೋ, ಅಥವಾ ಟೆಲಿಫೋನ್ ಬಲ್ಲಿಗೊ, ಇಲ್ಲ ಟಿ.ವಿ. ...ನೋನು ಬಂದಾಗ ಕೊಡಕ್ಯಾಯ್ತದೆ ಅಂತ ಈಸಿ ಮಡಿಕಂದರಂತೆ. ...ರಕ್ಕೇನೇಳ್ತೀ?"

"ನೋಡಪ್ಪ, ಬಡುವುರು ಮಾಡೋದು ವಟ್ಟೆಪಾಡಿಗೆ, ಈ ಶ್ರೀಮಂತ್ರ ...ಾಡಿದು ಅವ್ರುಸ್ತಿಗೆ ಅಂದಂಗಾಯ್ತು, ಏನೇ ಆಗ್ಲಿ ಓಟಿಗೆ ಬ್ಯಲೆಕಟ್ಟಬಾರ್ದು, ...ದ ಮಾರಿಕಳ್ಳೂಬಾರ್ದು ಕಂಢ್ಯ ಉಗ್ರಿ" ಎಂದ ಕಾಳಮಾವ.

"ಆ ಕಾಂಗ್ರೆಸ್ ಬಡ್ಯತ್ತವೇನೊ ಸರಾಪು ಕುಡಿಯಕ್ಕೆ ಅಂತ ಕಾಸು ...ಟ್ಟು ಓಟು ಕೇಳವು. ಆದ್ರೆ ಈ ಬಜೆಪಿ, ಜೆಡಿಎಸ್‌ನೋರು ಕೇಳಿದ್ದನ್ಯಲ್ಲ ...ಡ್ತರಲ್ಲಾ? ಇನ್ನೇಟು ದುಡ್ಡಿದ್ದತು ಇವುರತ್ರ ಅಂತ?" ಎಂದ ಸೀರ.

"ದುಡ್ನ ಖರ್ಚು ಮಾಡಕ್ಕೇ ಆಗದಿಲ್ಲ ಕಣ ಮಾವ, ಆಟು ದುಡ್ಡದೆ. ...ಗ ನೀನ್ಯಂಗೇ ಕರ್ಚು ಮಾಡಿದ್ರು ಐದು ಕೋಟಿಲಿ ಚುನಾವಣೆ ಮುಗಿತದೆ ...ಮ್ನಿ. ಹತ್ತು ಕೋಟಿ ತಂದವುರಪ್ಪ"

"ಐದು ಕೋಟಿ ಅಂದ್ರೇನಾಯಿತ್ಲ? ಕ್ಯಂಗಲ್ ಹನುಮಂತಯ್ಯ ಇದಾನಸೌದ ...ಟ್ಟಿದ್ದು ಆಟೇ ದುಡ್ಡಲ್ಲಿ ಕಂಢ್ಯ ಉಗ್ರಿ" ಎಂದ ಕಾಳಮಾವ.

"ಎಜ್ಜಾಟ್ಟ ಕರಟ್ ದ್ವಡಪ್ಪ, ಈ ಪೂಲಿಷ್ ಫೆಲೋಗಳು ಖರ್ಚು ...ಾಡೊ ದುಡ್ಡನ್ಯಲ್ಲ ಲ್ಯಕ್ಕ ತಗಂಡು, ಟೋಟ್ಲು ಮಾಡಿದ್ರೆ, ಇಡೀ ಕರ್ನಾಟಕದ ...ಲ್ಲಾ ಪ್ರಾಬ್ಲಮ್ಮನೂ ಸಾಲೂ ಮಾಡಬವುದು. ರಿಯಲಿ ಇವುರತ್ರ ಇರೋ ...ಡ್ಡು ಸರ್ಕಾರದ ಖಜಾನೆಲಿ ಇರಬೇಕಾದ ದುಡ್ಡು ದ್ವಡಪ್ಪ, ಇವುರ ...ಬಲ್ಲದೆ ವಳ್ಗೆ ಜನ ಅಂತ ಹತ್ತು ಜನ ಇದ್ರು ಏನಾರ ಮಾಡಬವುದಾಗಿತ್ತು. ... ಕಡೆ ಗಣಿ ರೆಡ್ಡಿಗಳು, ಈ ಕಡೆ ದೇವೇಗೌಡನ ಕಡೆ ಕೇಡಿಗಳು, ಇವುರ ...ುವೆ ಬೀಜ ಹ್ವಡದಿರೊ ಎತ್ತಿನಂಗೆ ಕಾಣೊ ಕಾಂಗ್ರೆಸ್‌ನವ ನೋಡಿದ್ರೆ ...ಪ ಅನ್ನುಸ್ತಾ ಅದೆ. ಪೂರ್ ಫೆಲೋಗಳು, ಪವರ್‍ರಿಗೆ ಬರದು ಭಾಳ ಕಷ್ಟ ...ನ್ನಸ್ತಾ ಅದೆ" ಎಂದುಕೊಂಡು ವಾಟಿಸ್ಸೆ ಹೊರಟ.

"?!'

...ಮಹಿಳಾ ಮೀಸಲಾತಿ ಬಗ್ಗೆ ಯಾವತ್ತೂ ತಲೆ ಕೆಡಿಸಿಕೊಳ್ಳದೇ ಇದ್ದರೂ ...ರ ಕ್ಷೇಮ ಕುರಿತು ರಾಜಕಾರಣಿಗಳಿಗೆ ದಿಢೀರ್ ಕಾಳಜಿ ಬಂದು ...ತ್ತೆ. ಹಿಂದಿನ ಚುನಾವಣೆಗಳಲ್ಲಿ ಅಲ್ಲಿ ಸಾರಾಯಿ ಲಾರಿ ಹಿಡಿದರು, ಇಲ್ಲಿ ...ನಲ್ಲಿ ತರುತ್ತಿದ್ದ ಸಾರಾಯಿ ಮುಟ್ಟುಗೋಲು ಹಾಕಿಕೊಂಡರು ಅಂತ ...ಸ್ತಾ ಇದ್ವೋ. ಈಗ ನೋಡಿದರೆ ಅಲ್ಲಿ ಸೀರೆ ಬಂಡಲ್ ಹಿಡಿದರು, ಇಲ್ಲಿ ...ರೆಗಳು ತುಂಬಿದ ವ್ಯಾನು ಸಿಗಾಕಿಕೊಂಡ್ತು ಅನ್ನೋ ಸುದ್ದೀನೆ ಬಹಳ ...ುತ್ತಿದೆ. ಇಷ್ಟು ಮಾತ್ರ ಅಲ್ಲ, ಕೆಲವು ಕಡೆ ನೂರಾರು ಬಸ್ಸುಗಳಲ್ಲಿ ...ಗಸರನ್ನು ದೇವರ ದರ್ಶನಕ್ಕೆ ಅಂತ ತೀರ್ಥ ಯಾತ್ರೆಗೆ ಕರೆದುಕೊಂಡು ...ೀಗ್ತಿದ್ದಾರೆ. 'ಏನೋ ಪುಣ್ಯಾತ್ಮ ದೇವರ ದರ್ಶನನಾದರೂ ಮಾಡಿಸಿದ, ...ೂ ಬ್ಯಾಡ ಅನ್ನೋದು ಯಾವ ಸೀಮೆ ನ್ಯಾಯ' ಅಂತ ಮಹಿಳೆಯರು ...ುರಿಕೊಂಡಾರು ಅಂತಾನೋ ಏನೋ ಯಾರೂ ಇದನ್ನು ತಡೆಯೋಕೆ ...ಂದೆ ಬಂದಹಾಗೆ ಇಲ್ಲ! ಹೋಗೋರು ಹೋಗ್ತಾರೆ, ಪಾಪ ಬಡವರು, ...ದು ಚೆಂದುಳ್ಳಿ ಸೀರೆನಾದರೂ ಉಟ್ಟುಕೊಂಡು ಹೋಗಲಿ ಅಂತ ಸೀರೆ ...ನ ಮಾಡಿದರೆ ಅದನ್ನೆ 'ನೀತಿ ಸಂಹಿತೆ ಉಲ್ಲಂಘನೆ' ಅನ್ನೋ ಹೆಸರಿನಲ್ಲಿ ...ಕುಳ ನೀಡ್ತಿದ್ದಾರಲ್ಲ ಅಂತ ಯಾರೂ ಗೊಣಗಿದ್ದು ತಿಳಿದು ಬಂದಿಲ್ಲ.

ಸೀರೆ ಗಿಮಿಕ್!

...ಸೀರೆಗಳ ಮುಟ್ಟುಗೋಲು!

...ಯಾರ ಸೀರೆಗಳು ಅವು?

...ಭಾಜಪ ಸೀರೆಗಳು, ಜೆಡಿಎಸ್ ಸೀರೆಗಳು!

...ಕಾಂಗ್ರೆಸ್ ಸೀರೆಗಳು ಇಲ್ಲವೆ?

...ಅವು ಟಿಕೆಟು ಕಾಯುತ್ತಾ ಇದಾವೆ!

...ಈ ಸೀರೆಗಳನ್ನು ಹಂಚಲು ತಂದದ್ದು ಯಾವ ಪಕ್ಷ?

...ಯಾವ ಪಕ್ಷಾನೂ ಅಲ್ವಂತೆ! ಇವರಿಗೆ ಕೆಟ್ಟ ಹೆಸರು ತರಲು ಅವರು, ...ರಿಗೆ ಕೆಟ್ಟ ಹೆಸರು ತರಲು ಇವರು ಬೇಕೆಂದೇ ಸೀರೆ ತಂದು ...ಕಿಕೊಂಡರಂತೆ!

...ಭಾರತೀಯ ನಾರಿಯ ಅತ್ಯುತ್ತಮ ಉಡುಪು ಸೀರೆ ಅಂತೆ. ಸುಷ್ಮಾ ...ಜ್ ನೋಡಿ. ಸೀರೆ ತೊಟ್ಟು ಎಷ್ಟು ಅದ್ಭುತವಾಗಿ ಭಾಷಣ ಬಿಗಿದರು!

...ಪತ್ರಿಕೆಗಳಲ್ಲಿ ಪ್ರಶಂಸೆ!

...ಯಾತಕ್ಕಾಗಿ ಇದು!

...ಕನ್ನಡದಲ್ಲಿ ಭಾಷಣ ಆರಂಭಿಸಿದ್ದಕ್ಕೆ!


...'ನನಗೆ ಕನ್ನಡ ಬರುವುದಿಲ್ಲ, ಹಿಂದಿಯಲ್ಲಿ ಮಾತನಾಡುತ್ತೇನೆ ಅದಕ್ಕಾಗಿ ... ಕೋರುತ್ತೇನೆ' ಅಂದರಂತೆ. 'ಮೂರು ವರ್ಷ ಸಮಯ ನೀಡಿ. ಕನ್ನಡ ...ಿ ಕನ್ನಡದಲ್ಲಿಯೇ ಮಾತನಾಡುತ್ತೇನೆ' ಅಂತಾನೂ ವಾಗ್ದಾನ ಮಾಡಿದರಂತೆ. ...ಿಕೆಗಳಲ್ಲಿ ರಾರಾಜಿಸಿತು ಈ ಮಾತು.

...1999ರ ಸಂಸತ್ ಚುನಾವಣೆ. ಸುಷ್ಮಾ ಬಳ್ಳಾರಿಯಲ್ಲಿ ಭಾಜಪ ಅಭ್ಯರ್ಥಿ. ...ನಿಯಾ ಕಾಂಗ್ರೆಸ್ ಅಭ್ಯರ್ಥಿ. ಈ ಸೋನಿಯಾ ಒಂದು ಮಾತೂ ...ಡದಲ್ಲಿ ಆಡಲಿಲ್ಲ, ಆದರೆ ಸುಷ್ಮಾ? ಹಿಂದಿಯಲ್ಲೇ ಬರೆದುಕೊಂಡು ... ಪದ ಉದುರಿಸಿದರು!

...ಪತ್ರಿಕೆಗಳು ಪ್ರಕಟಿಸಿದವು-'ಸುಷ್ಮಾ ಅವರಿಂದ ಕನ್ನಡದಲ್ಲಿ ಭಾಷಣ!' ...ರ್ಕರು ತಮ್ಮ ಪತ್ರಿಕೆ ಹಿಂದೆ ಏನು ಬರೆದಿತ್ತು ಅಂತ ಓದಿದ್ದರೆ.... ...ಷ್ಟ ಗಿಮಿಕ್ ಬಯಲಾಗುತ್ತಿತ್ತು!


ಕೃತಕ ಯೋಚನೆ

ಮರೆಯುವ ಮುನ್ನ



ಪಿ. ಲಂಕೇಶ್ ಜುಲೈ 15, 1990

ಮನುಷ್ಯ ತೀರಾ ಆಸೆಬುರುಕ-ಒಮ್ಮೆ ವಿದ್ಯುತ್ ಕಂಡುಹಿಡಿದೊಡನೆ ಸಾವಿರಾರು ಸಂಶೋಧನೆಗಳಾದವು. ಲಕ್ಷಾಂತರ ವಿದ್ಯುತ್ ಬಳಕೆಯ ಯಂತ್ರಗಳು, ಸಿನಿಮಾ, ಟಿ.ವಿ. ಫೋನ್, ಎಲೆಕ್ಟ್ರಾನಿಕ್ ವಸ್ತುಗಳು, ಕಂಪ್ಯೂಟರ್‌ಗಳು ಎಲ್ಲ ಬಂದವು. ಯಂತ್ರ ನಡೆಸಬಲ್ಲ ರೋಬೋಟ್‌ಗಳು ಸಿದ್ಧವಾದವು. ಪ್ರಾಣಿಗಳ, ಸಸ್ಯಗಳ ತಳಿಗಳನ್ನೇ ಬದಲಾಯಿಸುವ ವೈಜ್ಞಾನಿಕ ಸಂಶೋಧನೆಗಳಾದವು.ಈಗ ಮನುಷ್ಯನ ತಳಿಯನ್ನೇ ಬದಲಿಸುವ ಉಪಾಯಗಳಿವೆ.



ಇತ್ತೀಚಿನ ಸಂಶೋಧನೆ ಸೂಪರ್ ಕಂಡಕ್ಟರ್‌ಗಳು ಮತ್ತು ಕೃತಕ ಮಿದುಳುಗಳು. ಕೃತಕ ಮಿದುಳನ್ನು ತಯಾರಿಸಿ ಮನುಷ್ಯನನ್ನು ಮೀರಿಸಿ ಯೋಚಿಸುವ ಉಪಾಯಗಳಾಗಿ ಸಂಶೋಧನೆ ನಡೆದು ದೊಡ್ಡ ವಿವಾದವೇ ಎದ್ದಿದೆ. ಕೆಲವರು ವಿಜ್ಞಾನಿಗಳು ಕೃತಕ ಮಿದುಳು ತಯಾರಿಸುವುದು ಸಾಧ್ಯ ಎಂದು ವಾದಿಸಿ ಸಂಶೋಧನೆ ನಡೆಸುತ್ತಿದ್ದಾರೆ; ಪ್ರತಿಭಾವಂತ ವಿಜ್ಞಾನಿಯಾದ ಇಂಗ್ಲೆಂಡಿನ ರೋಜರ್ ಪೆನ್‌ರೋಜ್ ಕೃತಕ ಮಿದುಳು ತಯಾರಿಸುವುದು ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾನೆ. ಮನುಷ್ಯನ ಮಿದುಳು ಸೂಪರ್ ಕಂಪ್ಯೂಟರ್ ತರಹ, ಆದ್ದರಿಂದ ಮಿದುಳು ತಯಾರಿಸುವುದು ಸಾಧ್ಯ ಎಂದು ಹೇಳುವವರಿಗೆ ಪೆನ್‌ರೋಸ್ ಸರಿಯಾದ ಉತ್ತರ ನೀಡುತ್ತಿದ್ದಾನೆ-ಮಿದುಳು ತಯಾರಿಸುವುದು ಕಷ್ಟ, ಯಾಕೆಂದರೆ ಕಂಪ್ಯೂಟರ್ ಹೇಳಿದ್ದು ಮಾತ್ರ ಮಾಡುತ್ತದೆ, ತುಂಬಿದ್ದನ್ನು ಮಾತ್ರ ಹೊರಗೆಡಹುತ್ತದೆ; ಆದರೆ ಅದಕ್ಕೆ ತನ್ನದೇ ಆದ ಜೀವವಿಲ್ಲ, ಮಿದುಳು ಜೀವಂತ ಮನುಷ್ಯನ ಚಿಂತಿಸುವ ಅಂಗ. ಚಿತ್ರವಿಚಿತ್ರ ರೀತಿಯಲ್ಲಿ ಆಶ್ಚರ್ಯಕರ ರೀತಿಯಲ್ಲಿ ಹೊಸಹೊಸ ವಿಷಯಗಳನ್ನು ಮನುಷ್ಯನ ಮಿದುಳು ಕಂಡುಹಿಡಿಯುತ್ತದೆ.

ಇದೆಲ್ಲಕ್ಕಿಂತ ಮುಖ್ಯ ವಾದವಾಗಿ ನನಗೆ ಕಂಡದ್ದು; ಅತ್ಯುತ್ತಮ ಕತೆ, ಕವನ ಬರೆಯುವವರು, ಶ್ರೇಷ್ಠ ಸಂಶೋಧನೆ ಮಾಡುವವರು ನೋವು, ಏಕಾಂತತೆ, ವೇದನೆಯ ಮೂಲಕ ಕಾಣುತ್ತಾರೆ; ಈ ವೇದನೆ ಅವರ ಛಲ, ಊಟ, ನಿದ್ರೆ, ಪ್ರೇಮ ಎಲ್ಲದನ್ನೊಳಗೊಂಡಿರುತ್ತದೆ. ಇದ್ಯಾವುದನ್ನೂ ಅನುಭವಿಸಲಾಗದ ಕಂಪ್ಯೂಟರ್ ಮಿದುಳಾಗಿ ಕೆಲಸ ಮಾಡುವುದು ಕಷ್ಟ.

"ಸತ್ತರೂ ಚಿಂತೆಯಿಲ್ಲ..."



ಕೊನೆಯದಾಗಿ ಒಂದು ಸಣ್ಣ ಅನುಭವ. ಮೊನ್ನೆ ಎರಡು ಸಲ ರಕ್ತದ ಬಗ್ಗೆ ಬರೆದಿದ್ದೇನೆ. ನಮ್ಮ ಮುಸ್ಲಿಂ ಓದುಗರೊಬ್ಬರು ಒಂದು ಪತ್ರ ಬರೆದಿದ್ದಾರೆ. ಈತನ ರಕ್ತ ವಿಶಿಷ್ಟವಾದದ್ದು, ಅಪರೂಪದ ಗುಂಪಿಗೆ ಸೇರಿದ್ದು. ಹೀಗಾಗಿ ಈತ ಅನೇಕ ಸಲ ತನ್ನ ರಕ್ತವನ್ನು ದಾನ ಮಾಡಿದ್ದಾನೆ. ಒಮ್ಮೆ ಈತನ ಬಾಲ್ಯ ಸ್ನೇಹಿತನೊಬ್ಬ ಸಿಕ್ಕ. ಈತ ಹಿಂದೂ. ಇವರ ತಂದೆಗೆ ಶಸ್ತ್ರಚಿಕಿತ್ಸೆ ಆಗುವುದಿತ್ತು. ಈತನ ಗುಂಪಿನ ರಕ್ತ ಎಲ್ಲೂ ಸಿಗಲಿಲ್ಲ. ಸಿಕ್ಕ ಮುಸ್ಲಿಂ ಬಾಲ್ಯ ಸ್ನೇಹಿತನ ರಕ್ತ ಸರಿ ಹೋಯಿತು. ರಕ್ತ ತೆಗೆದುಕೊಂಡಾಯಿತು. ಇನ್ನೇನು ರಕ್ತ ಕೊಡಬೇಕು, ಅಷ್ಟರಲ್ಲಿ ಆತ ತನ್ನ ಮುಸ್ಲಿಂ ಗೆಳೆಯನನ್ನು ತನ್ನ ತಾಯಿಗೆ ಪರಿಚಯಿಸಿದ; ರಕ್ತ ನೀಡಿರುವುದಾಗಿ ಹೇಳಿದ. ತಬ್ಬಿಬ್ಬಾದ ತಾಯಿ, "ನನ್ನ ಗಂಡ ಸತ್ತರೂ ಚಿಂತೆಯಿಲ್ಲ, ಮುಸ್ಲಿಂ ರಕ್ತ ಕೊಡುವುದಿಲ್ಲ" ಎಂದು ಹೇಳಿದಳು.

ಅವಳ ಗಂಡ ರಕ್ತವಿಲ್ಲದೆ ತೀರಿಕೊಂಡ.

ಜನರ ಮೂಢನಂಬಿಕೆ ಯಾವ ಯಾವ ರೀತಿಯಲ್ಲಿ ಇರಲು ಸಾಧ್ಯ-ತಿಳಿಯಿತೆ?

ಖದರ್

ಗಫೂರಣ್ಣ, ಅಮೀರಣ್ಣನ
ಗಡ್ಡ, ಟೋಪಿ, ದೊಗಳೆ
ಪೈಜಾಮ ಕಂಡು
'ಆಲ್‌ಖೈದ'ದೋರು ಅಂತ
ಮೊನ್ನೆ ಜಾತ್ರೆಯಾಗೆ
ಹಿಡಿದು, ಬಾರಿಸಿ ಪೊಲೀಸ್‌ಗೆ
ಹಿಡಿದುಕೊಟ್ಟ ಮಂದಿ
ಚುನಾವಣೆ ಬರುತ್ತಿದ್ದಂತೆ

ಗಲ್ಲಿ, ಮೊಹಲ್ಲಗಳಲ್ಲಿ
ಹುಡುಕಾಡಿ ಶಾಲು-ಹೂಹಾರ
ತೊಡಿಸಿ ಪಕ್ಷದ ಅಧ್ಯಕ್ಷ
ಮತ್ತು ಕಾರ್ಯದರ್ಶಿಯಾಗಿ
ಆರಿಸಿದ್ದಾರೆ


ವಾಂಟೇಡ್ ಲೀಸ್ಟಲ್ಲಿ*
ಸೇರಬೇಕಾಗಿದ್ದ ಸಾಬರ ಲೀಡರ್‍ರುಗಳು
ಪೋಸ್ಟರ್, ಬ್ಯಾನರ್, ಬಂಟಿಂಗ್ಸ್‌ಗಳಲ್ಲಿ
ಪ್ರಿಂಟಾಗಿ ಸೇಫಾಗಿದ್ದಾರೆ.
ಎಲ್ಲ ಪಕ್ಷದ ಗುಂಪುಗಳಲ್ಲಿ
ಗಡ್ಡ, ಟೋಪಿಗಳದ್ದೇ ದರ್ಬಾರು

ಮಸೀದಿ, ಮದ್ರಸಾಗಳ ಮೇಲೆ
ನಿಗಾ ಇಟ್ಟವರು
ಓಟಿಗಾಗಿ ಬಂದು
ನಮಾಜಿಗೆ ನಿಂತ ಸಾಬರ
ಚಪ್ಪಲಿಗಳ ಕಾಯುತ್ತಿದ್ದಾರೆ.

ಇದು ಚುನಾವಣೆಯ ಪರ್ವ
ಗಫೂರಣ್ಣ, ಅಮೀರಣ್ಣಂಗೆ
-ಗರ್ವದ ಕಾಲ

ಇತ್ತೀಚಿಗೆ ಸಾಬರಿಲ್ಲದೆ
ಚುನಾವಣೆ ಕಾವೇರಲ್ಲ
ಚುನಾವಣೆ ಇರದಿದ್ರೆ
ಸಾಬರು ಕಾವೇರಲ್ಲ

-ದಾದಾಪೀರ್, ತರೀಕೆರೆ



*(ಲೀಸ್ಟ್ = least)

ವಿವಿಧ ಪಕ್ಷಗಳ ಒಕ್ಕೂಟವೇ ಶರಣು

ಏಪ್ರಿಲ್ 9ರ ಪತ್ರಿಕೆಯಲ್ಲಿ ಪ್ರಕಟವಾದ 'ಕಂಡ ಹಾಗೆ' ನಿಮ್ಮ ಲೇಖನ 'ನಮ್ಮ ಮುಂದಿನ ಆಯ್ಕೆಗಳು' ಓದಿದೆ. ಲೇಖನದ ಕೊನೆಯಲ್ಲಿ 'ಓದುಗರು ತಮ್ಮ ಅಭಿಪ್ರಾಯಗಳನ್ನು ಕಳುಹಿಸಬಹುದು' ಎಂಬ ಮಾತನ್ನು ಲಕ್ಷಿಸಿ ನನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಿದ್ದೇನೆ.

ನಿಮ್ಮ ಲೇಖನ ಏಪ್ರಿಲ್ 4ರಂದು ಕೋಮು ಸೌಹಾರ್ದ ವೇದಿಕೆಯ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಸೇರಿದ್ದ ಸಭೆಯ ಫಲಶೃತಿ. ಆ ಸಭೆಗೆ ನಾನು ಬಂದಿದ್ದೆ. ಅಲ್ಲಿ ಮಾತನಾಡಿದವರು ನೆರೆದಿದ್ದ ಸಭಿಕರಲ್ಲಿ ಅಪ್ರತಿಮ ದೇಶಭಕ್ತರು, ಜಾತ್ಯತೀತ ತತ್ವದ ಪ್ರತಿಪಾದಕರೂ ಇದ್ದರೆಂಬುದು ನಿಃಸಂಶಯ. ಅಲ್ಲಿ ಕೈಗೊಂಡ ತಾತ್ಕಾಲಿಕ 'ನಿಲುಮೆ'ಯನ್ನು ಕ್ರೋಢೀಕರಿಸಿ ಬಜೆಪಿಯನ್ನು ಸೋಲಿಸಲು' 'ಯಾವ ರಾಜಕೀಯ ಪಕ್ಷಗಳನ್ನು ಬೆಂಬಲಿಸಬಾರದೆಂದೂ' ಪ್ರತಿಪಾದಿಸಿದರೆಂದು ಪ್ರಕಟಿಸಲಾಗಿದೆ.

ಬಜೆಪಿ ಸೋಲಿಸಬೇಕು ನಿಜ. ಅವರನ್ನು ಸೋಲಿಸಿದ ನಂತರ ಯಾರನ್ನು ಅಧಿಕಾರಕ್ಕೆ ತರಬೇಕು? ಇದು ಅವರನ್ನು ಸೋಲಿಸುವುದಕ್ಕಿಂತಲೂ ಮುಖ್ಯ. ಈ ಉದ್ದೇಶ ಈಡೇರಬೇಕಾದರೆ ಕೋಮು ವಿರೋಧಿ ಶಕ್ತಿಗಳು, ಮತಗಳು ಇಬ್ಭಾಗ/ಛಿದ್ರವಾಗದಂತೆ ನೋಡಿಕೊಳ್ಳಬೇಕು. ಅದು ಸಾಧ್ಯವಾಗಬೇಕಾದರೆ ಬಜೆಪಿ ವಿರೋಧಿಗಳೆಲ್ಲ ಒಂದಾಗಬೇಕು ಇಲ್ಲವೆ ಹೊಂದಾಣಿಕೆ ಮಾಡಿಕೊಳ್ಳಬೇಕು. ಒಂದಾಗುವುದು ಎಂದಿಗೂ ಸಾಧ್ಯವಿಲ್ಲ. ಹೊಂದಾಣಿಕೆ ಉಳಿದಿರುವ ಮಾರ್ಗ, 1977 ರಲ್ಲಿ ಜೆ.ಪಿ. ನಾಯಕತ್ವದಲ್ಲಿ ಹೊಂದಾಣಿಕೆ ಮಾಡಿಕೊಂಡು, ಅಂದಿನ ಲೋಕಕಂಟಕ ಶಕ್ತಿಯನ್ನು ಮುರಿದಿಕ್ಕಿದಂತೆ, ಈಗ ಕೋಮು ದಳ್ಳುರಿಯನ್ನು ಹಚ್ಚಿ ದೇಶವನ್ನು ಸುಟ್ಟು ಸ್ಮಶಾನ ಮಾಡಲು ಹೊರಟಿರುವ ಬಜೆಪಿಯನ್ನು ಮುರಿದಿಕ್ಕಬೇಕಾಗಿದೆ.



ಇಂಥ ಸಮಸ್ಯೆ ಹಿಂದೆ ದ್ವಿತೀಯ ಜಾಗತಿಕ ಯುದ್ಧದ ಕಾಲಕ್ಕೆ ನಮ್ಮ ಮುಂದಿತ್ತು, ಆಗ ಹಿಟ್ಲರನ ಫ್ಯಾಸಿಸಂ ರಾಕ್ಷಸಶಕ್ತಿಯನ್ನು ಮುರಿದಿಕ್ಕಲು ಸೋವಿಯತ್ ಯೂನಿಯನ್ ಬ್ರಿಟನ್ನಿನೊಡನೆ ಸಖ್ಯ ಬೆಳೆಸಲಾಯಿತು. 1977 ರಲ್ಲಿ ಜನಸಂಘ, ಆರ್.ಎಸ್.ಎಸ್.ನಂಥ ಅತ್ಯಂತ ಹೀನ ಕೃತ್ಯವೆಸಗಿದ್ದ ಸಂಸ್ಥೆಗಳೊಡನೆ ಜೆ.ಪಿ. ಕೈಜೋಡಿಸಿದರು. ಒಂದು ಮುಳ್ಳನ್ನು ಇನ್ನೊಂದು ಮುಳ್ಳಿನಿಂದ ತೆಗೆದು ಎರಡೂ ಮುಳ್ಳುಗಳನ್ನು ಬಿಸಾಡಿದಂತೆ ಮಾಡಲು ಹವಣಿಸಿದರು. ಆ ಉದ್ದೇಶಪೂರ್ಣ ಈಡೇರಲಿಲ್ಲ, ಅದಕ್ಕೆ ಬೇರೆ ಕಾರಣಗಳಿದ್ದವು. ಅದು ಬೇರೆ ಮಾತು. ಈಗಲಾದರೂ ಅದೇ ಮಾರ್ಗ. ಅದು ಬಿಟ್ಟು ಬೇರೆಯಿಲ್ಲವೇ ಇಲ್ಲ.

ಹಾಗಾಗದಿದ್ದರೆ ಬಜೆಪಿ ಸೋಲಿಸಿದರೂ, ಛಿದ್ರ ಜನಾದೇಶವೆ (Fractured mandate) ಫಲಿಸಿತು. ಆಗ ಏಕವ್ಯಕ್ತಿ ಪಕ್ಷಗಳು, ಕೌಟುಂಬಿಕ ಪಕ್ಷಗಳು, ಗೆದ್ದುಬಂದ ಹತ್ತಾರು ಸದಸ್ಯರ ಗುಂಪು, ಗಣಿ ಉದ್ಯಮಿಗಳ ದಾಸಸದಸ್ಯರೂ... ಗೆದ್ದು ಬಂದ ಹತ್ತಾರು ಅತ್ಯಧಿಕ ಸಂಖ್ಯೆಯ ಸದಸ್ಯರನ್ನು ಮೂಗುದಾರ ಹಾಕಿ ಆಡಿಸಬಲ್ಲರು. ನಮ್ಮನ್ನು ಬಿಟ್ಟು ನೀವು ಹೇಗೆ ಸರ್ಕಾರ ರಚಿಸುತ್ತೀರೋ ನೋಡುತ್ತೇನೆ ಎಂದು ತೋಳು ತೊಡೆ ಚಪ್ಪರಿಸುತ್ತಾರೆ. ಹಾಗೇನಾದರೂ ಆದರೆ 2004 ಮತ್ತು 2006 ರಲ್ಲಿ ಆದಂತೆ ಅದೇ ಕೂಳು. ಅದೇ ಕಡ್ಡಿ. ಮತ್ತೆ ಖಜಾನೆ ಲೂಟಿ. ಭ್ರಷ್ಟಾಚಾರದ ತಾಂಡವ ನೃತ್ಯ. ಮತ್ತೆ ಮಧ್ಯಂತರ ಚುನಾವಣೆ!! ಎಲ್ಲಿಗೆ ಬಂತೋ ಸಂಗಯ್ಯ? ಮತ್ತೆ ಅಲ್ಲಿಗೇ!

ಹಾಗಾದರೆ ಮಾಡುವುದೇನು? ಹೊಂದಾಣಿಕೆಯೊಂದೇ ಮಾರ್ಗ. ಯಾವುದು ಕೋಮುವಾದಿ ಪಕ್ಷವಲ್ಲವೊ, ಕನಿಷ್ಠ ಕಡಿಮೆ ಜಾತಿವಾದಿಯೊ ಅಂಥವರೊಡನೆ ಕೈ ಜೋಡಿಸಬೇಕು. ನಮ್ಮ ಜಾತಿಪ್ರಧಾನ ರಾಷ್ಟ್ರದಲ್ಲಿ ಅಪ್ಪಟ ಜಾತಿವಿರೋಧಿ ಪಕ್ಷ ಎಂಬುದು ಕನಸು. ಜನತಾ ಪ್ರಾತಿನಿಧ್ಯ ಕಾಯಿದೆಯ ಪ್ರಕಾರ ನಡೆಯುವ ಚುನಾವಣೆಗಳಲ್ಲಿ ಜಾತಿ ಪ್ರಾತಿನಿಧ್ಯ ಚುನಾವಣೆಗಳೆ! ಅವರಲ್ಲಿಯೆ ಇದ್ದದ್ದರಲ್ಲಿ ವಾಸಿ ಎಂಬ ಕಾಂಗ್ರೆಸ್ ಪಕ್ಷ, ಎಸ್.ಪಿ., ಬಿಎಸ್‌ಪಿ, ಎಡಪಂಥೀಯ, ಸಿಪಿಎಂ ಪಕ್ಷಗಳನ್ನು ಬೆಂಬಲಿಸಬೇಕು. ಅವರನ್ನು ಬೆಂಬಲಿಸುವ ಮತದಾರರೇ ಈ ರಾಜ್ಯದಲ್ಲಿ ಅಧಿಕವಾಗಿದ್ದಾರೆ. ಅಂಥ ಒಂದು ಒಕ್ಕೂಟ ಸರ್ವೋದಯ ಪಕ್ಷ, ರೈತ ಸಂಘ, ಸಿಪಿಐ ಒಂದುಗೂಡಿದ ಸಂಘಟನೆ, ಪ್ರಜೆಗಳಿಗೆ ಅನ್ನ ಬಟ್ಟೆ ಅಕ್ಷರ ವಿದ್ಯೆ ಆರೋಗ್ಯ ಆಸರೆಯನ್ನು ಕೊಡುವಂಥ ಪ್ರಣಾಳಿಕೆಯನ್ನು ಮುಂದಿಟ್ಟು ಮತಯಾಚನೆ ಮಾಡಬೇಕು. ಬಾಬಾ ಬುಡನ್‌ಗಿರಿ ಅಯೋಧ್ಯೆ ಮಾಡುವ, ಕರ್ನಾಟಕವನ್ನು ಗುಜರಾತ್ ಮಾಡುವ ಗುರಿಯನ್ನು ಸದೆಬಡಿಯಬೇಕು. ಈ ರಾಜ್ಯ ಉಚ್ಚವರ್ಣ ಮತ್ತು ಉತ್ತಮ ಜಾತಿಗಳನ್ನು ಪ್ರತಿನಿಧಿಸುವ ಬಜೆಪಿಯ ಗುತ್ತಿಗೆ ಸ್ವತ್ತಲ್ಲ, ಇಲ್ಲವೆ ಮುಂದುವರಿದ ಶ್ರೀಮಂತ ಪ್ರಬಲ ಜಾತಿಗಳ ಖಾಸಗಿ ಆಸ್ತಿಯಲ್ಲ, ಇಲ್ಲಿ ಹುಟ್ಟಿ ಇಲ್ಲಿ ಬೆಳೆದು ಇಲ್ಲಿಯೆ ಸಾಯುವ ದಟ್ಟ ದರಿದ್ರನಿಗೂ ಅಲ್ಪಸಂಖ್ಯಾತ ಹಿಂದುಳಿದ ದಲಿತರಿಗೂ (ಅಹಿಂದ) ರಾಜ್ಯಾಧಿಕಾರದ ಹಕ್ಕಿದೆ. ಆದ್ದರಿಂದ ಬಡವರೆಲ್ಲ ಒಂದಾಗಿ ಶ್ರೀಮಂತರ ಪಕ್ಷವಾದ ಬಜೆಪಿಯನ್ನು ಸದೆಬಡಿಯಬೇಕು.

-ಕೋ. ಚೆನ್ನಬಸಪ್ಪ,
ಬೆಂಗಳೂರು

ಹೊಗಳಿಕೆ / ತೆಗಳಿಕೆ

ವಸ್ತುನಿಷ್ಠ ವರದಿಗಳನ್ನು ನೀಡುತ್ತಿರುವ ತಮಗೆ ನಮಸ್ಕಾರಗಳು. ಪುತ್ತೂರು ಚುನಾವಣೆ ಈ ಸಲ ಹೊಸ ಬದಲಾವಣೆಯನ್ನು ತರಲಿದೆ. ಅಂದರೆ ಕಿಸಬಾಯಿ ಗೌಡ ಸದಾನಂದನಿಗೆ ಈ ಸಲ ಜನ ಸರಿಯಾದ ಪಾಠ ಕಲಿಸುವುದು ಖಂಡಿತ. ಹಿಂದೂತ್ವದ ಹೆಸರಲ್ಲೇ ಮೇಲೆ ಬಂದ ಇವನು ವರ್ಷಗಳ ಹಿಂದೆ ಹಿಂದೂ ನಾಯಕ ಅರುಣಕುಮಾರ್ ಪುತ್ತಿಲರ ಮುಖಂಡತ್ವದಲ್ಲಿ ದೇವಸ್ಥಾನ ಗದ್ದೆಯಲ್ಲಿ ನಡೆದ ಸಾರ್ವಜನಿಕ ಶನಿ ಪೂಜೆಗೆ ಪೊಲೀಸರನ್ನು ಛೂಬಿಟ್ಟು ಸಮಸ್ತ ಭಕ್ತಾದಿಗಳ ಮನಸ್ಸಿಗೆ ನೋವುಂಟು ಮಾಡಿದಾಗಲೇ ಜನ ಈ ಇಮ್ಮಂಡೆ ಹಾವಿಗೆ ಬುದ್ಧಿಕಲಿಸಲು ಪಣತೊಟ್ಟಿದ್ದರು. ಪುತ್ತೂರಿನಲ್ಲಿ ಮತ್ತೊಬ್ಬರು ಮಿಂಚುವುದನ್ನು ಬಿಲ್‌ಕುಲ್ ಸಹಿಸಲಾಗದ ಕಾರಣಕ್ಕಾಗಿ ಪೊಲೀಸರಿಂದ ರಾತ್ರೋರಾತ್ರಿ ಭಕ್ತಾದಿಗಳ ಮೇಲೆ ಹಿಂದೂ ಹೆಸರಲ್ಲಿ ಬೇಳೆ ಬೇಯಿಸಿಕೊಂಡ ಇವನು ದಾಳಿ ನಡೆಸಿದ್ದ. ಅದೇ ರೀತಿ ಪುತ್ತೂರು ಶಾಸಕಿಯಾಗಿ ಜನರ ಪ್ರೀತಿ ಗಳಿಸಿಕೊಂಡ ಶಕುಂತಲಾ ಶೆಟ್ಟಿಯ ಮೇಲೆ ಈಗ ಈ ಕಿಸಬಾಯಿಯ ಕಣ್ಣುಬಿದ್ದಿದೆ. ತನ್ನ ಅಧ್ಯಕ್ಷ ಸ್ಥಾನವನ್ನು ಹಗೆ ಸಾಧಿಸಲು ಉಪಯೋಗಿಸಿಕೊಳ್ಳುತ್ತಿರುವ ಈತ ವಿನಾಕಾರಣ ಶೆಟ್ಟಿಯವರ ಟಿಕೆಟ್ ತಪ್ಪಿಸಿ ಯಾವುದೋ ಡಮ್ಮಿ ಕ್ಯಾಂಡಿಡೇಟನ್ನು ಆ ಸ್ಥಾನದಲ್ಲಿ ನಿಲ್ಲಿಸಿದೆ. ಹಿಂದೆ ಮಹಿಳೆಗೆ ಒಂದಾದರೂ ಸಚಿವಸ್ಥಾನ ಕೊಡುವ ನಿಟ್ಟಿನಲ್ಲಿ ಮಾತುಕತೆಯಾಗಿ ಶೆಟ್ಟಿಯವರ ಹೆಸರು ಪ್ರಮುಖವಾಗಿ ಬಂದಾಗ ಅದನ್ನು ತಪ್ಪುವಂತೆ ಮಾಡಿದ್ದು ಇದೇ ಕಿಸಬಾಯಿ ಗೌಡ. "ಜಾರ್ಜ್ ಬುಷ್ ನಂತರ ನಾನೇ ಎಂಬಂತೆ" ನನಗೆ ಪಾಕಿಸ್ತಾನದ ಐಎಸ್‌ಐಯಿಂದ ಕೊಲೆ ಬೆದರಿಕೆ'ಯೆಂದು ಒಮ್ಮೆ ಬೋಂಗು ಬಿಟ್ಟು ನಗೆಪಾಟಲಿಗೀಡಾಗಿದ್ದ. ಕರಾವಳಿಯಲ್ಲಿ ಸಾಮಾನ್ಯವಾಗಿ ಬಂಟ ಸಮುದಾಯದವರೇ ಆಸಕ್ತಿ ವಹಿಸಿ ನಡೆಸಿಕೊಡುವ ಕಂಬಳ ಈ ಗೌಡ ಹಾಗೂ ಕ್ರಿಮಿನಲ್ ಕಲ್ಲಡ್ಕ ಭಟ್ಟನಿಗೆ ಶೆಟ್ಟರ ಟಿಕೆಟ್ ತಪ್ಪಿಸಲು ಕಾರಣವಾಯ್ತು. ಲಕ್ಷಾಂತರ ಜನ ಭಾಗವಹಿಸಿದ್ದ ಕೋಟಿಚೆನ್ನಯ ಕಂಬಳಕ್ಕೆ ಶೆಟ್ಟರು ಹೋದದ್ದೆ ತಪ್ಪಾಯಿತಂತೆ. ಕಲ್ಲಡ್ಕ ಭಟ್ಟನಿಗಿಂತ ಕಡಿಮೆಯಿಲ್ಲದ ಈ ಕ್ರಿಮಿನಲ್ ಕಿಸಬಾಯಿಗೆ ಈ ಸಲ ಬಂಟರೇ ಸರಿಯಾದ ಬುದ್ಧಿ ಕಲಿಸುವುದು ಸತ್ಯ. ಪುತ್ತೂರಿನ ಇತಿಹಾಸದಲ್ಲೇ ಮಣಿವಣ್ಣನ್ ತರಹ ದಕ್ಷ ಎಸಿಯಾಗಿ ಬಂದು ಯಾವ ಒತ್ತಡ ವಶೀಲಿಗೂ ಜಗ್ಗದೇ ಪುತ್ತೂರನ್ನು ಸುಂದರಗೊಳಿಸುತ್ತಿದ್ದಾರೆ. ದಿನೇದಿನೇ ಜನಪ್ರಿಯರಾಗುತ್ತಿರುವ ಎಸಿಯನ್ನು ಇದೇ ಕಿಸಬಾಯಿ ತನ್ನ ಬಂಟರನ್ನೂ ಎಸಿ ಕ್ಯಾರೇ ಮಾಡಲಿಲ್ಲ ಎಂಬ ಕಾರಣಕ್ಕೆ ಸಾರ್ವಜನಿಕವಾಗಿ ಕೀಳಾಗಿ ಮಾತನಾಡಿ ಅವಮಾನಿಸಿದ್ದಕ್ಕೂ ಜನ ತಕ್ಕ ಉತ್ತರ ನೀಡಲಿದ್ದಾರೆ.

-ಅವಿನಾಶ್ ರೈ

ತಮಿಳುನಾಡು, ಪಶ್ಚಿಮ ಬಂಗಾಳ... ರಾಜ್ಯಗಳಿಂದ ಆಳುವ ಪಕ್ಷದ/ಕಾಂಗ್ರೆಸ್ ಪಕ್ಷದ ಸಂಸದರು ಬೆರಳೆಣಿಕೆಯಷ್ಟು ಮಾತ್ರ ಇದ್ದಾರೆ. ಆದರೆ ಕೇಂದ್ರ ಮಂತ್ರಿಮಂಡಳದಲ್ಲಿ ಈ ರಾಜ್ಯಗಳದವರೇ ಪ್ರಭಾವ. ಉದಾ: ಪ್ರಣವ ಮುಖರ್ಜಿ, ಪ್ರಿಯರಂಜನ್ ದಾಸ್ ಮುನ್ಷಿ, ಚಿದಂಬರಂ, ಟಿ.ಆರ್. ಬಾಲು ತುಂಬಾ ಪ್ರಮುಖ ಖಾತೆಗಳನ್ನು ಹೊಂದಿದ್ದಾರೆ. ಅದೇ ಕರ್ನಾಟಕದಿಂದ ಸಾಕಷ್ಟು ಮಂದಿ ಕಾಂಗ್ರೆಸ್ ಸಂಸದರಿದ್ದರೂ ಒಬ್ಬನೇ ಒಬ್ಬ ಕ್ಯಾಬಿನೆಟ್ ದರ್ಜೆ ಸಚಿವನಿಲ್ಲ??!!.... ಇದು ಬರೀ ಮನಮೋಹನ್‌ಸಿಂಗ್ ಮಂತ್ರಿಮಂಡಲದ ಕಥೆಯಲ್ಲ; ಸ್ವಾತಂತ್ರ್ಯ ಬಂದಾಗಿನಿಂದಲೂ ಇದೇ ಪರಿಸ್ಥಿತಿ; ಇದೇ ಗೋಳು.

ಏನಿದರ ಅರ್ಥ?..... ಕರ್ನಾಟಕದ ಕನ್ನಡಿಗರು ಆರಿಸಿ ಕಳಿಸಿದ ಪ್ರತಿನಿಧಿಗಳೆಲ್ಲಾ ಜೊಳ್ಳು, ತಮಿಳುನಾಡು ಪಶ್ಚಿಮ ಬಂಗಾಳದವರು ಆರಿಸಿ ಕಳಿಸಿದವರೆಲ್ಲಾ ಗಟ್ಟಿ. ಇದು ಕಾಂಗ್ರೆಸ್ ನಾಯಕರು ಕನ್ನಡಿಗರನ್ನು ಕಾಣುವ ರೀತಿ?? .....!!... ಅಷ್ಟಕ್ಕೇ ಮುಗಿಯಲಿಲ್ಲ, ನಮ್ಮ ಪ್ರತಿನಿಧಿಗಳಾಗಿ ಹೋದವರೂ ಕೂಡ ಶಿಖಂಡಿಗಳಾಗಿ ವರ್ತಿಸುತ್ತಾರೆ. ನಮ್ಮ ರಾಜ್ಯಕ್ಕೆ ಸಂಸದರ ಸಂಖ್ಯೆಗನುಗುಣವಾಗಿ ಮಂತ್ರಿಮಂಡಲದಲ್ಲಿ ಕ್ಯಾಬಿನೆಟ್ ಮತ್ತು ರಾಜ್ಯ ಸಚಿವರ ಸ್ಥಾನ ಕೊಡಬೇಕೆಂದೂ, ಹಾಗೆ ಕೊಡದಿದ್ದರೆ ನಾವೆಲ್ಲಾ ಸಂಸದರ ಸ್ಥಾನಗಳನ್ನು ತ್ಯಜಿಸುವುದಾಗಿಯೂ ಹೇಳಿ, ಹಾಗೆಯೇ ನಡೆದುಕೊಳ್ಳಬೇಕಾಗಿತ್ತು, ಆದರೆ ಈವರೆಗೂ ಯಾರೂ ಹಾಗೇ ಮಾಡಿಲ್ಲ, ಆದ್ದರಿಂದ ಕಾಂಗ್ರೆಸ್ಸಿಗೆ (ಅಥವಾ ಯಾವುದೇ ಪಕ್ಷಕ್ಕೆ ಅಥವಾ ಯಾವ ಅಭ್ಯರ್ಥಿಗೇ ಆಗಲಿ) ಮುಖ ಕೊಡುವುದಕ್ಕೆ ಮುಂಚೆ ಇದನ್ನೂ ತಪ್ಪದೆ ಗಮನದಲ್ಲಿಟ್ಟುಕೊಳ್ಳಬೇಕು. ಚುನಾವಣೆ ಸಂಸತ್‌ಗಾಗಲೀ, ವಿಧಾನಸಭೆಗಾಗಲಿ ಕಾಂಗ್ರೆಸ್ ಕಾಂಗ್ರೆಸ್ಸೇ ತಾನೇ?

-ವೀರಖ್ಯಾತಯ್ಯ. ಬೆಂಗಳೂರು

ಅಸಮಾನತೆ ಮತ್ತು ಮೌಢ್ಯತೆಯ ವಿರಾಟ ರೂಪಗಳು

ಒಂದು ಪತ್ರ

ಅದೊಂದು ಪುಟ್ಟ ಹಳ್ಳಿ. ಹಾಗಂತ ಅದು ಕುಗ್ರಾಮವಲ್ಲ. ಅಲ್ಲಿ ಕರೆಂಟ್ ಇದೆ. ಸಾಕಷ್ಟು ಜನ ಸರಕಾರಿ ನೌಕರದಾರರಿದ್ದಾರೆ. ರಂಗೋಲಿ ಕೆಳಗೆ ನುಸುಳುವಂತಹ ರಾಜಕೀಯ ಪುಢಾರಿಗಳಿದ್ದಾರೆ. ಮಿಗಿಲಾಗಿ ಒಬ್ಬ ಕೆಎಎಸ್ ಅಧಿಕಾರಿಯನ್ನು ಆ ಊರು ನಾಡಿಗೆ ಕೊಟ್ಟಿದೆ. ಕೆಲ ಡಾಕ್ಟರೇಟ್‌ಗಳನ್ನು ತನ್ನ ಮುಡಿಗೇರಿಸಿಕೊಂಡಿದೆ. ಹಾಗಂತ ಆ ಊರಲ್ಲಿ ಸ್ವರ್ಗವೇ ಬಂದು ನೆಲೆಸಿಲ್ಲ. ಆ ಊರಿನ ಚಹಾದಂಗಡಿಯಲ್ಲಿ ದಲಿತರಿಗೆ ಚಹ ಕುಡಿಯಲು ಪ್ರತ್ಯೇಕವಾದ ಲೋಟಗಳಿವೆ. ಅಲ್ಲಿನ ತಳ ಸಮುದಾಯದ ಜನ ಕಟಿಂಗ್ ಮಾಡಿಸಲು ದೂರದ ಪಟ್ಟಣಕ್ಕೆ ಹೋಗಬೇಕು. ಫ್ಯೂಡಲ್ ವ್ಯವಸ್ಥೆಯ ಬೇರುಗಳು ಅಲ್ಲಿ ಆಳವಾಗಿ ಬೇರೂರಿವೆ. ದಲಿತರ, ಬಡವರ ಗುಡಿಸಲುಗಳ ಒಳಗೆ ಅಕ್ಷರಗಳು ಇನ್ನೂ ಕಾಲಿಟ್ಟಿಲ್ಲ. ಇದು ಬರೀ ಆ ಊರಿನ ಕತೆಯೊಂದೇ ಅಲ್ಲ. ಸುವರ್ಣ ಕರ್ನಾಟಕದ ನೂರಾರು ಗ್ರಾಮಗಳ ಕತೆಯೂ ಆಗಿದೆ.

ಭಾರತಕ್ಕೆ ಸ್ವಾತಂತ್ರ್ಯ ದೊರೆತು ಆರು ದಶಕಗಳು ಸುಮ್ಮನೆ ಕಾಲನ ಒಳಗೆ ಒಂದಾಗಿಹೋಗಿವೆ. ಈ ಅಸಮಾನತೆ, ಮೌಢ್ಯತೆಯ ವಿರುದ್ಧ ವ್ಯಾಪಕವಾದ ಪ್ರತಿಭಟನೆಗಳು, ಸೆಮಿನಾರ್‌ಗಳು, ಪುಸ್ತಕಗಳು ಬರುತ್ತಲೇ ಇವೆ. ಇಷ್ಟೆಲ್ಲ ಸಕಾರಾತ್ಮಕ ಸ್ಪಂದನೆಗಳ ನಡುವೆಯೂ ಅಸಮಾನತೆ, ಅವಮಾನ, ಅಸ್ಪೃಶ್ಯತೆ, ಸ್ತ್ರೀ ಶೋಷಣೆ, ಮೌಢ್ಯತೆಗಳು ಮಾತ್ರ ಜಪ್ಪಯ್ಯ ಅನ್ನದೇ ಗೂಟ ಹೊಡೆದುಕೊಂಡು ಕುಳಿತಿರುವುದು ನಮ್ಮನ್ನು ಆತಂಕಕ್ಕೆ, ತಲ್ಲಣಗಳಿಗೆ ಈಡು ಮಾಡಿದೆ.

ಇತ್ತೀಚೆಗೆ ಸಿಂಧಗಿಯಲ್ಲಿ ಮಹಿಳೆಯೊಬ್ಬಳು ದೇವರಿಗೆ ಹರಕೆ ತೀರಿಸಲು ಬೆತ್ತಲೆ ಸೇವೆ ಕೈಗೊಂಡ ವರದಿ ಪ್ರಕಟವಾಗಿದೆ. ಆ ಮಹಿಳೆಯ ಮನೆಯಲ್ಲಿ ಒಬ್ಬ ಎಂಜಿನಿಯರ್, ಇನ್ನೊಬ್ಬ ಶಿಕ್ಷಕ ಇರುವುದನ್ನು ನಾವು ಗಮನಿಸಬೇಕಿದೆ. ಈ ಸಾಫ್ಟ್‌ವೇರ್ ಯುಗದಲ್ಲಿ ಸಾಕ್ಷರತೆಯನ್ನು ಪಡೆದುಕೊಂಡವರ ಮನೆಯಲ್ಲಿ ಹೀಗೆ ಮೌಢ್ಯತೆಯ ಪರಮಾವಧಿಯ ಮೆರವಣಿಗೆ ನಡೆದಿರುವುದು ನಮ್ಮ ವಾಸ್ತವ ಸಮಾಜದ ನಗ್ನಸತ್ಯವನ್ನು ಬಿಚ್ಚಿಡುತ್ತಿದೆ.


ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನ ಬಲಕುಂದಿಯ ಬೇಡರ ರಾಮಪ್ಪ ಎನ್ನುವಾತ ಪ್ರತಿನಿತ್ಯ ತಮ್ಮೂರಿನ ಗುಡ್ಡದ ಮೇಲಿರುವ ಈಶ್ವರನನ್ನು ಪೂಜಿಸುವಾಗ ರಕ್ತ ತರ್ಪಣ ನೀಡುತ್ತಿದ್ದ. ಇತ್ತೀಚೆಗೆ ಪೂಜಿಸುವಾಗ ಭಕ್ತಿಯ ಉನ್ಮಾದದಲ್ಲಿ ತನ್ನ ಎಡಗೈ ಹೆಬ್ಬೆರಳನ್ನು ತುಂಡರಿಸಿಕೊಂಡು ಏನೂ ಅರಿಯದ ಆ ಕಲ್ಲು ಮೂರ್ತಿಗೆ ಅರ್ಪಿಸಿದ ಘಟನೆಯ ವರದಿ ನಮ್ಮನ್ನು ಬೆಚ್ಚಿಬೀಳಿಸುತ್ತಿದೆ.

ಪುರೋಹಿತಶಾಹಿವರ್ಗ ನಮ್ಮ ತಳ ಸಮುದಾಯದ ಮನಸ್ಸುಗಳ ಮೇಲೆ ಕೈಗೊಂಡ ಸವಾರಿಯ ಹೆಜ್ಜೆಗಳು ಇನ್ನೂ ಜೀವಂತ ಇರುವುದನ್ನು, ಆಳ್ವಿಕೆ ನಡೆಸುತ್ತಿರುವುದನ್ನು ಈ ಎರಡು ಘಟನೆಗಳು ಸ್ಪಷ್ಟಪಡಿಸುತ್ತವೆ.

ಈ ತರಹದ ಮೌಢ್ಯತೆಯ ಘಟನೆಗಳು ಪ್ರತಿನಿತ್ಯವೂ ನೂರಾರು ಜರುಗುತ್ತವೆ, ನಾಡಿನಲ್ಲಿ ಇನ್ನೂ ಅವೈಜ್ಞಾನಿಕತೆ ಢಾಳವಾಗಿದೆ. ಇಂತಹ ಮೌಢ್ಯತೆಯ ವಿಷಬೀಜಗಳನ್ನು ಪುರೋಹಿತಶಾಹಿಯ ಕಾಣದ ಕೈಗಳು ವ್ಯವಸ್ಥಿತವಾಗಿ ಮಾಡುತ್ತಿವೆ. ಪ್ರಗತಿಪರ, ಜೀವಪರ, ವಿಚಾರಧಾರೆಯುಳ್ಳ ಮನಸ್ಸುಗಳು ಅಲ್ಲಿ ಸಾಕ್ಷರತೆ, ವೈಚಾರಿಕತೆ, ಸಮಾನತೆ ನೆಲೆಸುವಂತೆ ಮಾಡುವಲ್ಲಿ ಶ್ರಮಿಸುವ ತುರ್ತಿದೆ.

ಟಿ.ಎಸ್.ಗೊರವರ, ರಾಜೂರ, ರೋಣ ತಾಲೂಕು, ಗದಗ ಜಿಲ್ಲೆ

ನಟನೊಬ್ಬನಿಗೆ ಹಲವಾರು ಮುಖಗಳು ಅಗತ್ಯ ಎಂಬ ಮಾತಿದೆ. ಆದರೆ ಮೊನ್ನೆ ನಟ ವಿಷ್ಣುವರ್ಧನರವರ ವ್ಯಕ್ತಿತ್ವದ 'ನಾಲ್ಕು ಮುಖ'ಗಳನ್ನು ವಿವಿಧ ಸಂದರ್ಭಗಳಲ್ಲಿ ಕಾಣುವಂತಾಯಿತು. ಅವು ನಮ್ಮಲ್ಲಿ ಬಹಳ ಕುತೂಹಲ ಹುಟ್ಟಿಸಿದ್ದರಿಂದ ಇಲ್ಲಿ ಅವನ್ನು ನಿಮಗಾಗಿ ದಾಖಲಿಸುತ್ತಿದ್ದೇವೆ.



ವಿಷ್ಣು ನಾಲ್ಕು ಮುಖಗಳು

ವಿಲನ್:

ಹೊಗೇನಕಲ್ ವಿವಾದ ಪರಾಕಾಷ್ಠೆಗೆ ತಲುಪಿದಾಗ ವಿಷ್ಣುವರ್ಧನ್ ತನ್ನ ಪರಮಾಪ್ತ ಮಿತ್ರ ಅಂಬರೀಷ್ ಜೊತೆ ದೂರದ ಮಡಿಕೇರಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಆಗ ನಡೆದ ಚಿತ್ರೋದ್ಯಮ ಬಂದ್ ಮತ್ತು ಧರಣಿಯಲ್ಲಿ ಚಿತ್ರರಂಗದ 'ಯಜಮಾನ' ವಿಷ್ಣುವರ್ಧನ್ ಗೈರುಹಾಜರಿಯಾಗಿದ್ದು ಬರೀ ಉದ್ಯಮದವರಿಗೆ ಮಾತ್ರವಲ್ಲ ಅವರ ಕಟ್ಟಾ ಅಭಿಮಾನಿಗಳಿಗೂ ಬೇಸರ ತಂದಿತ್ತು. ಅಂದಿನ ಮಟ್ಟಿಗೆ ಚಿತ್ರೋದ್ಯಮದವರ ಪಾಲಿಗೂ, ಜನಸಾಮಾನ್ಯರ ಪಾಲಿಗೂ ವಿಷ್ಣು 'ವಿಲನ್' ತರಹ ಕಂಡಿದ್ದರು. ಮಡಿಕೇರಿಯಿಂದ ಬರಲು ರಸ್ತೆ ಸರಿಯಿರಲಿಲ್ಲ ಎಂಬ ಸಿಲ್ಲಿ ಕಾರಣ ನೀಡಿದ ನಂತರವಂತೂ ವಿಷ್ಣು ಹಾಸ್ಯಾಸ್ಪದವಾಗಿ ಕಂಡಿದ್ದರು.

ವಿಷಾದ:

ಇದಾದ ಕೆಲದಿನಗಳ ನಂತರ ನಾಗತಿಹಳ್ಳಿ ಚಂದ್ರಶೇಖರ ನಿರ್ದೇಶನದ 'ಒಲವೇ ಜೀವನ ಲೆಕ್ಕಾಚಾರ' ಚಿತ್ರದ ಮುಹೂರ್ತದ ಸಂದರ್ಭದಲ್ಲಿ ವಿಷ್ಣು ಕಾಣಿಸಿಕೊಂಡರು. ಸಹಜವಾಗಿ ಪತ್ರಕರ್ತರು ಹೊಗೇನಕಲ್, ಮಡಿಕೇರಿ ರಸ್ತೆ ಕುರಿತಂತೆ ವಿಷ್ಣುರವರನ್ನು ಪ್ರಶ್ನಿಸಿದರು. ಅವುಗಳಿಗೆ ವಿಷ್ಣು ವಿಷಾದ ಮತ್ತು ಆಕ್ರೋಶದಿಂದ ಉತ್ತರಿಸಿದ್ದು ಹೀಗೆ:

"ನಾನು ನಾಯಕನಲ್ಲ, ನನಗೆ ಹಿಂಬಾಲಕರಿಲ್ಲ. ನನಗೂ ವಯಸ್ಸಾಗುತ್ತಿದೆ. ನನಗೆ ಇಂತಹ ದೊಡ್ಡ ದೊಡ್ಡ ಸಮಸ್ಯೆಗಳ ಪ್ರತಿಭಟನೆಯ ನಾಯಕತ್ವ ವಹಿಸುವಷ್ಟು ಶಕ್ತಿ ಇಲ್ಲ, ನಿಜ, ನಾನು ಸಿನಿಮಾದಲ್ಲಿ ನಾಯಕ ನಟ. ಆದರ ಅರ್ಥ ನಿಜಜೀವನದಲ್ಲೂ ಎಲ್ಲಾ ಸಮಸ್ಯೆಗಳಿಗೆ ಸ್ಪಂದಿಸಬೇಕೆಂದಿಲ್ಲ ತಾನೆ? ಇಷ್ಟಾಗಿಯೂ ಹೊಗೇನಕಲ್ ವಿವಾದದ ಬಗ್ಗೆ ಯಾರಿಗೆ ಎಷ್ಟು ಗೊತ್ತು? ನನಗಂತೂ ದೇವರಾಣೆಯೂ ಅದಕ್ಕೆ ಸಂಬಂಧಪಟ್ಟ ಯಾವುದೇ ಅಂಕಿಅಂಶಗಳು, ವೈಜ್ಞಾನಿಕ, ಭೌಗೋಳಿಕ ವಿಷಯಗಳು ಗೊತ್ತಿಲ್ಲ. ಹೀಗಾಗಿ ಗೊತ್ತಿಲ್ಲದ ವಿಷಯಗಳ ಬಗ್ಗೆ ನಾನು ಹೆಚ್ಚು ಮಾತನಾಡಲು ಹೋಗುವುದಿಲ್ಲ. ಇಷ್ಟಾಗಿಯೂ ಸಿನಿಮಾ ತಾರೆಯರಿಂದ ಈ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯ ಎಂದು ಭಾವಿಸುವುದೇ ತಪ್ಪು."

ವಿಷ್ಣುರವರ ಈ ಮಾತುಗಳನ್ನು ಎರಡು ರೀತಿಯಲ್ಲಿ ಅರ್ಥೈಸಿಕೊಳ್ಳಬಹುದು. ಒಂದು: ಅವರು ನಿಜವಾಗಲೂ ಪ್ರಬುದ್ಧರಾಗಿದ್ದಾರೆ. ಎರಡು: ಅವರು ಎಂದಿನಂತೆ ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದ್ದಾರೆ ಎಂದು. ಅದೆಲ್ಲ ಬದಿಗಿರಲಿ, ಆ್ಯಂಗ್ರೀ ಓಲ್ಡ್ ಮ್ಯಾನ್ ವಿಷ್ಣು ಅಷ್ಟೊಂದು ನಿರ್ಭಾವುಕರಾಗಿ ನಾಡಿನ ನೆಲ-ಜಲದ ಬಗ್ಗೆ ಮಾತನಾಡಿದ್ದು ಇದೇ ಮೊದಲ ಬಾರಿ ಎಂಬುದಂತೂ ಸತ್ಯ.

ಕಣ್ಣೀರು:

ಅದೇ ದಿನ ಸಂಜೆ ಸುಧಾರಾಣಿ ಸಹೋದರ ಮುರಳಿ ನಿರ್ದೇಶಿಸುತ್ತಿರುವ 'ಬಾ ಬೇಗ ಚಂದಮಾಮ' ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಬಂದಿದ್ದ ವಿಷ್ಣು ಅಲ್ಲಿ ತಮ್ಮ ಇನ್ನೊಂದು ಮುಖವನ್ನು ಪ್ರದರ್ಶಿಸಿದರು.

ಇತ್ತೀಚೆಗೆ ಶಿರಡಿಯಲ್ಲಿ ಹೃದಯಾಘಾತದಿಂದ ನಿಧನ ಹೊಂದಿದ ನಿರ್ದೇಶಕ ರಾಜ್ ಕಿಶೋರ್‌ರವರ ಪುತ್ರಿಗೆ 25 ಸಾವಿರ ರೂಪಾಯಿಯ ಚೆಕ್‌ಅನ್ನು 'ಬಾ ಬೇಗ ಚಂದಮಾಮ' ತಂಡದ ಪರವಾಗಿ ವಿಷ್ಣು ಹಸ್ತಾಂತರಿಸಬೇಕಾಗಿತ್ತು. ಆ ಹೆಣ್ಣುಮಗಳು ವಿಷ್ಣು ಕಡೆ ಬಂದಿದ್ದೆ ತಡ ವಿಷ್ಣು ಭಾವುಕರಾದರು. ಅವರ ಕಣ್ಣಿನಿಂದ ನೀರು ಸುರಿಯಲಾರಂಭಿಸಿತು. ಆ ಹೆಣ್ಣುಮಗಳನ್ನು ಪಕ್ಕಕ್ಕೆ ಕರೆದು ಆಕೆಯ ತಲೆ ಮೇಲೆ ಕೈ ಇಟ್ಟು ಆಶೀರ್ವದಿಸಿದರು. ಆಕೆಯನ್ನು ಪ್ರೀತಿಯಿಂದ ಆಲಂಗಿಸಿದರು. ವಿಷ್ಣು ತಾನೊಬ್ಬ ನಾಯಕ ನಟ ಎಂಬುದನ್ನೂ ಮರೆತು ಸಾರ್ವಜನಿಕವಾಗಿ ಪುಟ್ಟ ಮಕ್ಕಳಂತೆ ಬಿಕ್ಕಿ ಬಿಕ್ಕಿ ಅತ್ತರು. ತನ್ನ ಕಿಸೆಯಲ್ಲಿದ್ದ ಕರ್ಚೀಫನ್ನು ಹೊರತೆಗೆದು ಕಣ್ಣೀರೊರೆಸಿಕೊಳ್ಳುತ್ತಾ ಸುಮಾರು ಐದು ನಿಮಿಷ ಅಳುತ್ತಲೇ ಇದ್ದರು. ಇದನ್ನ ನೋಡಿ ಇಡೀ ಸಭಾಂಗಣವೇ ಸ್ತಂಭೀಭೂತವಾಗಿತ್ತು.

ಸಂಭ್ರಮ:

ಇದಾದ ಮೂರು ದಿನಗಳ ನಂತರ ತಮ್ಮ ಹೊಸ ಚಿತ್ರ 'ನಮ್ಮೆಜಮಾನರು' ಮುಹೂರ್ತದ ಸಂದರ್ಭದಲ್ಲಿ ಮತ್ತೆ ಪತ್ರಕರ್ತರಿಗೆ ವಿಷ್ಣು ಸಿಕ್ಕರು.

ಇತ್ತೀಚೆಗೆ ಯುವ ನಾಯಕರ ಭರಾಟೆಯಲ್ಲಿ ವಿಷ್ಣುವಿನಂತ ಹಿರಿಯ ಕಲಾವಿದರ ಯುಗ ಮುಗಿದೇಹೋಯಿತೆಂದೂ, ಅವರೀಗ ಬಲವಂತವಾಗಿ ನಿವೃತ್ತಿ ಹೊಂದಬೇಕೆಂದೂ ಎಲ್ಲರೂ ತರ್ಕಿಸಿದ್ದರು. ಈ ಹಿನ್ನೆಲೆಯಿಂದಾಗಿಯೇ 'ನಮ್ಮೆಜಮಾನರು' ಚಿತ್ರದ ಮುಹೂರ್ತ ಸಂತೋಷ, ಸಂಭ್ರಮ ಮತ್ತು ಉತ್ಸಾಹದಿಂದ ಕೂಡಿತ್ತು.

ಪತ್ರಕರ್ತರೊಂದಿಗೆ ಸದಾ ಲವ್ ಹೇಟ್ ಸಂಬಂಧ ಹೊಂದಿರುವ ವಿಷ್ಣು ಅಂದಿನ ಪತ್ರಿಕಾಗೋಷ್ಠಿಯಲ್ಲಿ ವೇದಿಕೆಯ ಮೇಲೆ ಕುಳಿತುಕೊಳ್ಳದೇ ಪತ್ರಕರ್ತರ ಗ್ಯಾಲರಿಯಲ್ಲಿ ಪತ್ರಕರ್ತರ ಮಧ್ಯೆ ಕುಳಿತಿದ್ದರು. ಇದು ಅವರಲ್ಲಿನ ಮತ್ತೊಂದು ಬದಲಾವಣೆಯನ್ನು ಸೂಚಿಸುತ್ತಿತ್ತು.

ಹೀಗೆ ವಿಲನ್, ವಿಷಾದ, ಕಣ್ಣೀರು ಮತ್ತು ಸಂಭ್ರಮದ ಸಂದರ್ಭಗಳು ವಿಷ್ಣುರವರ ನಾಲ್ಕು ಮುಖಗಳು ಕೆಲ ದಿನಗಳ ಅಂತರದಲ್ಲೇ ವ್ಯಕ್ತವಾದವು. ಅದೆಲ್ಲದರ ಅರ್ಥ ಇಷ್ಟೇ: ವಿಷ್ಣು ತೆರೆಯ ಮೇಲೆ ಸಾಹಸಸಿಂಹ ಆಗಿರಬಹುದು, ಇತ್ತೀಚೆಗೆ ಆಂಗ್ರಿ ಓಲ್ಡ್ ಮ್ಯಾನ್ ಕೂಡ ಆಗಿರಬಹುದು, ಆದರೆ ಅವರು ನಿಜವಾಗಲೂ ನಮ್ಮನಿಮ್ಮೆಲ್ಲರಂತ ಓರ್ವ ಸಾಮಾನ್ಯ ಮನುಷ್ಯ ಕೂಡ ಎಂಬುದು.... ■



ನಿರ್ದೇಶಕನೊಬ್ಬ ಗಡ್ಡ ಬಿಟ್ಟು, ಲುಂಗಿ ತೊಟ್ಟಿದ್ದ ಎಂಬ ಕಾರಣಕ್ಕಾಗಿ ನಟನೊಬ್ಬ ಆ ನಿರ್ದೇಶಕ ನೀಡಿದ್ದ ಅಡ್ವಾನ್ಸ್ ಹಣವನ್ನು ವಾಪಾಸ್ ಕೊಟ್ಟು ಓಡಿಬಂದ ಪ್ರಸಂಗ ಕುರಿತ ಟಿಪ್ಪಣಿ ಇದು.

ಹಿರಿಯ ನಿರ್ದೇಶಕ ಸಿದ್ದಲಿಂಗಯ್ಯನವರ ಗರಡಿಯಲ್ಲಿ ಬೆಳೆದ ಪ್ರಕಾಶ್ ತ್ರಿಶೂಲ್ ಎಂಬುವವರು ನಿರ್ದೇಶಿಸುತ್ತಿರುವ 'ನೀ ನಡೆವ ಹಾದಿಯಲ್ಲಿ' ಚಿತ್ರದ ನಾಯಕನ ಪಾತ್ರಕ್ಕೆ ದಿಲೀಪ್ ಎಂಬ ನಟನನ್ನು ಒಪ್ಪಿಸಿದ್ದರು. ಮಾತ್ರವಲ್ಲ ಆತನಿಗೆ ನಾಲ್ಕು ಲಕ್ಷದ ಸಂಭಾವನೆ ನೀಡುವುದಾಗಿ ಹೇಳಿ ಹತ್ತು ಸಾವಿರ ರೂ.ಗಳ ಅಡ್ವಾನ್ಸ್ ಚೆಕ್‌ಅನ್ನು ಸಹ ಸಿದ್ಧಪಡಿಸಿದ್ದರು.

ಆ ಚೆಕ್‌ಅನ್ನು ಸ್ವೀಕರಿಸಲು ದಿಲೀಪ್ ಅವರ ಮನೆಗೆ ಹೋದಾಗ ತ್ರಿಶೂಲ್ ಗಡ್ಡ ಬಿಟ್ಟುಕೊಂಡು, ಲುಂಗಿ ತೊಟ್ಟಿದ್ದರಂತೆ. ಅದನ್ನು ನೋಡಿ ದಂಗಾದ ದಿಲೀಪ್ ಚೆಕ್ಕನ್ನು ಸ್ವೀಕರಿಸಿ ಹೊರಬಂದ ಕೂಡಲೇ ತ್ರಿಶೂಲ್ ಅವರ ಸಹಾಯಕನನ್ನು ಕರೆದು "ಈಯಪ್ಪ ಗಡ್ಡ ಬಿಟ್ಟುಕೊಂಡು ಲುಂಗಿ ಉಟ್ಕೊಂಡವ್ನೆ. ಈ ವಯ್ಯನ್ನ ನೋಡಿದ್ರೆ ಈತ ಸಿನ್ಮಾ ಮಾಡೋ ಹಾಗೇ ಕಾಣಿಸ್ತಿಲ್ಲ. ಈ ಚೆಕ್ ತೊಗೊಂಡು ಹೋಗಿ ಆತನಿಗೇ ವಾಪಸ್ ಕೊಡಿ" ಎಂದು ಹೇಳಿ ಕಾಲುಕಿತ್ತನಂತೆ. ಈ ಬಗ್ಗೆ ದಿಲೀಪ್‌ನನ್ನು ಕೇಳಿದರೆ "ಆ ನಿರ್ದೇಶಕರ ಅಪಿಯರೆನ್ಸ್ ಚೆನ್ನಾಗಿರ್ಲಿಲ್ಲ, ಮತ್ತೆ ಮತ್ತೆ ಎಡವಬಾರದು ಅಂತ ಅಡ್ವಾನ್ಸ್ ವಾಪಸ್ ಕೊಟ್ಟೆ" ಎಂದು ಸಬೂಬು ನೀಡುತ್ತಾನೆ.

ತ್ರಿಶೂಲ್‌ರವರ ಪ್ರತಿಭೆ ಎಂತಹದ್ದು ಎಂಬುದು ಬೇರೆ ಮಾತು. ಆದರೆ ಬಿಳಿ ಬಟ್ಟೆ ಹಾಕ್ಕೊಂಡು ತಲೆ ಮೇಲೆ ಟೋಪಿ ಹಾಕ್ಕೊಂಡಿದ್ರೆ ಮಾತ್ರ ನಿರ್ದೇಶಕನಾ? ತಮಿಳಿನಲ್ಲಿ ನಿರಂತರವಾಗಿ ಹಿಟ್ ಚಿತ್ರಗಳನ್ನು ನೀಡುವ ಬಾಲಾ, ಗೌತಮ್‌ರಂಥವರು ಸದಾ ಹಳೇಬಟ್ಟೆ ಹಾಕ್ಕೊಂಡು ಗಡ್ಡಬಿಟ್ಟುಕೊಂಡಿರಲ್ವಾ? ಕ್ಯಾಮೆರಾ ಮುಂದೆ ನಟಿಸಬೇಕಿರೋದು ಹೀರೋನಾ ಅಥವಾ ಡೈರೆಕ್ಟರಾ? ಎಂಬುದೆಲ್ಲ ಈ ದಿಲೀಪನಿಗೆ ಗೊತ್ತಿರುವಂತಿಲ್ಲ.

ಅಷ್ಟಕ್ಕೂ ಈ ದಿಲೀಪ್ ಎಂಬ ಧಿಮಾಕಿನ ಹುಡುಗ ಇಲ್ಲಿಯವರೆಗೂ ನಟಿಸಿರುವುದು 'ಬಾಯ್ ಫ್ರೆಂಡ್' ಮತ್ತು 'ನನ್ ಲವ್ ಮಾಡ್ತೀಯಾ' ಎಂಬ ತೋಪು ಚಿತ್ರಗಳಲ್ಲಿ. ಅನಂತರ ಆತನಿಗೆ 'ಸವೆನ್ ಓಕ್ಲಾಕ್', 'ಕ್ಷಣ ಕ್ಷಣ' ಮತ್ತು 'ಮಿಲನ' ಚಿತ್ರಗಳಲ್ಲಿ ಸಿಕ್ಕಿದ್ದೂ ಸೈಡ್ ರೋಲ್‌ಗಳು! ಇಂತಹ ನಟನೊಬ್ಬ ಇಂತಹ ನಾಟಕ್ ಬಾಜಿ ಮಾಡುತ್ತಾನೆಂದರೆ ಅವನ ತಲೆ ಸರಿ ಇಲ್ಲ ಎಂದೇ ಹೇಳಬೇಕು.



■ 'ಟಾಟಾ-ಬಿರ್ಲಾ' ಸಂಜನಾಗಾಂಧಿ

R B P LANKESH, Kannada Weekly Price Rs. 12/- 30-4-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B...

ಹಂಗಿನ ಅರಮನೆಯೋ? ಅರಗಿನ ಅರಮನೆಯೋ?



ಯೋಗರಾಜ್ ಭಟ್ ಇಲ್ಲದೇ ಗಣೇಶನ ಚಿತ್ರ ಗೆಲ್ಲುತ್ತದೆ ಎಂಬುದನ್ನು ಸಾಬೀತು ಮಾಡಬೇಕಾದರೆ, ಮದುವೆಯ ನಂತರವೂ ಗಣೇಶನ ಬಗೆಗಿನ ಕ್ರೇಜ್ ಕಡಿಮೆಯಾಗಿಲ್ಲ ಎನ್ನುವುದು ಪ್ರೂವ್ ಆಗಬೇಕಾದರೆ 'ಅರಮನೆ' ಗೆಲ್ಲಬೇಕು. ಇದು ಗಣೇಶ್‌ನ ಮುಂದಿರುವ ಬಹುಮುಖ್ಯ ಸವಾಲು.

'ಗಾಳಿಪಟ' ಹಾರಿದ ಮೂರು ತಿಂಗಳ ನಂತರ ಗೋಲ್ಡನ್ ಸ್ಟಾರ್ ಗಣೇಶನ 'ಅರಮನೆ' ಬಿಡುಗಡೆಯಾಗುತ್ತಿದೆ. ಆದರೆ ಗಣೇಶ್‌ನ ಈ ಹಿಂದಿನ ಚಿತ್ರಗಳಿಗಿದ್ದ ಕ್ರೇಜ್ ಆಗಲಿ, ಆಸಕ್ತಿಯಾಗಲಿ ಈ ಚಿತ್ರದ ಬಗ್ಗೆ ಕಂಡುಬರುತ್ತಿಲ್ಲ.

'ಚೆಲ್ಲಾಟ' ಮತ್ತು 'ಮುಂಗಾರು ಮಳೆ'ಯ ಮೂಲಕ ಅಪಾರವಾದ ಮಹಿಳಾ ಅಭಿಮಾನಿಗಳನ್ನು ಪಡೆದ ಗಣೇಶನ ಸಿನಿಮಾಗಳು ಬಿಡುಗಡೆಯಾದರೆ ಕಾಲೇಜು ಹುಡುಗಿಯರಿಂದ ಹಿಡಿದು ಆಂಟಿಯರ ತನಕ ಎಲ್ಲರೂ ಮುಗಿಬೀಳುತ್ತಿದ್ದರು. ಆದರೆ ಈಗ ಗಣೇಶ್ ಮದುವೆಯಾಗಿದ್ದಾನೆ. ಆತನ ಮದುವೆಯ ನಂತರ ಹುಡುಗಿಯರಲ್ಲಿ ಆತನ ಬಗ್ಗೆ ಇದ್ದ ಕ್ರೇಜ್ ಕಡಿಮೆಯಾದಂತಿದೆ. ಮಹಿಳೆಯರು ಮನೆ ಬಿಟ್ಟು ಥಿಯೇಟರಿಗೆ ಬರದಿದ್ದರೆ ಗಣೇಶನ ಸಿನಿಮಾ ಗೆಲ್ಲುವುದು ಕಷ್ಟವೇ ಸರಿ ಎಂದು ಈಗ ಸ್ಪಷ್ಟವಾಗಿದೆ.

ಹಾಗೆಯೇ, ಯೋಗರಾಜ್ ಭಟ್ ಇಲ್ಲದೇ ಗಣೇಶನ ಚಿತ್ರ ಗೆಲ್ಲುತ್ತದೆ ಎಂಬುದನ್ನು ಸಾಬೀತು ಮಾಡಬೇಕಾದರೆ, ಮದುವೆಯನಂತರವೂ ಗಣೇಶನ ಬಗೆಗಿನ ಕ್ರೇಜ್ ಕಡಿಮೆಯಾಗಿಲ್ಲ ಎನ್ನುವುದು ಪ್ರೂವ್ ಆಗಬೇಕಾದರೆ 'ಅರಮನೆ' ಗೆಲ್ಲಬೇಕು. ಇದು ಗಣೇಶ್‌ನ ಮುಂದಿರುವ ಬಹುಮುಖ್ಯ ಸವಾಲು.

ಫಸ್ಟ್ ಫೀಲಿಂಗ್



ಇಂಜಿನಿಯರಿಂಗ್ ಪದವಿ ಪಡೆದಿದ್ದರೂ ನಿರ್ದೇಶಕನಾಗುವ ಹೆಬ್ಬಯಕೆಯಿಂದ ಚಿತ್ರರಂಗಕ್ಕೆ ಬಂದ ನಾಗಶೇಖರ್‌ಗೆ 'ಅರಮನೆ'ಯ ಗೆಲುವು ಮುಖ್ಯ. ಮೊದಮೊದಲು ಈ ನಾಗಶೇಖರ ಹಾಸ್ಯ ನಟನಾಗಿ ಸಣ್ಣ ಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದ. ಈ ಮಧ್ಯೆ 'ಸಂಜು ವೆಡ್ಸ್ ಗೀತಾ' ಎಂಬ ಸಿನಿಮಾ ನಿರ್ದೇಶಿಸುತ್ತೇನೆ ಎಂದಿದ್ದನಾದರೂ ಅದೇಕೋ ಆನಂತರ 'ಸಂಜು'ವಿನ ಸದ್ದೇ ಅಡಗಿಹೋಯಿತು. ಆನಂತರ "ನಾನೇ 'ಮಣಿ' ಚಿತ್ರಕ್ಕೆ ಕತೆ ಬರೆದಿದ್ದು" ಎಂದು ಹೇಳಿ ಒಂದಿಷ್ಟು ಪ್ರಚಾರ ಪಡೆದಿದ್ದ. ಇಂತಹ ನಾಗ್‌ಶೇಖರ ಈಗ ತನ್ನ ಚೊಚ್ಚಲ ನಿರ್ದೇಶನದ 'ಅರಮನೆ' ಕಟ್ಟಿ ನಿಲ್ಲಿಸಿದ್ದಾನೆ. ಈ ಸಿನಿಮಾದ ಗೆಲುವಿನ ನಾಗ್‌ಶೇಖರನ ಸಿನಿಮಾ ಭವಿಷ್ಯ ನಿಂತಿರುವುದಂತೂ ಸತ್ಯ.

ಡೇಂಜರ್ ಜೋನ್‌ನಲ್ಲಿ ಕೊಬ್ರಿ



ವಿಷ್ಣುವರ್ಧನ್‌ರ ಆಸ್ಥಾನದ ಕಾಯಂ ಸದಸ್ಯನಂತಿದ್ದ ಕೊಬ್ರಿ ಮಂಜುಗೂ ಈ ಸಿನಿಮಾ ನಿರ್ಣಾಯಕವಾಗಲಿದೆ. ಇಷ್ಟು ದಿನ ಬರೀ ಎಸ್. ನಾರಾಯಣ್ ಮತ್ತು ವಿಷ್ಣುವರ್ಧನ್‌ರ ಹಿಂದೇ ತಿರುಗುತ್ತಿದ್ದ ಕೊಬ್ರಿ ಮಂಜು ಮೊದಲ ಬಾರಿಗೆ ಹೊಸ ತಂಡದೊಂದಿಗೆ ಸಿನಿಮಾ ಮಾಡಿದ್ದಾರೆ. ಆದರೆ ಪಾಪ ಯಾಕೋ ಅವರು ಇತ್ತೀಚೆಗೆ ಮುಟ್ಟಿದ್ದೆಲ್ಲಾ ಮಣ್ಣಾಗಿದೆ. 'ಜಮೀನ್ದಾರ್ರು' ನಂತರ ಬಂದ ಯಾವ ಚಿತ್ರವೂ ಮಂಜುರನ್ನು ಉದ್ಧಾರ ಮಾಡಿಲ್ಲ. ವಿಷ್ಣುವರ್ಧನ್ ಮತ್ತು ಅವರ ಅಳಿಯ ಅನಿರುದ್ಧನನ್ನು ಹಾಕಿಕೊಂಡು 'ನೀನೆಲ್ಲೋ ನಾನಲ್ಲೆ' ಎಂಬ ಚಿತ್ರವನ್ನು ಮಾಡಿದರು. ಆದರೆ ಅಳಿಯ-ಮಾವನ ಜುಗಲ್ ಬಂಧಿಯನ್ನು ಪ್ರೇಕ್ಷಕ ಇಣುಕಿಯೂ ನೋಡಲಿಲ್ಲ. ಕೋಟಿಗಟ್ಟಲೆ ಸುರಿದು ನಾಗತಿಹಳ್ಳಿಯೊಂದಿಗೆ 'ಮಾತಾಡ್ ಮಾತಾಡ್ ಮಲ್ಲಿಗೆ' ಮಾಡಲು ಹೊರಟಾಗ "ಚಿತ್ರ ಬಿಡುಗಡೆಯಾದ ಮೇಲೆ ಮಂಜು ಅವರು ಹತ್ತುಬೆರಳಿಗೂ ಉಂಗುರ ಹಾಕುವಂತೆ ಆಗುತ್ತದೆ" ಎಂದು ನಾಗ್ತಿ ಭವಿಷ್ಯ ನುಡಿದಿದ್ದರು. ಆದರೆ ಚಿತ್ರ ಬಿಡುಗಡೆಯ ನಂತರ ಇದ್ದ ಉಂಗುರವನ್ನೂ ಕಳೆಚುವಂತಾಯಿತು. ನಿರ್ಮಾಪಕನಾಗಿ ಸದ್ಯ ಡೇಂಜರ್ ಜೋನ್‌ನಲ್ಲಿರುವ ಕೊಬ್ರಿ ಮಂಜು ಚಿತ್ರರಂಗದಲ್ಲಿ ಉಳಿಯಬೇಕಾದರೆ ಈ ಚಿತ್ರ ಗೆಲ್ಲಲೇಬೇಕು.

ಪ್ರೀತಂನ ಪ್ರೇಂ ವರ್ಕ್



'ಮುಂಗಾರು ಮಳೆ' ಚಿತ್ರದ ಕತೆ ಬರೆದು ಏಕ್‌ದಂ ಫೇಮಸ್ ಆದ ಪ್ರೀತಂ ಗುಬ್ಬಿಗೂ ಈ ಚಿತ್ರ ಗೆಲ್ಲಬೇಕಾದ ತುರ್ತಿದೆ. 'ಮುಂಗಾರು ಮಳೆ'ಯ ನಂತರ ಬಂದ 'ಗೆಳೆಯ' ಚಿತ್ರಕ್ಕೆ ಇದೇ ಪ್ರೀತಂ ಚಿತ್ರಕತೆ ಬರೆದಿದ್ದರು. ಆದರೆ ಚಿತ್ರ ಸೋತ ನಂತರ 'ಗೆಳೆಯ' ನಿರ್ದೇಶಕ ಹರ್ಷ "ಪ್ರೀತಂ ಕೈಲಿ ಚಿತ್ರಕತೆ ಬರೆಸಿದ್ದಕ್ಕೇ ಚಿತ್ರ ಫೇಲ್ಯೂರ್ ಆಯಿತು" ಎಂದು ಹೇಳಿ ಗುಬ್ಬಿಯ ಮೇಲೆ ಗೂಬೆ ಕೂರಿಸಿದ್ದರು. ಒಂದು ವೇಳೆ 'ಅರಮನೆ' ಕುಸಿದರೆ ಹರ್ಷ ಮಾಡಿದ ಆರೋಪ ಸತ್ಯವಾಗುತ್ತದೆ. ಸದ್ಯ ನಿರ್ದೇಶನಕ್ಕೂ ಇಳಿದು 'ಹಾಗೆ ಸುಮ್ಮನೆ' ಎನ್ನುತ್ತಿರುವ ಪ್ರೀತಂಗೂ 'ಅರಮನೆ'ಯ ಗೆಲುವು ಅನಿವಾರ್ಯವೇ.

ಗೂನ ಆದ ನಗು

'ಅರಮನೆ' ಚಿತ್ರದ ಆಡಿಯೋ ರಿಲೀಸ್ ಆಗಿ ಒಂದು ತಿಂಗಳಾಗಿದ್ದರೂ ಅದರ ಯಾವ ಹಾಡೂ ಪ್ರೇಕ್ಷಕರ ಬಾಯಲ್ಲಿ ಗುನುಗುತ್ತಿಲ್ಲ. 'ನಗು ನಗು ನಗು' ಎಂಬ ಹಾಡಂತೂ 'ಗೂನ ಗೂನ' ಎಂದು ಅಭಾಸವಾಗಿ ಭಾಸವಾಗುತ್ತಿದೆ. ಈ ಹಾಡುಗಳಿಗೆ ಟ್ಯೂನ್ ಮಾಡಲು ಗುರುಕಿರಣ್ ಅದೇಕೆ ಆರು ತಿಂಗಳು ಸಮಯ ತೆಗೆದುಕೊಂಡರೋ ಆ ಗುರುವೇ ಬಲ್ಲ.

ಹರಿಶ್ಚಂದ್ರನ ಮುಂದೆ ಅರಮನೆ

ಇತ್ತ ಕೊಬ್ರಿ ಮಂಜು ಯುವಕರೊಡನೆ 'ಅರಮನೆ' ಕಟ್ಟಿದ್ದರೆ, ಅತ್ತ ವಯೋವೃದ್ಧ ಕೆ.ಸಿ.ಎನ್. ಗೌಡರು ಹಳೇ ಹರಿಶ್ಚಂದ್ರನಿಗೆ ಬಣ್ಣ ಬಳಿದುತಂದು ನಿಲ್ಲಿಸಿದ್ದಾರೆ. 'ಹರಿಶ್ಚಂದ್ರ' ಕೂಡ ರಾಜ್ಯಾದ್ಯಂತ 30 ಕೇಂದ್ರಗಳಲ್ಲಿ ಬಿಡುಗಡೆಯಾಗುತ್ತಿರುವುದರಿಂದ 'ಹರಿಶ್ಚಂದ್ರ' 'ಅರಮನೆ'ಗೆ ಅಡ್ಡಿ ಮಾಡುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಯಾಕೆಂದರೆ ಡಾ. ರಾಜ್ ನಿಧನರಾದ ಮೇಲೆ ಬಿಡುಗಡೆಗೊಳ್ಳುತ್ತಿರುವ ರಾಜ್ ಅಭಿನಯದ ಮೊದಲ ಚಿತ್ರ ಇದಾಗಿದೆ.

ಒಟ್ಟಾರೆ 'ಅರಮನೆ'ಯ ಗೆಲುವು ಈ ತಂಡದ ಎಲ್ಲರಿಗೂ ಅತ್ಯವಶ್ಯಕವಾಗಿದೆ. ಇದೇ ಶುಕ್ರವಾರ ಬಿಡುಗಡೆಯಾಗುವ 'ಅರಮನೆ' ಎಲ್ಲದಕ್ಕೂ ಉತ್ತರ ನೀಡಲಿದೆ. ಅಲ್ಲೀತನಕ ಕಾಯುವ ತಾಳ್ಮೆ ಪ್ರೇಕ್ಷಕ ಪ್ರಭುಗಳಿಗೆ ಬೇಕಷ್ಟೆ.

■ ಅರುಣ್.ಜಿ



ಬಾಲ್ಕನಿ ಬಾದ್‌ಶಾ



ಎರಡು ವಾರಗಳ ಹಿಂದೆ ಬಿಡುಗಡೆಯಾದ ರಮೇಶ್ ಅರವಿಂದ್ ನಿರ್ದೇಶನದ 'ಆ್ಯಕ್ಸಿಡೆಂಟ್' ಚಿತ್ರ, 'ಲಂಕೇಶ್' ಅಭಿಪ್ರಾಯ ಪಟ್ಟಂತೆ ಬರೀ ಸಾಫ್ಟ್‌ವೇರ್ ವಲಯದವರನ್ನು ಮಾತ್ರ ಆಕರ್ಷಿಸುತ್ತಿದೆ. ಈ ವಿಷಯವನ್ನು ಸ್ವತಃ ಆ ಚಿತ್ರದ ನಿರ್ಮಾಪಕ ರಘುನಾಥ್ ಅವರೇ ಒಪ್ಪಿಕೊಂಡಿದ್ದಾರೆ. ಈ ಚಿತ್ರ ಪ್ರದರ್ಶನಗೊಳ್ಳುತ್ತಿರುವ ಚಿತ್ರಮಂದಿರಗಳಲ್ಲಿ ಬರೀ ಬಾಲ್ಕನಿ ಮಾತ್ರ ತುಂಬಿದ್ದು ಸೆಕೆಂಡ್ ಕ್ಲಾಸ್‌ನಲ್ಲಿ ಬರೀ ಸೊಳ್ಳೆಗಳೇ ಇವೆಯಂತೆ. ಈ ಕಾರಣಕ್ಕೇ ರಘುನಾಥ್‌ರವರು ರಮೇಶ್‌ಗೆ 'ಬಾಲ್ಕನಿ ಬಾದ್‌ಶಾ' ಎಂಬ ಬಿರುದನ್ನೂ ನೀಡಿದ್ದಾರಂತೆ!

ಮತ್ತದೇ ಕ್ಲಾಶ್?



ವಿಜಯರಾಘವೇಂದ್ರನಿಗೆ ತನ್ನ ಚಿತ್ರಕ್ಕೆ ತನ್ನ ಚಿತ್ರವೇ ಪೈಪೋಟಿ ನೀಡುವ ಪ್ರಸಂಗ ಮತ್ತೆ ಎದುರಾಗುವ ಪರಿಸ್ಥಿತಿ ಕಂಡುಬರುತ್ತಿದೆ. ಫಣಿ ರಾಮಚಂದ್ರ ನಿರ್ದೇಶನದ 'ಗಣೇಶ ಮತ್ತೆ ಬಂದ' ಮತ್ತು 'ಸೈನೈಡ್' ರಮೇಶ್ ನಿರ್ದೇಶನದ 'ಮಿಂಚಿನ ಓಟ' ಈ ಎರಡೂ ಚಿತ್ರಗಳು ಒಂದೇ ಬಾರಿ ತೆರೆಗೆ ಬರುವ ಸಾಧ್ಯತೆಗಳಿವೆ.

ಮೂರು ತಿಂಗಳ ಹಿಂದೆ ವಿಜಯರಾಘವೇಂದ್ರ ನಟಿಸಿದ್ದ 'ಬೆಳದಿಂಗಳಾಗಿ ಬಾ' ಮತ್ತು 'ನಾನು ನೀನು ಜೋಡಿ' ಚಿತ್ರಗಳೂ ಏಕಕಾಲದಲ್ಲಿ ಬಿಡುಗಡೆಯಾಗಿ ಒಂದಕ್ಕೊಂದು ಪೈಪೋಟಿ ನೀಡಿ ಎರಡೂ ಬಾಕ್ಸ್ ಆಫೀಸಿನಲ್ಲಿ ನೆಲಕಚ್ಚಿದ್ದವು. ಈಗ ಮತ್ತದೇ ಕ್ಲಾಶ್ ಸಂಭವಿಸುವಂತೆ ಕಾಣುತ್ತಿರುವುದು ವಿಜಯರಾಘವೇಂದ್ರನ ಪಾಲಿಗೆ ನುಂಗಲಾರದ ತುತ್ತಾಗಿದೆ.

ಹಾರ್ಲಿಕ್ಸ್ ಪೋರ



'ತಾರೆ ಜಮೀನ್ ಪರ್' ಚಿತ್ರದ ಮೂಲಕ ಭಾರತದಾದ್ಯಂತ ಮನೆ ಮಾತಾದ ದರ್ಶೀಲ್ ಎಂಬ ಉಬ್ಬುಹಲ್ಲಿನ ಹುಡುಗ ಈಗ ಜಾಹೀರಾತು ಲೋಕಕ್ಕೂ ಲಗ್ಗೆ ಇಟ್ಟಿದ್ದಾನೆ. ಹಾರ್ಲಿಕ್ಸ್‌ನ ಬ್ರ್ಯಾಂಡ್ ಅಂಬಾಸಿಡರ್ ಆಗಿ ದರ್ಶೀಲ್ ಆಯ್ಕೆಗೊಂಡಿದ್ದಾನೆ. ಅನಿಲ್ ಕುಂಬ್ಳೆ, ಗಂಗೂಲಿಯಂಥ ಕ್ರಿಕೆಟ್ ಸ್ಟಾರ್‌ಗಳಿಗೆ ಕೋಟ್ಯಂತರ ರೂಪಾಯಿ ಸಂಭಾವನೆ ನೀಡಿ ಅವರನ್ನು ತಮ್ಮ ಜಾಹೀರಾತುಗಳಿಗೆ ಬಳಸಿಕೊಳ್ಳುತ್ತಿದ್ದ ಹಾರ್ಲಿಕ್ಸ್ ಕಂಪನಿ ಈಗ ಈ ಪುಟ್ಟ ಪೋರನನ್ನು ಬಳಸುತ್ತಿರುವುದು ವಿಶೇಷವೇ ಸರಿ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667...
Fax : 26604536, E-mail :lankesh70@rediffmail.com, Printed at Rajhans Enterprises, # 134, 4th M...